# ಕರ್ನಾಟಕ ರಾಜ್ಯ ಕ್ರೀಡಾ ನೀತಿ 2018

## ಕ್ರೀಡೆ ಎಂದರೆ ಕರ್ನಾಟಕ

## ವಿಷಯಗಳ ತಃಖ್ತೆ

1. ಪರಿಚಯ

2. ಸ್ಥಂಭ –1: ಆಡಳಿತ ಮತ್ತು ಸಂಸ್ಥೆಗಳು

3. ಸ್ಥಂಭ – 2: ಕ್ರೀಡಾ ಪರಿಸರ ವ್ಯವಸ್ಥೆ

4. ಸ್ಥಂಭ – 3: ಕ್ರೀಡಾ ಭೌತಿಕ ಮೂಲಭೂತ ಸೌಕರ್ಯಗಳು

5. ಸ್ಥಂಭ – 4: ಮಾನವೀಕ ಸೌಲಭ್ಯಗಳು

6. ಉದ್ದೇಶಿತ ಸಂಪನ್ಮೂಲ ಮತ್ತು ಯೋಜನೆ

7. ಅನುಸೂಚಿ–1

## 1. ಪರಿಚಯ

1. ದೃಷ್ಟಿ
2. ನೀತಿಯ ಮೌಲ್ಯಗಳು
3. ಉದ್ದೇಶಗಳು
4. ದೃಷ್ಟಿ 2030 – 4 ಸ್ಥಂಭಗಳು ಮತ್ತು 16 ಗುರಿಗಳು.

1.1. ಕ್ರೀಡೆ ತನ್ನ ಆರ್ಥಿಕ, ಸಾಮಾಜಿಕ, ದೈಹಿಕ ಮತ್ತು ವೈಯಕ್ತಿಕ ಕಾರಣಗಳಿಂದಾಗಿ ರಾಜ್ಯದ ನಾಗರೀಕರನ್ನು ಆರೋಗ್ಯವಾಗಿ ಮತ್ತು ಶಕ್ತಿವಂತರನ್ನಾಗಿಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಾಜ್ಯದಲ್ಲಿನ ಜನಸಂಖ್ಯೆಯು ಸಾಮಾಜಿಕವಾಗಿ ಬೆರೆತು ಅವರಲ್ಲಿ ಉತ್ತಮ ಬಾಂಧವ್ಯವನ್ನು ಉಂಟು ಮಾಡಲು ಸಹಕಾರಿಯಾಗಿದೆ. ಕ್ರೀಡೆಯಲ್ಲಿ ಭಾಗವಹಿಸುವುದು ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಹಲವಾರು ರೀತಿಯ ಸಕಾರಾತ್ಮಕ ಪರಿಣಾಮವನ್ನು ಉಂಟು ಮಾಡುತ್ತದೆ. ಕ್ರೀಡೆಯಲ್ಲಿ ಅತ್ಯುತ್ತಮ ಯಶಸ್ಸು ಗಳಿಸುವುದರಿಂದ ಹೆಮ್ಮೆ ಮತ್ತು ವಿಶ್ವಾಸವನ್ನು ಮೂಡಿಸುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಒಂದು ಉತ್ತಮವಾದ ಕ್ರೀಡಾ ನೀತಿಯನ್ನು ರೂಪಿಸಲು ಇಚ್ಛಿಸಿದ್ದು, ಈ ಮೂಲಕ ಹಲವಾರು ದೃಷ್ಟಿಕೋನದಿಂದ ಅತ್ಯುತ್ತಮವಾದ ಕ್ರೀಡಾ ಸಂಸ್ಕೃತಿಯ ಬೆಳವಣಿಗೆಯ ಭರವಸೆಯನ್ನು ಒದಗಿಸುತ್ತದೆ.

1.2. ಕರ್ನಾಟಕದ ಶ್ರೀಮಂತ ಕ್ರೀಡಾ ಸಂಸ್ಕೃತಿಯ ಹಿನ್ನೆಲೆಯಲ್ಲಿ, ಕ್ರೀಡಾ ನೀತಿಯು ಪ್ರಸ್ತುತ ರಾಜ್ಯವು ಹೊಂದಿರುವ ಸಾಮರ್ಥ್ಯ ಮತ್ತು ಸ್ಪರ್ಧಾತ್ಮಕತೆಯ ಅನುಕೂಲಗಳನ್ನು ಬಳಸಿಕೊಳ್ಳಲು ಇಚ್ಛಿಸುತ್ತದೆ. ಕರ್ನಾಟಕ ರಾಜ್ಯವು ದೇಶದ ಸರಾಸರಿಗಿಂತ ಶೇಕಡಾವಾರು ಹೆಚ್ಚಿನ ಸಾಕ್ಷರತೆ, ವಿದ್ಯಾವಂತ ಜನಸಂಖ್ಯೆ ಮತ್ತು ಸೂಕ್ತ ಮಾಹಿತಿಯುಳ್ಳ ಯುವ ಪೀಳಿಗೆಯನ್ನು ಹೊಂದಿರುವ ರಾಜ್ಯವಾಗಿರುತ್ತದೆ. ಈ ರಾಜ್ಯವು ಸಂಶೋಧನಾ ಸಂಸ್ಕೃತಿ, ಉತ್ತಮ ಔದ್ಯೋಗಿಕ ಮತ್ತು ವೃತ್ತಿಪರ ಸಂಸ್ಥೆಗಳು ಮತ್ತು ಉನ್ನತ ವ್ಯಾಸಂಗಕ್ಕೆ ಅತ್ಯುತ್ತಮವಾದ ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿರುತ್ತದೆ. ಕರ್ನಾಟಕದ ಕ್ರೀಡಾ ನೀತಿಯು ಈ ಎಲ್ಲ ಧನಾತ್ಮಕ ಅಂಶಗಳನ್ನು ಬಳಸಿಕೊಂಡು ಕ್ರೀಡಾ ಸಂಸ್ಕೃತಿಯನ್ನು ಬೆಳೆಸುವ ಹಾಗೂ ಅತ್ಯುತ್ತಮ ಪ್ರದರ್ಶನ ನೀಡುವ ನಿಟ್ಟಿನಲ್ಲಿ ಮುನ್ನಡೆ ಇಡಲಿದೆ.

1.3. ಕ್ರೀಡೆಯು ರಾಜ್ಯದ ನೀತಿ, ಯೋಜನೆ ಮತ್ತು ಕಾರ್ಯಕ್ರಮಗಳ ವಿಷಯಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಇತ್ತೀಚಿನ ಉದಾಹರಣೆಯೆಂದರೆ ಕರ್ನಾಟಕ ರಾಜ್ಯ ಯುವ ನೀತಿ 2012. ಭಾರತ ಸರ್ಕಾರದ ಯುವ ಜನ ಹಾಗೂ ಕ್ರೀಡಾ ವ್ಯವಹಾರಗಳ ಮಂತ್ರಾಯಲವು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಗೆ ಸಂಬಂಧಪಟ್ಟಂತೆ ಕೆಲವು ನೀತಿ ಮತ್ತು ನಿಯಮಗಳನ್ನು ರೂಪಿಸಿರುತ್ತದೆ. ಇವುಗಳು ವಿಶೇಷವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಯನ್ನು ವೈಜ್ಞಾನಿಕವಾಗಿ, ಸ್ಪರ್ಧಾತ್ಮಕವಾಗಿ ಮತ್ತು ವೃತ್ತಿಪರವಾಗಿಸಲು

ಸಂಬಂಧಿಸಿದ್ದಾಗಿದ್ದು, ಮತ್ತೊಂದು ಕಡೆ ಭಾರತದ ದೇಶದ ಸಾಮಾನ್ಯ ಜನರ ನಡುವೆ ಇವುಗಳನ್ನು ಹೆಚ್ಚಿಸುವ ಅವಶ್ಯಕತೆ ಇರುತ್ತದೆ.

ಎ. ದೃಷ್ಟಿ

1.4. ಉದ್ದೇಶಿತ ಕರ್ನಾಟಕ ರಾಜ್ಯದ ಕ್ರೀಡಾ ನೀತಿಯ ದೃಷ್ಟಿ ಏನೆಂದರೆ "ಕರ್ನಾಟಕ ರಾಜ್ಯದಲ್ಲಿ ಒಂದು ಸ್ಪರ್ಧಾತ್ಮಕ, ಸೂಕ್ತ, ಶಕ್ತಿಯುತವಾದ ವಾತಾವರಣವನ್ನು ನಿರ್ಮಾಣ ಮಾಡಿ ಕರ್ನಾಟಕದ ಜನತೆ ವಿಶಾಲ ಕ್ರೀಡಾ ಸಂಸ್ಕೃತಿಯ ಅನುಭವವನ್ನು ಪಡೆಯುವುದಾಗಿದೆ ಮತ್ತು ಆರ್ಥಿಕ ವ್ಯವಸ್ಥೆಯನ್ನು ಸ್ವತಃ ನಿರ್ವಹಿಸಲು ಮತ್ತು ಆಟವಾಡಲು ಬಯಸುವ ಎಲ್ಲರೂ ಅವುಗಳನ್ನು ಅನುಭವಿಸಲು ಒಂದು ಸೂಕ್ತವಾದ ವೇದಿಕೆಯನ್ನು ಸೃಷ್ಟಿಸುವುದಾಗಿದೆ.

1.5. ಕರ್ನಾಟಕ ಕ್ರೀಡಾ ನೀತಿಯು ಒಂದು ಕ್ರೀಡಾ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವ, ಕರ್ನಾಟಕ ರಾಜ್ಯದ ಸಹಯೋಗದೊಂದಿಗೆ, ನಾಲ್ಕು ಪ್ರಮುಖ ಗುರಿಗಳನ್ನು ವಿಶಾಲವಾದ ಅಡಿಪಾಯವನ್ನು ಒದಗಿಸಿ 'ಅವಕಾಶ ಒದಗಿಸುವುದು' ಮತ್ತು 'ಅನುಕೂಲತೆ', 'ಸಹಕರಿಸು' ಮತ್ತು 'ಬಹುಮಾನ' ಎಂಬ ಹಂತಗಳಲ್ಲಿ ರೂಪಿಸುವುದಾಗಿರುತ್ತದೆ.

1. ಅವಕಾಶ: ಕರ್ನಾಟಕದ ಪ್ರತಿಯೊಬ್ಬ ನಿವಾಸಿಗೂ ಆತನ/ಆಕೆಯ ಆಯ್ಕೆಯ ಕ್ರೀಡೆಯಲ್ಲಿ ಭಾಗವಹಿಸಿ ಅನುಭವ ಪಡೆಯಲು ಅವಕಾಶವನ್ನು ಒದಗಿಸುವುದು.

2. ಅನುಕೂಲತೆ: ಅಗತ್ಯವಾದ ಮೂಲ ಸೌಲಭ್ಯಗಳನ್ನು ಒದಗಿಸುವುದು ಮತ್ತು ತಮ್ಮ ಇಷ್ಟದ ಕ್ರೀಡೆಯಲ್ಲಿ ಯಾವ ರೀತಿಯಲ್ಲಿ ಉನ್ನತ ಸಾಧನೆಯ ಮೆಟ್ಟಿಲುಗಳನ್ನು ಏರಲು ಸಾಧ್ಯ ಎಂಬುದನ್ನು ತಿಳಿಸಿಕೊಡುವುದು. ಇದು ಅವರುಗಳಿಗೆ ಒಂದು ಸರಳವಾದ ಮತ್ತು ಕಠಿಣವಾದ ಮಾಗವನ್ನು ಸ್ಪರ್ಧಾತ್ಮಕ ಮಟ್ಟದಲ್ಲಿ ಭಾಗವಹಿಸಲು ಶಕ್ತರನ್ನಾಗಿಸುವುದು.

3. ಮಾನ್ಯತೆ: ಅಥ್ಲೀಟ್‌ಗಳು ಮತ್ತು ತರಬೇತುದಾರರ ಪ್ರತಿಭೆಗಳನ್ನು ಗುರುತಿಸಿ ಅಭಿನಂದಿಸಿ, ಮಾನ್ಯತೆ ನೀಡಿ ಬಹುಮಾನಗಳನ್ನು ನೀಡುವುದರ ಮೂಲಕ ಉತ್ತೇಜಿಸುವುದು ಮತ್ತು ಇದರಿಂದ ಅವರಿಗೆ ಸ್ವತಃ ತಮಗೆ ಹಾಗೂ ಕರ್ನಾಟಕ ರಾಜ್ಯಕ್ಕೆ ಹೆಮ್ಮೆಯನ್ನು ತರುವುದು.

4. ಹಕ್ಕು: ಕ್ರೀಡಾಪಟುಗಳಿಗೆ ಸೂಕ್ತವಾದ ವೇದಿಕೆಯನ್ನು ಸೃಷ್ಟಿಸಿ ಅವರುಗಳ ಉನ್ನತ ಸಾಧನೆಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಿ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾವಗಹಿಸುವಂತೆ ಮಾಡಿ ಆರ್ಥಿಕ-ವ್ಯವಸ್ಥೆಯನ್ನು ಹೊಂದುವುದು.

ನಿಯಮಗಳ ಮೌಲ್ಯಗಳು:

1.6. ಕರ್ನಾಟಕ ಕ್ರೀಡಾ ನೀತಿಯು ನಾಲ್ಕು ಮೌಲ್ಯಗಳ ಮೇಲೆ ನಿರ್ಮಾಣಗೊಂಡಿದೆ.

1. ಪ್ರಮುಖವಾಗಿ "ಉನ್ನತಿಗಾಗಿ ಕ್ರೀಡೆ", "ಕ್ರೀಡಾ ಸಂಸ್ಕೃತಿ" ಮತ್ತು 'ಪ್ರಗತಿ ಹೊಂದುತ್ತಿರುವ ಕರ್ನಾಟಕ".

2. "ಉನ್ನತಿಗಾಗಿ ಕ್ರೀಡೆ"ಯು ಉನ್ನತಿಗಾಗಿ ಕ್ರೀಡೆಯಂತೆಯೇ ಸಮಾನವಾದ ಒತ್ತು ನೀಡಲಾಗಿದೆ; ಮತ್ತು ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮವಾದ ಬೆಳವಣಿಗೆಯನ್ನು ಕಾಣಲು ಅಗತ್ಯವಾದ ಸಹಾಯ ಮತ್ತು ಮಾರ್ಗವನ್ನು ತೋರಿಸುವುದಾಗಿದೆ.

3. "ಕ್ರೀಡಾ ಸಂಸ್ಕೃತಿ"ಯನ್ನು ಬೆಳೆಸಲು ಉತ್ತಮತೆ ಮತ್ತು ಅವಕಾಶಗಳನ್ನು ಒದಗಿಸುವುದು ಸಹಕಾರಿಯಾಗುತ್ತದೆ ಮತ್ತು ರಾಜ್ಯದಲ್ಲಿ ಕ್ರೀಡಾ ಸಂಸ್ಥೆಗಳನ್ನು ಬೆಳೆಸಲು ಮತ್ತು ಎಲ್ಲಾ ಕ್ರೀಡಾಸಕ್ತ ವಿದ್ಯಾರ್ಥಿಗಳು, ಅವರ ಪೋಷಕರು, ಶಾಲೆಗಳು ಮತ್ತು ಇತರೆ ಸಂಘಸಂಸ್ಥೆಗಳು ಮತ್ತು ಕಾರ್ಪೋರೇಟ್ ಸಂಸ್ಥೆಗಳನ್ನು ಬಲಪಡಿಸುವುದಾಗಿದೆ.

4. ಕ್ರೀಡಾ ಸಂಸ್ಕೃತಿಯನ್ನು "ಕ್ರೀಡಾ ಆರ್ಥಿಯ ವ್ಯವಸ್ಥೆ"ಯ ಮೂಲಕ ಜಾರಿಗೊಳಸಬಹುದಾಗಿದ್ದು, ಇದನ್ನು ಸಾಮಾಜಿಕ ಮತ್ತು ಕ್ರೀಡಾ ಕೈಗಾರಿಕೆಗಳು, ಕ್ರೀಡಾ ಶಿಕ್ಷಣ ಮತ್ತು ಕ್ರೀಡಾ ಉದ್ಯಮದಿಂದ ಸಾಧಿಸಬಹುದಾಗಿದೆ.

ಉದ್ದೇಶಗಳು:

1.7 ಕರ್ನಾಟಕ ರಾಜ್ಯದ ಕ್ರೀಡಾ ನೀತಿಯ ಒಟ್ಟಾರೆ ಉದ್ದೇಶವೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಕ್ರೀಡೆಯ ಪ್ರಚಾರ, ಅಭಿವೃದ್ಧಿ, ಮತ್ತು ಪಾರದರ್ಶಕ ಆರ್ಥಿಕ ವ್ಯವಸ್ಥೆ, ತಾಂತ್ರಿಕತೆ, ಕ್ರೀಡಾ ಜ್ಞಾನ ಇವುಗಳನ್ನು ಬೆಳೆಸುವುದಾಗಿದೆ.

ಮತ್ತು ಪ್ರಮುಖ ಉದ್ದೇಶವೆಂದರೆ ಕರ್ನಾಟಕದಲ್ಲಿ ಬೆಳೆದ ಅಥ್ಲೀಟ್‌ಗಳು ಕನಿಷ್ಟ 4 ಚಿನ್ನದ ಪದಕಗಳನ್ನು ಒಲಪಿಂಕ್ಸ್/ಪ್ಯಾರಾಲಂಪಿಕ್ಸ್‌ನಲ್ಲಿ ಜಯಿಸುವುದು; ಮತ್ತು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪ್ರತಿ ಬಾರಿಯೂ ಮೊದಲ 3ನೇ ಸ್ಥಾನ ಗಳಸುವುದು (ಒಟ್ಟು ಪದಕಗಳ ಲೆಕ್ಕದಲ್ಲಿ).

ಇದನ್ನು ಸಾಧಿಸುವ ನಿಟ್ಟಿನಲ್ಲಿ, ಕ್ರೀಡಾ ನೀತಿಯು ಈ ಕೆಳಕಂಡ ಅಂಶಗಳ ಬಗ್ಗೆ ಗಮನಹರಿಸಬೇಕಿದೆ.

1. ಮಕ್ಕಳು, ಯುವಜನರು, ಆರ್ಥಿಕವಾಗಿ ಹಿಂದುಳಿದವರು, ಮಹಿಳೆಯರು, ಪುರುಷರು ಮತ್ತು ಎಲ್ಲಾ ವರ್ಗದವರು, ಉನ್ನತೀಕರಿಸಿದ ಸವಲತ್ತು, ಸೌಲಭ್ಯ, ಸಲಕರಣೆ, ಜ್ಞಾನ, ಸ್ಥಳ

ಇವುಗಳ ಮೂಲಕ ಸ್ಪರ್ಧೆಗಳಲ್ಲಿ ಭಾಗವಹಿಸುವಂತಹ ಒಂದು ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡುವುದು.

2. ಖಾಸಗಿ ಮತ್ತು ಸಾರ್ವಜನಿಕ ಭಾಗವಹಿಸುವಿಕೆಗಾಗಿ ವೇದಿಕೆಯನ್ನು ಸೃಷ್ಟಿಸುವುದು.

3. ಅಂತರಾಷ್ಟ್ರೀಯ ಗುಣಮಟ್ಟದ ಆಡಳಿತ, ಕ್ರೀಡಾ ವ್ಯವಸ್ಥೆ, ಕ್ರೀಡಾ ಸಮಾನತೆ ಮತ್ತು ಕ್ರೀಡಾ ಒಕ್ಕೂಟ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು.

4. ಮಾನ್ಯತೆ/ಬಹುಮಾನ ಯೋಜನೆ ಮತ್ತು ನೀತಿಗಳಲ್ಲಿ ಅಗತ್ಯವಾದ ವಿಧಾನಗಳನ್ನು ಪರಿಚಯಿಸುವುದು.

5. ಕ್ರೀಡಾ ಸಂಬಂಧಿತವಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಉತ್ತೇಜಿಸುವುದು.

6. ರಾಜ್ಯವನ್ನು ಅಂತರಾಷ್ಟ್ರೀಯ ಕ್ರೀಡಾ ಹಬ್, ಕ್ರೀಡಾ ಉದ್ದಿಮೆ, ಕ್ರೀಡಾ ವಿಜ್ಞಾನ, ಕ್ರೀಡಾ ಔಷಧ ಮತ್ತ ಕ್ರೀಡಾ ತಾಂತ್ರಿಕತೆಗೆ ಕೊಂಡೊಯ್ಯುವುದು.

ಗುರಿ 2030 – ನಾಲ್ಕು ಸ್ಥಂಭಗಳು ಮತ್ತು 17 ಗುರಿಗಳು.

1.8. ಕರ್ನಾಟಕ ರಾಜ್ಯದ ಕ್ರೀಡಾ ನೀತಿಯು 12 ವರ್ಷಗಳ ಅವಧಿಯ –ZÈ¶PÆÃ£-2030 ಹೊಂದಿದ್ದು, ಇದರಲ್ಲಿ ದೀರ್ಘಾವಧಿ, ಅಲ್ಪಾವಧಿ ಕಾರ್ಯಕ್ರಮಗಳು, ನಿರ್ಧಿಷ್ಟವಾದ ಗುರಿ, ಸಾಧಿಸಬಹುದಾದ ವಿಷಯಗಳು, ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಗುರಿಗಳನ್ನು ಹೊಂದಿರುತ್ತದೆ. ಮೌಲ್ಯ ಮತ್ತು ಉದ್ದೇಶಗಳ ಆಧಾರದ ಮೇಲೆ, ಅಂತರಾಷ್ಟ್ರೀಯ ಗುಣಮಟ್ಟದ ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ನಾಲ್ಕು ಸ್ಥಂಭಗಳನ್ನು ಅಳವಡಿಸಿಕೊಂಡಿದ್ದು ಅವುಗಳೆಂದರೆ;

1. ಆಡಳಿತ ಮತ್ತು ಸಂಸ್ಥೆಗಳು
2. ಕ್ರೀಡಾ ಪರಿಸರ ವ್ಯವಸ್ಥೆ
3. ಭೌತಿಕ ಕ್ರೀಡಾ ಮೂಲಭೂತ ಸೌಕರ್ಯಗಳು
4. ಮಾನವೀಕ ಸೌಲಭ್ಯಗಳು

1.9 ಕರ್ನಾಟಕದ ಕ್ರೀಡಾ ನೀತಿಯು 2030ರ ಒಳಗಾಗಿ 17 ಗುರಿಗಳನ್ನು ಸಾಧಿಸುವ ಆಶಯವನ್ನು ಮತ್ತು ರಾಜ್ಯದಲ್ಲಿ ಕ್ರೀಡೆಯನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿರುತ್ತದೆ ಅಲ್ಲದೇ, ವಿಶೇಷವಾಗಿ ಕ್ರೀಡೆಯನ್ನು ಅಭಿವೃದ್ಧಿಪಡಿಸುವುದು ಮತ್ತು ಸಾಮಾಜಿಕವಾಗಿ ಆರೋಗ್ಯಕರ ಬೆಳವಣಿಗೆಯನ್ನು ಮಾಡುವುದಾಗಿದೆ.

1.10 ಕರ್ನಾಟಕ ರಾಜ್ಯವು ಸಮಗ್ರ ಕರ್ನಾಟಕ ಕ್ರೀಡಾ ನೀತಿಯನ್ನು ರೂಪಿಸಿ ನಿರ್ದಿಷ್ಟ ಗುರಿಗಳನ್ನು ಸಾಂಸ್ಥಿಕ ಮತ್ತು ಆಡಳಿತ ವ್ಯವಸ್ಥೆಗಳನ್ನು ಬಲಪಡಿಸುವ ಮೂಲಕ ಸಾಧಿಸುವುದಾಗಿದೆ.. ಕ್ರೀಡಾ ನೀತಿಯು ರಾಷ್ಟ್ರೀಯ ನೀತಿಗಳು, ಹಲವಾರು ಸಂಘ ಸಂಸ್ಥೆಗಳ ಮತ್ತು ನ್ಯಾಯಾಲಯದ ತೀರ್ಮಾನಗಳಿಗೆ ಪೂರಕವಾಗಿರಲಿದೆ.

ಆಡಳಿತ ಮತ್ತು ಸಂಸ್ಥೆಗಳು

(1) ಕರ್ನಾಟಕ ರಾಜ್ಯವು ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಅತ್ಯುತ್ತಮ ಅಭ್ಯಾಸಗಳನ್ನು ಕ್ರೀಡೆ ಮತ್ತು ಕ್ರೀಡಾ ಪ್ರಾಧಿಕಾರಗಳಲ್ಲಿ ಅಳವಡಿಸಿಕೊಳ್ಳುವುದು ಮತ್ತು ರಾಷ್ಟ್ರೀಯ ನೀತಿ ಮತ್ತು ನ್ಯಾಯಾಲಯದ ತೀರ್ಪುಗಳಿಗೆ ಬದ್ಧರಾಗಿರುವುದು.

(2) ಕರ್ನಾಟಕ ರಾಜ್ಯವು ಸಮಾಜದಲ್ಲಿ ಯಾವುದೇ ಭೇದ-ಭಾವವಿಲ್ಲದೆ ಎಲ್ಲರಿಗೂ ಸೂಕ್ತವಾದ ಮತ್ತು ಸಮಾನವಾದ ವಾತಾವರಣಗಳನ್ನು ಕಲ್ಪಿಸುವ ಸಲುವಾಗಿ ಅಗತ್ಯವಾದ ನೀತಿಗಳನ್ನು ಮತ್ತು ಅಗತ್ಯವಾದ ಕಾನೂನುಗಳನ್ನು ಪರಿಚಯಿಸುವುದು.

(3) ಕ್ರೀಡಾ ಕ್ಷೇತ್ರದಲ್ಲಿ ಎಲ್ಲಾ ರೀತಿಯ ಮೋಸ ವಂಚನೆಗಳನ್ನು ತಡೆಗಟ್ಟುವ ಸಲುವಾಗಿ ಮತ್ತು ಕ್ರೀಡಾ ಒಗ್ಗಟ್ಟನ್ನು ಬೆಳೆಸುವ ಸಂಬಂಧ ನಿಯಮ ಮತ್ತು ಅಗತ್ಯವಾದ ಕಾನೂನುಗಳನ್ನು ರೂಪಿಸುವುದು.

(4) ಕರ್ನಾಟಕ ಕ್ರೀಡಾ ಪ್ರಾಧಿಕಾರವನ್ನು ಬಲಪಡಿಸಿ ತನ್ನ ಮೂಲ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಮತ್ತು ಕ್ರೀಡಾ ನೀತಿಯ ಉದ್ದೇಶವನ್ನು ಈಡೇರಿಸಲು ಮತ್ತು ಕ್ರೀಡಾಭಿವೃದ್ಧಿಗೆ ಅಗತ್ಯವಾದ ಸಂಪನ್ಮೂಲವನ್ನು ಕ್ರೂಢೀಕರಿಸಲು ಅವಕಾಶ ಕಲ್ಪಿಸುವುದು.

ಕ್ರೀಡಾ ಪರಿಸರ ವ್ಯವಸ್ಥೆ:

ಕರ್ನಾಟಕದ ಜಿ.ಡಿ.ಪಿಗಾಗಿ ಕ್ರೀಡಾ ಉದ್ದಿಮೆ, ಕ್ರೀಡಾ ವ್ಯಾಪಾರ, ಕ್ರೀಡಾ ಉದ್ಯಮಶೀಲತೆಯನ್ನು ಸುಮಾರು ರೂ.೫೦೦೦ ಕೋಟಿಯಷ್ಟು ವಾರ್ಷಿಕವಾಗಿ ಒದಗಿಸುವುದು.

(೫) ಕರ್ನಾಟಕ ಕ್ರೀಡಾ ಪ್ರಾಧಿಕರದ ಆಡಳಿತ ವೈಖರಿಯಲ್ಲಿ ವೃತ್ತಿಪರತೆಯನ್ನು ತಂದು ಬಲಪಡಿಸಲಾಗುವುದು.

(೬) ಬೆಂಗಳೂರನ್ನು ಪ್ರಮುಖ ರಾಷ್ಟ್ರೀಯ ಕ್ರೀಡಾ ಹಬ್ ಆಗಿ ಅಭಿವೃದ್ಧಿಪಡಿಸಿ ಪ್ರಪಂಚದ ಮೊದಲ 10 ಸ್ಥಾನಗಳಲ್ಲಿರುವಂತೆ ಮಾಡುವುದಾಗಿದೆ. ಬೆಂಗಳೂರನ್ನು ಕ್ರೀಡಾ ವಿಜ್ಞಾನ ಕೇಂದ್ರ ಮತ್ತು ಕ್ರೀಡಾ ತಾಂತ್ರಿಕ ಕೇಂದ್ರವಾಗಿ ಸಹ ಅಭಿವೃದ್ಧಿಪಡಿಸಲಾಗುವುದು.

ಕ್ರೀಡಾ ಭೌತಿಕ ಮೂಲಭೂತ ಸೌಕರ್ಯಗಳು

(೮) ಅಂತರಾಷ್ಟ್ರೀಯ ಗುಣಮಟ್ಟದ ಸೌಕರ್ಯಗಳನ್ನು ಒದಗಿಸುವ ಮೂಲಕ ಬೆಂಗಳೂರು ಒಂದು ಅತ್ಯುತ್ತಮವಾದ ಕ್ರೀಡಾ ಶ್ರೇಷ್ಠತಾ ಕೇಂದ್ರವಾಗಿ ಅಭಿವೃದ್ಧಿ ಹೊಂದಲಿದೆ.

(೯) ಕರ್ನಾಟಕ ರಾಜ್ಯದ ಪ್ರತಿಯೊಂದು ತಾಲ್ಲೂಕು ಮತ್ತು ನಗರಸಭೆಯು ಕನಿಷ್ಟ ಒಂದು ಸಮುದಾಯ ಕ್ರೀಡಾ ಕೇಂದ್ರವನ್ನು ಹೊಂದುವುದು ಮತ್ತು ಪ್ರತಿಯೊಂದು ಜಿಲ್ಲೆಯೂ ವೃತ್ತಿಪರತೆಯಿಂದ ನಿರ್ವಹಣೆಯಾಗುವ ಬಹು-ಕ್ರೀಡಾ ತರಬೇತಿ ಕೇಂದ್ರ, ಒಲಂಪಿಕ್ ಗುಣಮಟ್ಟದ ಈಜುಕೊಳ ದೊಂದಿಗೆ, ಅಗತ್ಯವಾದ ಸಲಕರಣೆಗಳು, ನುರಿತ ಪರಿಣಿತ ತರಬೇತಿದಾರರು, ಆಡಳಿತ ಮಾಹಿತಿ ವ್ಯವಸ್ಥೆ ಮತ್ತು ಸಮುದಾಯ ಕಾರ್ಯಕ್ರಮಗಳನ್ನು ಹೊಂದಿರುವುದು.

(10) ಕರ್ನಾಟಕ ರಾಜ್ಯದಲ್ಲಿ 18 ವರ್ಷ ಮತ್ತು ಮೇಲ್ಪಟ್ಟ ಕ್ರೀಡಾಪಟುಗಳಿಗಾಗಿ ಅಂತರಾಷ್ಟ್ರೀಯ ಗುಣಮಟ್ಟದ ತರಬೇತಿ ಸೌಲಭ್ಯಗಳನ್ನು ಒಳಗೊಂಡ ಕ್ರೀಡಾ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸುವುದು, ಇದರಲ್ಲಿ ಮತ್ತು ಕ್ರೀಡಾ ವೃತ್ತಿಪರತೆ, ಆಡಳಿತ ಮತ್ತು ಕ್ರೀಡಾ ನಿರ್ವಹಣೆ ವಿಷಯಗಳನ್ನು ಭೋದಿಸಲು ಕಾಲೇಜು/ ವಿಶ್ವವಿದ್ಯಾಲಯಗಳನ್ನು ಹೊಂದುವುದು.

(11) ಕ್ರೀಡಾ ತರಬೇತಿ, ಕ್ರೀಡಾ ಸಹಾಯಕ ಸಿಬ್ಬಂದಿ, ಫಿಸಿಯೋಥೆರಫಿ, ಮನೋವಿಜ್ಞಾನ, ತಾಂತ್ರಿಕತೆ ಮುಂತಾದವುಗಳಲ್ಲಿ ತರಬೇತಿ ನೀಡಲು ಮೂಲಭೂತ ಸೌಕರ್ಯಗಳನ್ನು ಸ್ಥಾಪಿಸುವುದು.

ಮಾನವೀಕ ಸೌಲಭ್ಯಗಳು:

(12) ಕರ್ನಾಟಕ ರಾಜ್ಯವು ಒಂದು ಕ್ರೀಡಾ ಸಲಹಾ ಕೇಂದ್ರವನ್ನು ಹೊಂದಿ, ಇದರಲ್ಲಿ ಯುವಜನರಿಗೆ ಸೂಕ್ತವಾದ ಮಾರ್ಗದರ್ಶನವನ್ನು ನೀಡುವುದು. ಮತ್ತು ಸರ್ಕಾರದಿಂದ ಒದಗಿಸಲಾಗುವ ಕ್ರೀಡಾ ಯೋಜನೆಗಳ ಬಗ್ಗೆ ಮಾಹಿತಿ ಮತ್ತು ಜಾಗೃತಿಯನ್ನು ಆಸಕ್ತರಲ್ಲಿ ಮೂಡಿಸುವುದು

(13) ಕರ್ನಾಟಕ ರಾಜ್ಯದಲ್ಲಿ ಅರ್ಹ ಕ್ರೀಡಾ ತರಬೇತುದಾರರ ಸಂಖ್ಯೆಯನ್ನು ಅಗತ್ಯಾನುಸಾರ ಕಾಲಕಾಲಕ್ಕೆ ಹೆಚ್ಚಿಸುವುದು.

(14) ಕರ್ನಾಟಕ ರಾಜ್ಯವನ್ನು ಕ್ರೀಡಾಪಟುಗಳಿಗೆ ಅವಶ್ಯಕವಾದ ಕ್ರೀಡಾ ವಿಜ್ಞಾನಕ್ಕೆ ಸಂಬಂಧಪಟ್ಟ ಸೇವೆಗಳಿಗೆ ಜಾಗತಿಕ ಕೇಂದ್ರವನ್ನಾಗಿ ಮಾಡುವುದು. ಈ ಕೇಂದ್ರವು ಪರಿಣಿತ ಅನುಭವಿ ಫಿಸಿಯೋ ಥೆರಪಿಸ್ಟ, ವೈದ್ಯರು ಮತ್ತು ಮನೊವೈಜ್ಞಾನಿಕ ಸಲಹೆಗಾರರನ್ನು ಒಳಗೊಂಡಿರುವುದು.

(15) ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ದೈಹಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವುದು ಮತ್ತು ಕರ್ನಾಟಕ ರಾಜ್ಯದಲ್ಲಿನ 100% ರಷ್ಟು ಮಕ್ಕಳು ಅಂದರೆ 6-14 ವರ್ಷದ ಮಕ್ಕಳು ದಿನಕ್ಕೆ ಕನಿಷ್ಟ ½ ಗಂಟೆ ದೈಹಿಕ ಚಟುವಟಿಕೆ/ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದು. ಅವರುಗಳಿಗೆ ಹಾಲು, ಮೊಟ್ಟೆ ಅಥವಾ ಹಣ್ಣುಗಳನ್ನು ನೀಡುವುದರ ಮೂಲಕ ಅವರು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಉತ್ತೇಜಿಸುವುದು.

(16) ಪ್ರಾಥಮಿಕ ಶಾಲಾ ಮಟ್ಟದಿಂದ ಪದವಿಪೂರ್ವ ಮಟ್ಟದವರೆಗೂ ಪ್ರತಿ ದಿನ 60 ನಿಮಿಷಗಳ ಕಾಲ ಕ್ರೀಡಾ ಶಿಕ್ಷಣವನ್ನು ಕಡ್ಡಾಯಗೊಳಿಸುವುದು.

(17) ಕರ್ನಾಟಕದಾದ್ಯಂತ ಎಲ್ಲಾ ಶಾಲೆಗಳು ದೈಹಿಕ ಶಿಕ್ಷಣ ಶಿಕ್ಷಕರನ್ನು ಹೊಂದುವ ಗುರಿಯತ್ತ ಕಾರ್ಯನಿರ್ವಹಿಸುವುದು.

11.1. ಈ ದಾಖಲಾತಿಯು ಮೇಲ್ಕಂಡ ಪ್ರತಿಯೊಂದು ಸ್ಥಂಭದ ವಿಷಯಗಳು, ವ್ಯವಸ್ಥಿತ ನೀತಿಗಳು, ಯೋಜನೆಗಳು, ಘಟ್ಟಗಳು ಮತ್ತು ಸಂಸ್ಥೆಗಳ ವಿನ್ಯಾಸ, ಮೇಲ್ಕಂಡ ಗುರಿಗಳನ್ನು ಸಾಧಿಸುವ ವಿಷಯಗಳನ್ನು ಒಳಗೊಂಡಿರುತ್ತದೆ. ಈ ಸ್ಥಂಭಗಳ ವಿವಿಧ ವಿಷಯಗಳು ಈ ಕೆಳಗಿನ ಚಿತ್ರ-1 ರಲ್ಲಿ ವಿವರಿಸಲಾಗಿದೆ.

| ಆಡಳಿತ ಮತ್ತು ಸಂಸ್ಥೆಗಳು | ಪರಿಸರ ವ್ಯವಸ್ಥೆ | ಭೌತಿಕ ಕ್ರೀಡಾ ಮೂಲಭೂತ ಸೌಕರ್ಯಗಳು | ಪೂರಕ ಸೌಕರ್ಯಗಳು |
|---|---|---|---|
| ಕ್ರೀಡಾ ನಿಯಮಗಳು | ಕ್ರೀಡೆಗಳ ನಿರ್ವಹಣೆ | ಮೂಲಭೂತ ಸೌಕರ್ಯಗಳು | ತರಬೇತಿ |
| ಸಂಪರ್ಕ | ಬಹುಮಾನ ಮತ್ತು ಪ್ರಮಾಣ ಪತ್ರ | ಸಮುದಾಯ ಕೇಂದ್ರಗಳು | ಕ್ರೀಡಾ ಔಷಧ/ವಿಜ್ಞಾನ ಮತ್ತು ಸಲಹೆ |
| ಸಮಗ್ರತೆ | ಕ್ರೀಡಾ ಉಪಕರಣಗಳ ಉದ್ಯಮ | | ಕ್ರೀಡಾ ಶ್ರೇಷ್ಠತೆ ಕೇಂದ್ರ |
| ಶಿಕ್ಷಣದಲ್ಲಿ ಕ್ರೀಡೆ | ಕ್ರೀಡಾ ಔಷಧ/ವಿಜ್ಞಾನ | | ದೈಹಿಕ ಶಿಕ್ಷಣ |

| | | | |
|---|---|---|---|
| | ಕೇಂದ್ರ | | |
| | ತಾಂತ್ರಿಕ ಕೇಂದ್ರ | | ಕ್ರೀಡಾಪಟುಗಳ ಸಾಮರ್ಥ್ಯಾಭಿವೃದ್ಧಿ |
| | ಖಾಸಗಿ ಉದ್ದಿಮೆ ಒಳಗೊಳ್ಳುವಿಕೆ | | |

2. ಸ್ಥಂಭ-1 – ಆಡಳಿತ ಮತ್ತು ಸಂಸ್ಥೆಗಳು

ಎ. ಕ್ರೀಡಾ ನಿಯಮಗಳು
ಬಿ. ಕ್ರೀಡಾ ಸಂಪರ್ಕ
ಸಿ. ಕ್ರೀಡಾ ಸಮಗ್ರತೆ
ಡಿ. ಕ್ರೀಡಾ ಸಲಹಾ ಘಟಕ

2.1. ಕ್ರೀಡಾ ಸಂಸ್ಕೃತಿ ಮತ್ತು ಕ್ರೀಡಾಕ್ಷೇತ್ರದಲ್ಲಿ ಉನ್ನತ ಪ್ರದರ್ಶನಕ್ಕೆ ಆಡಳಿತ ವೈಖರಿ ಮತ್ತು ಸಂಸ್ಥೆಗಳ ಚೌಕಟ್ಟು ಕ್ರೀಡಾ ಪರಿಸರ ವ್ಯವಸ್ಥೆಯ ಪ್ರಮುಖ ಅಂಗವಾಗಿವೆ. ಕರ್ನಾಟಕ ರಾಜ್ಯದಲ್ಲಿನ ಕ್ರೀಡಾ ಸಂಸ್ಥೆಗಳು/ಮಂಡಳಿಗಳು ಮತ್ತು ಸಹಯೋಗ ಸಂಸ್ಥೆಗಳ, ಕ್ರೀಡಾಸಂಬಂಧಿತ ಎಲ್ಲರ ಸಹಕಾರ ಕರ್ನಾಟಕ ಕ್ರೀಡಾ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕೆ ಗತ್ಯವಾಗಿದೆ.

ಎ. ಕ್ರೀಡಾ ನಿಯಮಗಳು:

2.2. ಕರ್ನಾಟಕ ಕ್ರೀಡಾ ನೀತಿಯು, ಕ್ರೀಡಾ ಸಂಸ್ಥೆಗಳು ಮತ್ತು ಇತರೆ ಸಂಘಗಳ ಸ್ವಾಯತ್ತತೆಯ ಪ್ರಾಮುಖ್ಯತೆ ಮತ್ತು ಅಗತ್ಯತೆ ಅರಿವನ್ನು ಹೊಂದಿದ್ದು, ಕ್ರೀಡಾ ಆಡಳಿತದಲ್ಲಿ ಉತ್ತಮ ಅಭ್ಯಾಸಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲು ಮತ್ತು ಕರ್ನಾಟಕ ಕ್ರೀಡಾ ಕಾಯ್ದೆಯನ್ನು ಜಾರಿಗೆ ತರಲು ಬದ್ಧವಾಗಿದೆ. ಪ್ರಮುಖವಾಗಿ.

- ಕರ್ನಾಟಕ ಕ್ರೀಡಾ ಪ್ರಾಧಿಕಾರ (ಎಸ್.ಎ.ಕೆ) ಮತ್ತು ಕ್ರೀಡಾ ಸಂಸ್ಥೆಗಳು 'ಸಾರ್ವಜನಿಕ ಪ್ರಾಧಿಕಾರ'ದ ಯೋಜನೆಗಳನ್ನು ಪಾಲಿಸುವುದು ಮತ್ತು ಇದರಲ್ಲಿ ಸಾರ್ವಜನಿಕ ಸಂಪರ್ಕ, ಸಮಯ-ನಿಗದಿತ ಚುನಾವಣೆ, ಪ್ರಜಾಪ್ರಭುತ್ವ ನಿಯಮಗಳು, ನೀತಿ ಮತ್ತು ಪ್ರಾಮಾಣಿಕತೆಯನ್ನು ಕಾಪಾಡುವುದು.
- ಪ್ರಜಾಪ್ರಭುತ್ವ ರೀತಿಯಲ್ಲಿ ತೀರ್ಮಾನ ಕೈಗೊಳ್ಳುವ ವ್ಯವಸ್ಥೆ, ನೈತಿಕತೆ, ಆರ್ಥಿಕ ಪಾರದರ್ಶಕತೆ ಮತ್ತು ಆಡಿಟ್ ಕ್ಷೇತ್ರಗಳಲ್ಲಿ ಸೂಕ್ತವಾದ ಕಾರ್ಪೊರೇಟ್ ಆಡಳಿತ ವ್ಯವಸ್ಥೆಯನ್ನು ನೀಡುವುದು.
- ಕ್ರೀಡಾ ಸಾಧನೆಗೆ ಮತ್ತು ಸಾರ್ವಜನಿಕ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ವ್ಯವಹಾರಗಳಿಗೆ ಕರ್ನಾಟಕದ ಜನತೆಗೆ ಸೂಕ್ತ ಲೆಕ್ಕ ನೀಡುವುದು.

- ಪಾರದರ್ಶಕತೆ, ಪಾತ್ರಗಳ ಬಗ್ಗೆ ವಿವರಣೆ, ಹಕ್ಕು, ಜವಾಬ್ದಾರಿ, ಮಾನ್ಯತೆ ಇವುಗಳ ಬಗ್ಗೆ ನಿಯಮಗಳನ್ನು ರೂಪಿಸುವುದು.

2.3 ಉತ್ತಮ ಕ್ರೀಡಾ ಆಡಳಿತದ ನಾಲ್ಕು ಸ್ಥಂಭಗಳು: ಪಾರದರ್ಶಕತೆ, ನೈತಿಕತೆ, ವೃತ್ತಿಪರತೆ ಮತ್ತು ಆರ್ಥಿಕ ಹೊಣೆಗಾರಿಕೆ. ಈ ನಿಯಮಗಳು ಪ್ರಮುಖವಾಗಿದ್ದು, ಪ್ರತಿಯೊಂದು ಕ್ರೀಡಾ ಸಂಸ್ಥೆಯು ಅಳವಡಿಸಿಕೊಂಡು ಪಾಲಿಸಿದಲ್ಲಿ ಕರ್ನಾಟಕದಲ್ಲಿ ಕ್ರೀಡಾ ವ್ಯವಸ್ಥೆಯನ್ನು ಬಲವರ್ಧನೆಗೆ ಮತ್ತು ಕ್ರೀಡಾ ಸಾಧನೆಗೆ ಪೂರಕವಾಗಿರಲಿದೆ.

2.4. ವಿಶ್ವಾದ್ಯಂತ ಹಲವಾರು ಕ್ರೀಡಾ ಪ್ರಾಧಿಕಾರಗಳು ಒಂದು ಉತ್ತಮವಾದ ಕ್ರೀಡಾ ಆಡಳಿತ ನಿಯಮಗಳನ್ನು ತಮ್ಮದೇ ಆದ ರೀತಿಯಲ್ಲಿ ವಿವರಿಸಿವೆ ಮತ್ತು ಅವುಗಳಲ್ಲಿ ಅತ್ಯುತ್ತಮವಾದವುಗಳನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರಲು ಪರಿಗಣಿಸಲಾಗುವುದು.

ಬಿ. ಕ್ರೀಡಾ ಸಂಪರ್ಕ

2.5. ಕರ್ನಾಟಕ ರಾಜ್ಯವು ಈ ಕೆಳಕಂಡ ಅಂಶಗಳ ಮೂಲಕ ಎಲ್ಲರನ್ನು ಒಳಗೊಳ್ಳಲು ಮತ್ತು ಕ್ರೀಡೆಯನ್ನು ವಿಸ್ತರಿಸಲು ಬಯಸುತ್ತದೆ.

- ಸೌಲಭ್ಯಗಳನ್ನು ಬಳಸುವ ವಾತಾವರಣ ನಿರ್ಮಿಸುವುದು – ಸಾಧ್ಯವಾದಷ್ಟು ವೈಯಕ್ತಿಕ ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಮತ್ತು ಪ್ರಾಧಿಕಾರಿಗಳಿಗೆ ಮತ್ತು ಸಮುದಾಯಗಳಿಗೆ ಕಡಿಮೆ ಖರ್ಚಿನಲ್ಲಿ ಅಥವಾ ಖರ್ಚಿಲ್ಲದೇ ಸೌಲಭ್ಯಗಳನ್ನು ಒದಗಿಸುವುದು ಮತ್ತು ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಅವಕಾಶಗಳನ್ನು ಒದಗಿಸುವುದು.
- ಸಂಶೋಧನೆ, ಪರಿಷ್ಕೃತ ಕ್ರೀಡಾ ನಿಯಮಗಳು ಮತ್ತು ಕಡಿಮೆ ವೆಚ್ಚದ ಸಲಕರಣೆಗಳು, ಬಾಳಿಕೆಯನ್ನು ಹೆಚ್ಚಿಸುವುದು ಮುಂತಾದವುಗಳ ಬೆಳವಣಿಗೆ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಮತ್ತು ಎಲ್ಲಾ ವಯೋಮಾನದ ತಂಡಗಳು ಮತ್ತು ಸಮುದಾಯಗಳು ಕ್ರೀಡೆಯಲ್ಲಿ ಭಾಗವಹಿಸುವುದು.
- ವೈಯಕ್ತಿಕ ಸುರಕ್ಷತೆ, ಕ್ರೀಡಾ ಸುರಕ್ಷತೆ ಭಾಗವಹಿಸುವಿಕೆಯಲ್ಲಿನ ಅಡೆತಡೆಗಳನ್ನು ನಿವಾರಣೆ ಮಾಡುವುದಕ್ಕೆ ಅಗತ್ಯವಾದ ನಿಯಮಗಳು ಮತ್ತು ಕಾನೂನುಗಳನ್ನು ರೂಪಿಸುವುದು.

2.6. ಹೊಸ ನಿಯಮಗಳು ಕರ್ನಾಟಕದ ಪ್ರತಿಯೊಬ್ಬ ನಿವಾಸಿಗೂ ಸಹ ಸುರಕ್ಷತೆ, ಸೂಕ್ತ ವಯೋಮಾನ ಮತ್ತು ಅಗತ್ಯತೆಗೆ ಸಂಬಂಧಿಸಿದಂತೆ ಕ್ರೀಡಾ ಸೌಲಭ್ಯಗಳನ್ನು ಪಡೆದುಕೊಳ್ಳಲು ಒಂದು ಅವಕಾಶವನ್ನು ಕಲ್ಪಿಸುತ್ತದೆ. ಕರ್ನಟಕ ಕ್ರೀಡಾ ಪ್ರಾಧಿಕಾರವು ನಿಯಮಗಳು ಸುರಕ್ಷತೆ, ಸೇವಾ ಗುಣಮಟ್ಟ ಮತ್ತು ಸರ್ಕಾರದ ಜವಾಬ್ದಾರಿ, ಶೈಕ್ಷಣಿಕ

ಸಂಸ್ಥೆಗಳು, ಸ್ಥಳೀಯ ಪ್ರಾಧಿಕಾರ, ಕ್ರೀಡಾ ಸೇವೆ ಒದಗಿಸುವವರ ಜವಾಬ್ದಾರಿಗಳನ್ನು ತಿಳಿಸಲು ನಿಯಮಗಳನ್ನು ರೂಪಿಸುವುದು.

2.7. ಕರ್ನಾಟಕ ರಾಜ್ಯವು ಯೋಜನೆಗಳನ್ನು ಪರಿಚಯಿಸುವ ಮೂಲಕ ರಾಜ್ಯದಲ್ಲಿರುವ ವಿವಿಧ ರೀತಿಯ ಸಮುದಾಯಗಳಾದ ಮಕ್ಕಳು, ಯುವಕರು, ಮಹಿಳೆಯರು, ಆರ್ಥಿಕವಾಗಿ ಹಿಂದುಳಿದವರು, ಎಲ್.ಜಿ.ಬಿ.ಟಿ.ಕ್ಯೂ (ಸಲಿಂಗಿಗಳು, ದ್ವಿಲಿಂಗಿಗಳು, ಲಿಂಗಪರಿವರ್ತಿತರು ಮತ್ತು ಇತರರು) ಇವರುಗಳು ಕ್ರೀಡೆಯಲ್ಲಿ ಭಾಗವಹಿಸಲು ತರಬೇತಿ ಶಿಬಿರಗಳು, ಉಚಿತ ಶಿಕ್ಷಣ ಮತ್ತು ಇತರೆ ಮೂಲಗಳಿಂದ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು. ಈ ಉದ್ದೇಶಕ್ಕಾಗಿ ರಾಜ್ಯವು ಕರ್ನಾಟಕ ಸ್ಟೇಟ್ ಫಿಸಿಕಲ್ ಫಿಟ್ನೆಸ್ ಮಿಷನ್ ಅನ್ನು ರೂಪಿಸುವುದು.

2.8. ರಾಜ್ಯವು ಮಹಿಳೆಯರಿಗೆ ಸುರಕ್ಷಿತವಾದ ವಾತಾವರಣವನ್ನು ನಿರ್ಮಾಣ ಮಾಡುವುದು ಮತ್ತು ಮಹಿಳೆಯರು ಕ್ರೀಡಾ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಉತ್ತೇಜಿಸುವುದು. ಮಹಿಳೆಯರು ಮತ್ತು ಮಕ್ಕಳೊಡನೆ ತರಬೇತಿದಾರರು, ಪ್ರೇಕ್ಷಕರು ಮತ್ತು ಇತರೆ ವ್ಯಕ್ತಿಗಳ ನಡವಳಿಕೆಯ ಬಗ್ಗೆ ಸೂಕ್ತ ಕಾಯ್ದೆಯನ್ನು ಜಾರಿಗೊಳಿಸುವುದು. ಮಹಿಳೆಯರು ಮತ್ತು ಮಕ್ಕಳನ್ನು ರಕ್ಷಿಸುವ ಸಲುವಾಗಿ ತರಬೇತಿ ನೀಡುವುದರ ಜೊತೆಗೆ ಅವರಿಗೆ ಪ್ರತ್ಯೇಕವಾದ ಶೌಚಾಲಯ, ಡ್ರೆಸ್ಸಿಂಗ್ ರೂಂ ಇವುಗಳನ್ನು ಒದಗಿಸುವುದು. ಕರ್ನಾಟಕ ರಾಜ್ಯದಲ್ಲಿನ ಪ್ರತಿಯೊಂದು ಕ್ರೀಡಾ ಸಂಸ್ಥೆಗಳು ತಮ್ಮದೇ ಆದ ಲೈಂಗಿಕ ಕಿರುಕುಳ ಮತ್ತು ಲೈಂಗಿಕ ಬೈಗುಳ ವಿರೋಧಿ ನಿಯಮಗಳನ್ನು ಅನುಷ್ಠಾನಗೊಳಿಸುವುದು.

ಸಿ. ಕ್ರೀಡಾ ಸಮಗ್ರತೆ:

2.9. ಯಾವುದೇ ಕ್ರೀಡಾ ಸ್ಪರ್ಧೆಯಲ್ಲಿ ಯಶಸ್ಸುಗಳಿಸಬೇಕಾದರೆ ಕ್ರೀಡಾ ಸಮಗ್ರತೆ ಮನೋಭಾವವು ಪ್ರಮುಖವಾದದ್ದು. ಪ್ರತಿಯೊಂದು ಕ್ರೀಡೆಯಲ್ಲೂ ಪ್ರಾಮಾಣಿಕವಾದ ಪ್ರದರ್ಶನ ಮತ್ತು ಸಾಧನೆಗೆ ಯಾವುದೇ ಬಾಹ್ಯ ಒತ್ತಡವಿಲ್ಲದ ವ್ಯವಸ್ಥೆ ನೀಡುವುದು. ಅಥ್ಲೀಟ್‌ಗಳು, ಆಡಳಿತಗಾರರು, ಅಧಿಕಾರಿಗಳು, ಸಹಯೋಗಿಗಳು ಮತ್ತು ಇತರೆಯವರು ಸಕಾರಾತ್ಮಕ, ಪ್ರಮಾಣಿಕ ಹಾಗೂ ಉತ್ತಮ ಕ್ರೀಡಾ ಸ್ಫೂರ್ತಿಯನ್ನು ಕ್ರೀಡಾ ಮೈದಾನದ ಒಳಗೆ ಮತ್ತು ಹೊರಗೆ ತೋರಿದಲ್ಲಿ ಅವುಗಳು ಸ್ಪರ್ಧೆಯ ಘನತೆಯನ್ನು ಹೆಚ್ಚಿಸುವುದು. ಭಾರತ ದೇಶಕ್ಕೆ ಸಂಬಂಧಿಸಿದಂತೆ, ಡೋಪಿಂಗ್, ಫಿಕ್ಸಿಂಗ್, ವಯಸ್ಸಿನಲ್ಲಿ ಮೋಸ ಮತ್ತಿತರೆ ನಡವಳಿಕೆಗಳು ಕ್ರೀಡಾ ಸಮಗ್ರತೆ ಮನೋಭಾವಕ್ಕೆ ಧಕ್ಕೆ ತರುವಂತಹದ್ದಾಗಿರುತ್ತದೆ.

2.10 ಕ್ರೀಡೆಯಲ್ಲಿ ವಂಚನೆಯನ್ನು ತಡೆಗಟ್ಟಲು ಪ್ರಸ್ತುತ ಜಾರಿಯಲ್ಲಿರುವ ವಂಚನೆ ಮತ್ತು ಅವುಗಳ ಗಂಭಿರತೆಯನ್ನು ಅರ್ಥೈಸಿಕೊಳ್ಳುವುದು ಅಗತ್ಯವಾಗಿದೆ. ಕ್ರೀಡೆಯಲ್ಲಿ ಸಮಗ್ರತೆಯನ್ನು ತರಬೇಕಾದರೆ ಕ್ರೀಡಾ ವಂಚನೆ ತಡೆಗಟ್ಟಲು ಚೌಕಟ್ಟು, ನಿಯಮಗಳು ಮತ್ತು ಪ್ರಕ್ರಿಯೆಗಳ ಮೂಲಕ ಎಲ್ಲಾ ಭಾಗೀದಾರರಿಗೆ ಶಿಕ್ಷಣ, ಅರಿವು ಕಾರ್ಯಕ್ರಮಗಳನ್ನು ಜಾರಿಗೆ ತರುವುದು. ಸದರಿ ಕ್ರೀಡಾ ನೀತಿಯು (ಇದನ್ನು ಜಾರಿಗೆ ತರಲು ಕಾಯ್ದೆ ಅಗತ್ಯ) ಈ ಕೆಳಕಂಡ ಪ್ರಮುಖ ವಿಷಯಗಳಿಗೆ ಸಂಬಂಧಿಸಿದ್ದಾಗಿರುತ್ತದೆ

* ಅತ್ಯುತ್ತಮವಾದ ಆರ್ಥಿಕ ನಿರ್ವಹಣೆಯನ್ನು, ಸಂಗ್ರಹಣಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು.

* ಕ್ರೀಡೆಯಲ್ಲಿ ಮ್ಯಾಚ್ ಫಿಕ್ಸಿಂಗ್ ಮತ್ತು ಇತರೆ ಅಕ್ರಮಗಳನ್ನು ತಡೆಹಿಡಿಯುವ ಬಗ್ಗೆ ಅತ್ಯುತ್ತಮವಾದ ನಿಯಮಗಳನ್ನು ಅಳವಡಿಸುವುದು.

* ವೃತ್ತಿಪರ ಅಥ್ಲೀಟ್‌ಗಳು ಮತ್ತು ತರಬೇತುದಾರರಿಗೆ ಅಕ್ರಮ ವಿರೋಧಿ ಶಿಕ್ಷಣ ಮತ್ತು ತರಬೇತಿಯನ್ನು ನೀಡುವುದು.

* ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭ್ರಷ್ಟಾಚಾರ ತನಿಖೆಗೆ ಸಂಬಂಧಪಟ್ಟಂತೆ ಸಹಕಾರ, ಸಹಯೋಗವನ್ನು ವಿಸ್ತರಿಸುವುದು.

* ಡೋಪಿಂಗ್, ಮ್ಯಾಚ್ ಫಿಕ್ಸಿಂಗ್, ವಯಸ್ಸಿನ ಮೋಸ ಮುಂತಾದ ಅಪರಾಧಗಳಿಗೆ ಸಂಬಂಧಪಟ್ಟಂತೆ ಸೂಕ್ತವಾದ ತನಿಖಾ ಪ್ರಾಧಿಕಾರ ಮತ್ತು ವ್ಯವಸ್ಥೆ ಸ್ಥಾಪಿಸುವುದು

ಡಿ. ಕ್ರೀಡಾ ಸಲಹಾ ಘಟಕ:

2.12. 1969 ರಲ್ಲಿ ರಚನೆಯಾದ ಯುವಜನ ಸೇವೆ ನಿರ್ದೇಶನಾಲಯವು 1980 ರಲ್ಲಿ ಕರ್ನಾಟಕ ಕ್ರೀಡಾ ಪರಿಷತ್ ನೊಂದಿಗೆ ಒಂದುಗೂಡಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಾಗಿ 1ಪುನರ್‌ರಚಿತವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ರಾಜ್ಯದಲ್ಲಿನ ಕ್ರೀಡಾ ಆಡಳಿತ ಮತ್ತು ಕ್ರೀಡಾ ಸಾಧನೆಯನ್ನು ಉತ್ತಮಪಡಿಸಲು ಕ್ರೀಡಾ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ ಸೂಕ್ತ ಅವಕಾಶ ನೀಡುವ ಅಗತ್ಯತೆ ಇರುತ್ತದೆ. ನಾವು ಈ ಕೆಳಕಂಡ ಅಂಶಗಳ ಮೇಲೆ ಕ್ರೀಡಾ ಆಡಳಿತ ವ್ಯವಸ್ಥೆಯನ್ನು ಬಲಪಡಿಸಲು ಉದ್ದೇಶಿಸಲಾಗಿದೆ.

2.13. ಕ್ರೀಡಾ ಆಡಳಿತ ವ್ಯವಸ್ಥೆಯಲ್ಲಿ ವೃತ್ತಿಪರ ನಿರ್ವಹಣೆ ಮತ್ತು ಆರ್ಥಿಕ ಹೊಣೆಗಾರಿಕೆ ಕ್ರೀಡಾ ಸಾಧನೆಗೆ ಪೂರಕವಾಗಿದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ ಸಹಾಯ ಮಾಡಲು ಒಂದು ವೃತ್ತಿಪರ ನಿರ್ವಹಣಾ ಘಟಕವನ್ನು ರಚಿಸುವುದು ಇದು ಕ್ರೀಡೆ ಮತ್ತು ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳ ಆಡಳಿತದ ನಿರ್ವಹಣೆ, ವಿಶ್ವ ಗುಣಮಟ್ಟವನ್ನು ತಲುಪುವುದು, ಕ್ರೀಡಾ ಸಂಸ್ಕೃತಿಯನ್ನು ಹರಡುವುದು, ಸ್ಪರ್ಧಾತ್ಮಕ ಕ್ರೀಡೆಗಳಲ್ಲಿ ಅತ್ಯುತ್ತಮ ಪ್ರದರ್ಶನ ಇವುಗಳ ಬಗ್ಗೆ ಸಹಕರಿಸುವುದು.

2.14. ಕರ್ನಾಟಕ ಕ್ರೀಡಾ ಪ್ರಾಧಿಕಾರದ ಜವಾಬ್ದಾರಿ ಮತ್ತು ಅಧಿಕಾರಗಳು:

* ಕ್ರೀಡಾ ನೀತಿ ಅನುಷ್ಠಾನದಲ್ಲಿ ಸಹಕರಿಸುವುದು, ವರದಿ ಸಲ್ಲಿಸುವುದು ಮತ್ತು ಪುನರ್ ವಿಮರ್ಶಿಸುವುದು.
* ಕ್ರೀಡಾಭಿವೃದ್ಧಿಗೆ ಅವಶ್ಯಕವಾದ ನಿಯಮಗಳನ್ನು ರೂಪಿಸುವ ಬಗ್ಗೆ, ಅಳವಡಿಸಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಸಲಹೆಗಳನ್ನು ನೀಡುವುದು ಮತ್ತು ಅಗತ್ಯವಾದ ಕಡೆಗಳಲ್ಲಿ ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿಗೊಳಿಸುವುದು.
* ಸರ್ಕಾರಿ ಇಲಾಖೆ ಮತ್ತು ಸರ್ಕಾರೇತರ ಏಜೆನ್ಸಿಗಳ ಚಟುವಟಿಕೆಗಳೊಂದಿಗೆ ಸಮನ್ವಯ ಸಾಧಿಸುವುದು.
* ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಯ ಬಗ್ಗೆ ರಾಜ್ಯ ಕ್ರೀಡಾ ಸಂಸ್ಥೆಗಳ ಸಾಧನೆಗಳ ಬಗ್ಗೆ ಸರ್ಕಾರಕ್ಕೆ ವಾರ್ಷಿಕವಾಗಿ ಮತ್ತು ಸಾಂದರ್ಭಿಕವಾಗಿ ವರದಿ ಮತ್ತು ಲೆಕ್ಕಪತ್ರ ತಪಾಸಣಾ ವರದಿಗಳನ್ನು ಸಲ್ಲಿಸುವುದು.
* ಕ್ರೀಡಾ ಉದ್ಯಮಗಳನ್ನು ಗುರುತಿಸಿ ಉತ್ತೇಜಿಸುವುದು ಮತ್ತು ಕ್ರೀಡಾ ಸೌಲಭ್ಯಗಳನ್ನು ಒದಗಿಸಿ, ಭಾಗವಹಿಸುವಿಕೆಯಲ್ಲಿ ಸಮಾನತೆಯನ್ನು ಒದಗಿಸುವುದು.
* ವಿವಿಧ ಕ್ರೀಡಾ ಸಂಸ್ಥೆಗಳು ನಿರ್ವಹಿಸಬೇಕಾದ/ಪಾಲಿಸಬೇಕಾದ ಗುಣಮಟ್ಟಗಳನ್ನು ನಿರ್ದಿಷ್ಟಪಡಿಸುವುದು
* ಕ್ರೀಡಾ ಚಟುವಟಿಕೆಗಳು, ಚರ್ಚೆ, ಬಂಡವಾಳ ಹೂಡಿಕೆ ಮುಂತಾದವುಗಳನ್ನು ಆಯೋಜಿಸುವುದು.

ವಿಶೇಷ ಸಮಿತಿಗಳು:

2.15. ಕರ್ನಾಟಕ ಕ್ರೀಡಾ ಪ್ರಾಧಿಕಾರವು ಕ್ರೀಡಾ ಶಿಕ್ಷಣ, ಕ್ರೀಡಾ ಸಹಯೋಗ ಸಮಿತಿ, ಕ್ರೀಡಾ ನೈತಿಕತೆ ಮತ್ತು ಸಮಗ್ರತೆ ಸಮಿತಿ, ಕ್ರೀಡಾ ವ್ಯಾಜ್ಯ ನಿರ್ವಹಣೆ ಸಮಿತಿ ಮತ್ತು ಕ್ರೀಡಾ ವಾಣಿಜ್ಯ ಸಮಿತಿಗಳಂತಹ ವಿಶೇಷ ಸಮಿತಿಗಳನ್ನು ಅವಶ್ಯಕತೆ ಅನುಸಾರ ರಚಿಸುವುದು. ಇಂತಹ ಪ್ರತಿಯೊಂದು ಸಮಿತಿಯೂ ಸಹ ಕ್ರೀಡಾ ನೀತಿಯ ಒಂದು ನಿರ್ದಿಷ್ಟ ಭಾಗದ ಬಗ್ಗೆ ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಇಂತಹ ಸಮಿತಿಗಳಲ್ಲಿ

ನಿರ್ದಿಷ್ಟಪಡಿಸಿದ ವಿಷಯದ ಬಗ್ಗೆ ಅಗತ್ಯವಾದ ವಿದ್ಯಾರ್ಹತೆಯನ್ನು ಹೊಂದಿದ ವ್ಯಕ್ತಿಯು ನಿರ್ವಹಿಸುವುದು. ಹೆಚ್ಚುವರಿಯಾಗಿ ಸದರಿ ಸಮಿತಿಯ ಸಿಬ್ಬಂದಿಯಲ್ಲಿ ಕರ್ನಾಟಕ ರಾಜ್ಯದ ಕ್ರೀಡಾಪಟುಗಳು ಪ್ರತಿನಿಧಿಸತಕ್ಕದ್ದು.

ಸಮಿತಿಗಳು ನೀಡಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಸಲು ಮತ್ತು ವರದಿ ನೀಡಲು ಸಹಕರಿಸುವುದು.

2.16 ಕ್ರೀಡಾ ಶಿಕ್ಷಣ ಸಮಿತಿಯು ಒಂದು ಪ್ರಮುಖವಾದ ಸಮಿತಿಯಾಗಿರುತ್ತದೆ. ಸದರಿ ಸಮಿತಿಯು ಕ್ರೀಡಾ ಶಿಕ್ಷಣ ಮತ್ತು ಅವುಗಳನ್ನು ಸಂಯೋಜಿಸುವ ಪಾತ್ರವನ್ನು ವಹಿಸುತ್ತದೆ. ಶೈಕ್ಷಣಿಕ ಸಂಸ್ಥೆಗಳು ವಿದ್ಯಾರ್ಥಿಗಳಗೆ ಕ್ರೀಡೆ ಮತ್ತು ಅವರ ದೈಹಿಕ ಸದೃಢತೆಗೆ ಸಂಬಂಧಪಟ್ಟ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸುತ್ತದೆ. ಸದರಿ ಸಮಿತಿಯು ರಾಜ್ಯದಲ್ಲಿನ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಅಥವಾ ಸಾಮಾನ್ಯ, ಅಂತರರಾಷ್ಟ್ರೀಯ ಅಥವಾ ಸ್ಥಳೀಯ ಕ್ರೀಡೆಗಳಲ್ಲಿ ಭಾಗವಹಿಸಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿ ಉತ್ತೇಜಿಸುತ್ತದೆ. ಕ್ರೀಡಾ ಇಲಾಖೆ ಮತ್ತು ಕ್ರೀಡಾ ಆಡಳಿತ ಮಂಡಳಿಯ ನಡುವೆ ಸಹಯೋಗವು ಒಂದು ಗಂಭೀರ ವಿಷಯವಾಗಿದ್ದು, ಸಮಿತಿಯು ಇವುಗಳ ನಡುವೆ ಸಂಪರ್ಕ ಸಾಧಿಸಲು ಪ್ರಮುಖ ಪಾತ್ರ ವಹಿಸುತ್ತದೆ.

2.17 ಸದರಿ ಸಮಿತಿಯು ರಾಜ್ಯದಲ್ಲಿನ ಶೈಕ್ಷಣಿಕ ಸಂಸ್ಥೆಗಳಲ್ಲಿ ಎಲ್ಲಾ ಮಟ್ಟದಲ್ಲೂ ಕ್ರೀಡೆ ಮತ್ತು ದೈಹಿಕ ಶಿಕ್ಷಣವನ್ನು ಪ್ರಚುರಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಕ್ಷಣದ ಪ್ರತಿಯೊಂದು ಹಂತದಲ್ಲಿಯೂ ಅಗತ್ಯವಾದ ಕನಿಷ್ಟ ಸೌಲಭ್ಯಗಳು, ತರಬೇತಿ, ಸಲಕರಣೆಗಳನ್ನು ಒದಗಿಸಲು ಸಹಕರಿಸುತ್ತದೆ. ಸದರಿ ಸಮಿತಿಯು ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿಯೊಂದು ಹಂತದಲ್ಲಿಯೂ ಕ್ರೀಡಾ ಚಟುವಟಿಕೆಗಳನ್ನು ಸ್ಪರ್ಧೆಗಳನ್ನು ನಡೆಸುವ ಬಗ್ಗೆ ಮಾರ್ಗದರ್ಶನ ನಿಯಮಗಳನ್ನು ರೂಪಿಸುತ್ತದೆ.

2.18. ಸದರಿ ಸಮಿತಿಯು ಕಾಲ ಕಾಲಕ್ಕೆ ಪ್ರತಿಭಾವಂತ ಅಥ್ಲೀಟ್‌ಗಳು ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡುವ ಬಗ್ಗೆ ಮಾರ್ಗದರ್ಶನ ಮತ್ತು ತೀರ್ಮಾನಗಳನ್ನು ನೀಡುವಂತದ್ದಾಗಿರುತ್ತದೆ. ಮತ್ತು ಹೆಚ್ಚಿನ ಪ್ರತಿಭಾವಂತ ಅಥ್ಲೀಟ್‌ಗಳನ್ನು ನಿರ್ವಹಿಸುವ ಬಗ್ಗೆ ಕಾಲಕಾಲಕ್ಕೆ ಮಾರ್ಗದರ್ಶನವನ್ನು ನೀಡುವುದು. ಕ್ರೀಡೆಗೆ ಸಂಬಂಧಪಟ್ಟ ಅಂಕಗಳ, ಹಾಜರಾತಿ ರದ್ದತಿ, ಪರೀಕ್ಷೆಗಳ ವೇಳಾಪಟ್ಟಿ ಮತ್ತು ತರಗತಿಗಳ ನಿರ್ವಹಣೆ ಇವುಗಳ ಬಗ್ಗೆ.

**ಕರ್ನಾಟಕ ಒಲಂಪಿಕ್ ಸಂಸ್ಥೆ (ಕೆ.ಓ.ಎ.) ಪಾತ್ರ:**

ರಾಜ್ಯ ಸರ್ಕಾರ ಮತ್ತು ಡಿ.ವೈ.ಇ.ಎಸ್./ಕರ್ನಾಟಕ ಕ್ರೀಡಾ ಪ್ರಾಧಿಕಾರ ಹೊರತುಪಡಿಸಿ, ಮತ್ತೊಂದು ಪ್ರಮುಖ ಅಂಗವೆಂದರೆ ಕರ್ನಾಟಕ ಒಲಂಪಿಕ್ ಸಂಸ್ಥೆ. ಕ್ರೀಡೆಗೆ ಸಂಬಂಧಿಸಿದಂತೆ ರಾಜ್ಯದ ಅನುದಾನ ಮತ್ತು ಸಹಕಾರವನ್ನು ಪಡೆಯಬೇಕಾದಲ್ಲಿ ರಾಜ್ಯದ ಎಲ್ಲಾ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು **ಕರ್ನಾಟಕ ಒಲಂಪಿಕ್ ಸಂಸ್ಥೆ ಯಿ**ಂದ ಮಾನ್ಯತೆ ಪಡೆದಿರಬೇಕು. ವಿವಿಧ ಕ್ರೀಡೆಗಳ ಬೆಳವಣಿಗೆಯಲ್ಲಿ ಈ ಸಂಸ್ಥೆಯು ಪ್ರಮುಖ ಪಾತ್ರವನ್ನು ವಹಿಸಲಿದೆ. ನಮ್ಮ ರಾಜ್ಯದ ಕ್ರೀಡಾ ಪಟುಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಕೂಟಗಳಲ್ಲಿ ಭಾಗವಹಿಸಲು ಆಯ್ಕೆ ಮತ್ತು ತಯಾರಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಎಲ್ಲಾ ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳ ಆರ್ಥಿಕ ಸಹಾಯ ಕೋರಿಕೆಗಳನ್ನು **ಕರ್ನಾಟಕ ಒಲಂಪಿಕ್ ಸಂಸ್ಥೆ ಪರಿಶೀಲಿಸಿ ನಂತರದಲ್ಲಿ** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಡಿ.ವೈ.ಇ.ಎಸ್.) ಗೆ ಸಲ್ಲಿಸುವುದು. ಮತ್ತು ಡಿ.ವೈ.ಇ.ಎಸ್ ನೇರವಾಗಿ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವುದು.

**ಕರ್ನಾಟಕ ಒಲಂಪಿಕ್ ಸಂಸ್ಥೆ**ಯು

(1) ದೀರ್ಘಾವಧಿ ಅಭಿವೃದ್ಧಿ ಯೋಜನೆಗಳು, ಅಂದರೆ ವಿವಿಧ ಯೋಜನೆಗಳ ಪ್ರಕ್ರಿಯ ಬಗ್ಗೆ ಪರಾಮರ್ಶಿಸುವುದು.

(2) ಮೇಲ್ಕಂಡ ಅಂಶದ ಒಂದು ಭಾಗವಾಗಿ, ರಾಷ್ಟ್ರೀಯ ತಂಡಗಳು ವಿವಿಧ ಕ್ರೀಡಾ ಸ್ಪರ್ಧೆ/ಚಟುವಟಿಕೆಗಳಲ್ಲಿ ಭಾಗವಹಿಸುವ ಬಗ್ಗೆ ಯೋಜನೆಗಳನ್ನು ಪರಾಮರ್ಶಿಸುವುದು.

(3) ಸರ್ಕಾರದಿಂದ ಆರ್ಥಿಕ ಸಹಾಯವನ್ನು ಪಡೆದ ನಂತರ ಅವುಗಳ ಲೆಕ್ಕಪತ್ರ ನಿರ್ವಹಣೆಯ ಬಗ್ಗೆ.

(4) ವಾರ್ಷಿಕ ಆಡಳಿತ ಮಂಡಳಿ (ಎ.ಜಿ.ಎಂ) ಹೊಂದಿರದ ಯಾವುದೇ ಕ್ರೀಡಾ ಸಂಸ್ಥೆಗಳು ಸರ್ಕಾರದಿಂದಾಗಲೀ ಅಥವಾ ಡಿ.ವೈ.ಇ.ಎಸ್. ನಿಂದ ಯಾವುದೇ ಆರ್ಥಿಕ ಸಹಕಾರವನ್ನು ಬಯಸುವಂತಿಲ್ಲ.

ಅನುದಾನಗಳನ್ನು ಪಡೆದುಕೊಂಡ ಬಗ್ಗೆ ಹಾಗೂ ಅವುಗಳನ್ನು ಉಪಯೋಗಿಸಿದ ಬಗ್ಗೆ ಸರ್ಕಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ/ಕ್ರೀಡಾ ಮಂತ್ರಾಲಯ, ಕೆ.ಓ.ಎ. ಮತ್ತು ಕ್ರೀಡಾ ಸಂಸ್ಥೆಗಳ ಪ್ರತಿನಿಧಿಗಳ ನಡುವೆ ಒಂದು ಸಭೆಯನ್ನು ನಡೆಸತಕ್ಕದ್ದು.

**ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳಿಗೆ ಅನುದಾನ:**

ವಿವಿಧ ಕ್ರೀಡಾ ಪಂದ್ಯಾವಳಿಗಾಗಿ ಅನುದಾನ ಬಿಡುಗಡೆ ಮಾಡುವ ಅನುದಾನದ ವಿವರಗಳು

| ಕ್ರಮ ಸಂ | ಸ್ಪರ್ಧೆಗಳು | ಗುಂಪು–1 | ಗುಂಪು–2 | ಗುಂಪು–3 |
|---|---|---|---|---|
| 1 | ರಾಷ್ಟ್ರಮಟ್ಟದ ಕ್ರೀಡಾ ಕೂಟವನ್ನು ಸಂಘಟಿಸಲು | 2,00,000/- | 1,50,000/- | 1,00,000/- |
| 2 | ದಕ್ಷಿಣ ವಲಯ ಅಂತರ ವಲಯ /ಫೆಡರೇಶನ್ ಕಪ್ ಸಂಘಟಿಸಲು | 50,000/- | 40,000/- | 30,000/- |
| 3 | ಪೂರ್ವ ಏಷ್ಯಾ ಪಂದ್ಯಾವಳಿಯನ್ನು ಸಂಘಟಿಸಲು | 40,000/- | 20,000/- | 15,000/- |
| 4 | ರಾಜ್ಯ ಮಟ್ಟದ ಪಂದ್ಯಾವಳಿಯನ್ನುಸಂಘಟಿಸಲು ಸಿನಿಯರ್/ಜೂನಿಯರ್/ಸಬ್ ಜೂನಿಯರ್ | 18,000/- | 15,000/- | 10,000/- |

**ಸರ್ಕಾರ ಅಥವಾ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳ ವತಿಯಿಂದ ರಾಷ್ಟ್ರ ಮಟ್ಟದ ತರಬೇತಿ ಶಿಬಿರಗಳನ್ನು ನಡೆಸಲು**

| ಕ್ರಮ ಸಂ | ಸ್ಪರ್ಧೆಗಳು | ಅನುದಾನ |
|---|---|---|
| 1 | ಸಿನಿಯರ್ | 3,000.00 ಪ್ರತಿ ಒಬ್ಬರಿಗೆ |
| 2 | ಜೂನಿಯರ್ | 2,000.00 ಪ್ರತಿ ಒಬ್ಬರಿಗೆ |
| 3 | ಸಬ್ ಜೂನಿಯರ್ | 1,500.00 ಪ್ರತಿ ಒಬ್ಬರಿಗೆ |

೫೦% ಅನುದಾನವನ್ನು ಕ್ರೀಡಾ ಚಟುವಟಿಕೆಗಳಿಗೆ ಮುಂಚಿತವಾಗಿ ಮತ್ತು ಲೆಕ್ಕಪತ್ರ–ವಿವರಗಳನ್ನು ಸಲ್ಲಿಸಿದ ನಂತರ ಬಾಕಿ ೫೦% ಅನುದಾನವನ್ನುಬ ಬಿಡುಗಡೆ ಮಾಡುವುದು.

## ಕರ್ನಾಟಕ ರಾಜ್ಯ ಕ್ರೀಡಾ ನೀತಿಯಡಿ ಸಂಸ್ಥೆಗಳು/ಕ್ರೀಡಾ ಪ್ರಾಧಿಕಾರಗಳು

1. ಡಿ.ವೈ.ಇ.ಎಸ್ ಅಥವಾ ಕರ್ನಾಟಕದ ಕ್ರೀಡಾ ಪ್ರಾಧಿಕಾರವು ಈ ಕೆಳಕಂಡ ಅಧಿಕಾರ ಮತ್ತು ಚಟುವಟಿಕೆಗಳನ್ನು ಹೊಂದಿರುತ್ತವೆ. ಅವುಗಳೆಂದರೆ:–

(ಎ) ರಾಜ್ಯದಲ್ಲಿ ಎಲ್ಲಾ ವಿಧವಾದ ಕ್ರೀಡೆಗಳನ್ನು ಆಯೋಜಿಸುವುದು, ಸಹಕರಿಸುವುದು, ಪ್ರಚುರಪಡಿಸುವುದು.

(ಬಿ) ಕ್ರೀಡಾ ಮಾಹಿತಿ ಕೇಂದ್ರ, ಕ್ರೀಡಾಂಗಣ, ಪೆವಿಲಿಯನ್, ಆಟದ ಮೈದಾನ, ಉದ್ಯಾನವನ, ಮಕ್ಕಳ ಉದ್ಯಾನವನ, ಕ್ರೀಡಾ ತರಬೇತಿ ಕೇಂದ್ರ, ತರಬೇತಿ ಕೇಂದ್ರ, ಇವುಗಳನ್ನು ಸ್ಥಾಪಿಸುವುದು ಮತ್ತು ಕಟ್ಟಡಗಳು, ಈಜುಕೊಳಗಳು, ಮತ್ತು ವಾಟರ್ ಪೋಲೋ, ಬೋಟ್ ರೇಸ್ ಮತ್ತು ಜಿಮ್‌ಗಳ ನಿರ್ಮಾಣ ಮಾಡುವುದು.

(ಸಿ) ಕರ್ನಾಟಕ ಕ್ರೀಡಾ ಪ್ರಾಧಿಕಾರವು ಜವಾಬ್ದಾರಿಯಾಗಿರುವ ಎಲ್ಲಾ ಕ್ರೀಡಾ ಚಟುವಟಿಕೆಗಳಿಗೆ ಅಗತ್ಯವಾದ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವುದು.

(ಡಿ) ಕ್ರೀಡಾ ಪಂದ್ಯಗಳು, ಸ್ಪರ್ಧೆ, ತರಬೇತಿ ಕೋರ್ಸ್, ಸೆಮಿನಾರ್, ತರಬೇತಿ ಕೇಂದ್ರ, ಪ್ರದರ್ಶನ, ಪ್ರಯಾಣ, ಮತ್ತು ಕ್ರೀಡೆ ಮತ್ತು ಆಟಗಳ ಪ್ರಚಾರಕ್ಕೆ ಸಹಕರಿಸುವ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವುದು.

(ಇ) ವಿದ್ಯಾರ್ಥಿಗಳು, ಕಾರ್ಮಿಕರು, ಸಾರ್ವಜನಿಕ ಸೇವೆಯಲ್ಲಿರುವವರು ಮತ್ತು ಇತರರಿಗೆ ಕ್ರೀಡೆಯ ಬಗ್ಗೆ ಉತ್ತೇಜನ ನೀಡಲು ಮತ್ತು ಮಾನ್ಯತೆ ಒದಗಿಸಲು ಬಹುಮಾನಗಳು, ಪ್ರಶಸ್ತಿ ಪತ್ರಗಳನ್ನು ನೀಡುವುದು.

(ಎಫ್) ಕ್ರೀಡಾಪಟುಗಳು, ತರಬೇತಿದಾರರು ಮತ್ತು ರೆಫ್ರಿಗಳಿಗೆ ಅಪಘಾತ ವಿಮೆ ಮತ್ತು ವಿಮಾ ಕವರೇಜ್‌ಗಳನ್ನು ಪರಿಚಯಿಸುವುದು.

(ಜಿ) ಯಾವುದೇ ವ್ಯಕ್ತಿ, ಶಿಕ್ಷಣ ಸಂಸ್ಥೆ, ಮತ್ತು ಕ್ರೀಡಾ ಕ್ಷೇತ್ರದಲ್ಲಿರುವವರಿಗೆ ಸಾಲ ಸೌಲಭ್ಯಗಳನ್ನು ಒದಗಿಸಿ ಸಹಕರಿಸುವುದು.

(ಹೆಚ್) ಸಂಸ್ಥೆಗಳ ಚಟುವಟಿಕೆಗಳನ್ನು ನಡೆಸುವ ಸಂಬಂಧ ಅನುದಾನವನ್ನು ಕ್ರೋಢಿಕರಿಸುವುದು.

(ಐ) ರಾಜ್ಯದಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ, ಮತ್ತು ಸ್ಥಳೀಯ ಮಟ್ಟದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುವುದು ಮತ್ತು ಕ್ರೀಡಾ ಪ್ರವಾಸಗಳನ್ನು ಆಯೋಜಿಸುವುದು

(ಜೆ) ಶಿಕ್ಷಣ ಸಂಸ್ಥೆಗಳು ಮತ್ತು ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳಿಗೆ ಅನುದಾನ ಮತ್ತು ಫಂಡ್‌ಗಳನ್ನು ನೀಡುವುದು.

(ಕೆ) ಆಟದ ಮೈದಾನವನ್ನು ವ್ಯವಸ್ಥೆ ಮಾಡುವುದು ಮತ್ತು ಅಗತ್ಯವಾದ ಸಲಕರಣೆಗಳನ್ನು ಒದಗಿಸುವುದು.

(ಎಲ್) ಎಲ್ಲಾ ಕ್ರೀಡೆಗಳಿಗೆ ಸಂಬಂಧಿಸಿದಂತೆ, ಮಾರ್ಷಲ್ ಕ್ರೀಡೆ ಮತ್ತು ಸಾಹಸ ಕ್ರೀಡೆಗಳು ಸೇರಿ ಅಭಿವೃದ್ಧಿ ಮತ್ತು ಸಂಶೋಧನೆ ಕೇಂದ್ರಗಳನ್ನು ಸ್ಥಾಪಿಸುವುದು.

(ಎಂ) ಕ್ರೀಡಾ ಮಾಹಿತಿ ಕೇಂದ್ರ, ಕ್ರೀಡೆಗೆ ಸಂಬಂಧಪಟ್ಟ ವಿವರಗಳನ್ನು ಪಡೆದುಕೊಳ್ಳುವುದು ಮತ್ತು ಅವುಗಳ ವಿವರಗಳನ್ನು ಶೇಖರಿಸುವುಸು ಮತ್ತು ಗ್ರಂಥಾಲಯ ಮತ್ತು ಮ್ಯೂಸಿಯಂಗಳನ್ನು ತೆರೆಯುವುದು.

(ಎನ್) ಕ್ರೀಡಾಪಟುಗಳ ಕ್ಷೇಮಾಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವುದು.

(ಓ) ವಿಕಲಚೇತನ ಕ್ರೀಡಾಪಟುಗಳ ಕ್ಷೇಮಾಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವುದು.

(ಪಿ) ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ನಿಂದ ಅನುಮೋದಿತ ರಾಜ್ಯ ಘಟಕಗಳ ಕೆಲಸ ಕಾರ್ಯಗಳನ್ನು ಅನುಮೋದಿಸುವುದು.

(ಕ್ಯೂ) ಈ ಕಾಯ್ದೆಗೆ ಸಂಬಂಧಪಟ್ಟ ಇತರೆ ಯಾವುದೇ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

(ಆರ್) ಈ ಕಾಯ್ದೆಯಲ್ಲಿ ನೀಡಿರುವ ಎಲ್ಲಾ ಜವಾಬ್ದಾರಿಗಳನ್ನು ಅಥವಾ ನಿಯಮಗಳನ್ನು ಮತ್ತು ಕಾರ್ಯಗಳನ್ನು ನಿರ್ವಹಿಸುವುದು.

(ಎಸ್) ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಪ್ರದರ್ಶನ ತೋರಲು ಪ್ರತಿಭೆಗಳನ್ನು ಗುರುತಿಸುವುದು.

(ಟಿ) 8–14 ವಯೋಮಾನದವರ ಪ್ರತಿಭೆಯನ್ನು ಗುರುತಿಸುವುದು ಮತ್ತು ಅವರನ್ನು ಸೇನಾ ಕ್ಯಾಂಪಸ್‌ನ ರೆಜಿಮೆಂಟ್‌ನಲ್ಲಿ ದಾಖಲು ಮಾಡುವುದು. ಅಂತಹ ಮಕ್ಕಳು ಸೇನೆಗೆ ಸೇರುವ ಅವಕಾಶವನ್ನು ಸಹ ಕಲ್ಪಿಸುವುದು.

(ಯು) ರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಗೆದ್ದಿರುವ 14–21 ವಯೋಮಾನದವರ ಕಿರಿಯ ಶ್ರೇಣಿಯವರಿಗೆ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡುವುದು. ಇಂತಹ ಮಕ್ಕಳು ಭಾರತೀಯ ಕ್ರೀಡಾ ಪ್ರಾಧಿಕಾರ ತರಬೇತಿ ಕೇಂದ್ರ ಯೋಜನೆಯಲ್ಲಿ ಪ್ರವೇಶಾತಿ ಹೊಂದಬಹುದು.

(ವಿ) ಭಾರತೀಯ ಕ್ರೀಡಾ ಪ್ರಾಧಿಕಾರ ದಲ್ಲಿನ ಪ್ರಾದೇಶಿಕ ಕೇಂದ್ರಗಳ ಸೌಲಭ್ಯಗಳ ಉಪಯೋಗವನ್ನು ಪಡೆದುಕೊಳ್ಳುವುದು. ಮತ್ತು ಪ್ರತಿಭಾವಂತರನ್ನು ಗುರುತಿಸಿ ಪ್ರಾದೇಶಿಕ ಕೇಂದ್ರಗಳಲ್ಲಿ ದಾಖಲು ಮಾಡುವುದು.

(ಡಬ್ಲ್ಯೂ) ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಸೂಕ್ತ ತರಬೇತಿಯನ್ನು ನೀಡುವುದು ಮತ್ತು ಅವರನ್ನು ಒಲಂಪಿಕ್, ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಮತ್ತು ಇತರೆ ಅಂತರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ತರಬೇತಿ ನೀಡುವುದು.

(ಎಕ್ಸ್) ಆಟಗಳ ವಿಭಾಗೀಕರಣ / ತರಬೇತಿ ಶಿಬಿರಗಳು / ಹಲವಾರು ಚಾಂಪಿಯನ್‌ಷಿಪ್‌ಗಳ ಆಯೋಜನೆ ಮತ್ತು ಇತರೆ ಕ್ರೀಡಾ ಸೌಲಭ್ಯಗಳು.

**ಕ್ರೀಡೆಗಳ ವಿಭಾಗೀಕರಣ (ತರಬೇತಿ ಶಿಬಿರ, ಕ್ರೀಡಾಸ್ಪರ್ಧೆ/ಮತ್ತಿತರ ಕ್ರೀಡಾ ಕಲ್ಯಾಣ ಕಾರ್ಯಕ್ರಮಗಳು):**

| ಕ್ರ.ಸಂ. | ವಿಭಾಗ |
|---|---|
| 1 | ಒಲಂಪಿಕ್ ಕ್ರೀಡೆಗಳು<br>ಒಲಂಪಿಕ್‌ನಲ್ಲಿರುವ ಕ್ರೀಡೆಗಳು |
| 2 | ಒಲಂಪಿಕ್ ಕ್ರೀಡೆ ಹೊರತುಪಡಿಸಿದ ಕ್ರೀಡೆಗಳು<br>ಒಲಂಪಿಕ್ ಕ್ರೀಡೆಯಿಂದ ಹೊರತುಪಡಿಸಿದ ಎಲ್ಲಾ ಕ್ರೀಡೆಗಳು, ಆದರೆ ಏಷಿಯನ್ ಮತ್ತು ಕಾಮನ್‌ವೆಲ್ತ್ ಕ್ರೀಡೆಯಲ್ಲಿರುವ ಆಟಗಳು |
| ೩ | ಯುವಜನ ಮತ್ತು ಕ್ರೀಡಾ ಮಂತ್ರಾಲಯ ಮತ್ತು ಭಾರತೀಯ ಒಲಂಪಿಕ್ಸ್ ಸಂಸ್ಥೆಯಿಂದ ಮಾನ್ಯತೆ ಪಡೆದ ಇತರೆ ಭಾರತೀಯ ಕ್ರೀಡೆಗಳು |

## ೩. ಸ್ಥಂಭ 2 – ಕ್ರೀಡಾ ಪರಿಸರ ವ್ಯವಸ್ಥೆ

ಅ. ಕ್ರೀಡಾ ಆಡಳಿತ

ಆ. ಪ್ರಶಸ್ತಿಗಳು, ಮಾನ್ಯತೆ, ಪ್ರಮಾಣೀಕರಣ

ಇ. ಕ್ರೀಡಾ ಸಲಕರಣೆಗಳ ಉದ್ಯಮ

ಈ. ಕ್ರೀಡಾ ವಿಜ್ಞಾನ/ಔಷಧ ಕೇಂದ್ರ

ಉ. ಕ್ರೀಡಾ ತಾಂತ್ರಿಕ ಕೇಂದ್ರ

ಊ. ಖಾಸಗಿ ಕಂಪನಿಗಳ ಭಾಗವಹಿಸುವಿಕೆ.

೩.1 ಈ ವಿಭಾಗವು ರಾಜ್ಯದಲ್ಲಿ ಕ್ರೀಡಾ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರುವ ನಿಟ್ಟಿನಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇದು ಚಾಂಪಿಯನ್ ಕ್ರೀಡೆ ಮತ್ತು ಜನಪ್ರಿಯ ಕ್ರೀಡೆ ಎರಡರ ಬೆಳವಣಿಗೆಯ ಬಗ್ಗೆಯೂ

ಚರ್ಚಿಸುತ್ತದೆ. ಇದರ ಅಡಿಯಲ್ಲಿ ಕ್ರೀಡಾ ಆಡಳಿತ, ಕ್ರೀಡಾಪಟುಗಳ ಮಾನ್ಯತೆ, ಕ್ರೀಡಾ ಸಾಮಗ್ರಿಗಳ ಉದ್ಯಮ ಮತ್ತು ಕ್ರೀಡಾ ವಿಜ್ಞಾನ/ಔಷಧಿ ಮತ್ತು ತಾಂತ್ರಿಕ ಕೇಂದ್ರಗಳ ಅಭಿವೃದ್ಧಿಯ ಬಗ್ಗೆಯೂ ಚರ್ಚಿಸುತ್ತದೆ. ಇವುಗಳು ಕ್ರೀಡಾ ಸಂಸ್ಕೃತಿಯನ್ನು ರಾಜ್ಯಾದ್ಯಂತ ಪಸರಿಸಲು ಪ್ರಮುಖ ಪಾತ್ರ ವಹಿಸುತ್ತದೆ.

**ಎ. ಕ್ರೀಡಾ ನಿರ್ವಹಣೆ:**

3.2 ಕರ್ನಾಟಕ ಕ್ರೀಡಾ ಪ್ರಾಧಿಕಾರದ ಒಂದು ಪ್ರಮುಖ ಪಾತ್ರವೆಂದರೆ ರಾಜ್ಯದಲ್ಲಿನ ಕ್ರೀಡಾ ಸಂಸ್ಥೆಗಳಿಗೆ ಅವುಗಳ ಉದ್ದೇಶ, ಅವುಗಳ ಬೆಳವಣಿಗೆ ಮತ್ತು ಕ್ರೀಡೆಯ ಉನ್ನತೀಕರಣದ ಬಗ್ಗೆ ಸಲಹೆ ನೀಡುವುದು. ಇದು ಆಡಳಿತಕ್ಕೆ ಸಂಬಂಧಪಟ್ಟಂತೆ ಹಲವಾರು ವಿಷಯಗಳಲ್ಲಿ ಅಂದರೆ, ಸರಳ ಸೌಲಭ್ಯಗಳನ್ನು ಒದಗಿಸುವುದು, ಸಂಪನ್ಮೂಲ ಕ್ರೂಢೀಕರಣ, ಸೌಲಭ್ಯಗಳನ್ನು ಸೂಕ್ತವಾಗಿ ಉಪಯೋಗಿಸುವುದು, ವಾರ್ಷಿಕ ಚಟುವಟಿಕೆಗಳ ನಿರ್ವಹಣೆ ಮುಂತಾದವುಗಳ ಬಗ್ಗೆ ಸಲಹೆ ನೀಡುವುದು. ಇದರ ಪ್ರಮುಖ ಅಂಶವೆಂದರೆ ಕೀಡಾ ವಿಜ್ಞಾನ/ಔಷಧ ಮತ್ತು ತಾಂತ್ರಿಕತೆಯೊಂದಿಗೆ ಬೆಂಗಳೂರನ್ನು ಕ್ರೀಡಾ ಕೇಂದ್ರವನ್ನಾಗಿ ರೂಪಿಸುವುದು.

**ವೆಬ್‌ಸೈಟ್:**

ಪಾರದರ್ಶಕತೆಯ ಪ್ರಮುಖ ಅಂಶವೆಂದರೆ ಮಾಹಿತಿಯನ್ನು ಹಂಚಿಕೊಳ್ಳುವುದು. ಕರ್ನಾಟಕ ಕ್ರೀಡಾ ಪ್ರಾಧಿಕಾರವು ರಾಜ್ಯದ ಒಂದು ವೆಬ್‌ಸೈಟ್ ಅನ್ನು ಅಭಿವೃದ್ಧಿಪಡಿಸಿ ಇದರಲ್ಲಿ ಮಾಹಿತಿಗಳನ್ನು ಒದಗಿಸುವುದೂ ಅಲ್ಲದೆ ಎಲ್ಲಾ ಸಂಸ್ಥೆಗಳಿಗೆ ತಮ್ಮ ವಾರ್ಷಿಕ ಕಾರ್ಯಕ್ರಮಗಳು, ಚಟುವಟಿಕೆಗಳು ಮುಂತಾದವುಗಳ ಬಗ್ಗೆ ಸಂವಹನ ನಡಸಲು ಅನುವು ಮಾಡಿಕೊಟ್ಟಿದೆ. ಪ್ರತಿಯೊಂದು ಸಂಸ್ಥೆಯೂ ಪ್ರತ್ಯೇಕವಾಗಿ ತಮ್ಮ ವೆಬ್‌ಸೈಟನ್ನು ಹೊಂದಬಹುದು, ಆದರೆ ಅದು ರಾಜ್ಯದ ವೆಬ್‌ಸೈಟ್‌ಗೆ ಲಿಂಕ್ ಆಗಿರುವುದು. ರಾಜ್ಯದ ಎಲ್ಲಾ ಕ್ರೀಡಾಪಟುಗಳು ಮತ್ತು ತರಬೇತುದಾರರು ಈ ವೆಬ್‌ಸೈಟ್‌ನ ನೊಂದಾಯಿತ ಸದಸ್ಯರಾಗಿರುತ್ತಾರೆ. ಅವರು ಒಂದು ಮಟ್ಟ ತಲುಪಿದ ನಂತರ ಅವರಿಗೆ ಒಂದು ಗುರುತಿನ ಸಂಖ್ಯೆ ನೀಡಲಾಗುವುದು. ಎಲ್ಲಾ ಸ್ಕಾಲರ್‌ಷಿಪ್ ಮತ್ತು ಪ್ರಶಸ್ತಿಗಳನ್ನು ವೆಬ್‌ಸೈಟ್ ಮೂಲಕವೇ ನೀಡಲಾಗುವುದು. ಇದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಚಟುವಟಿಕೆಗಳ ಮಾಹಿತಿಯನ್ನು ಒದಗಿಸುವುದು. ಇದು ಆರೋಗ್ಯ, ತರಬೇತಿ, ಸಲಕರಣೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು.

ಎಲ್ಲಾ ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳು ಸಕ್ರಿಯ ವೆಬ್-ಸೈಟ್ ನ್ನು ಹೊಂದಿರತಕ್ಕದ್ದು.

ಡಿ.ವೈ.ಇ.ಎಸ್ / ಕರ್ನಾಟಕ ಕ್ರೀಡಾ ಪ್ರಾಧಿಕಾರದ ಎಲ್ಲಾ ಆಸಕ್ತ ಕ್ರೀಡಾಪಟುಗಳು, ಅವರ ಪೋಷಕರು/ಪಾಲಕರು, ತರಬೇತುದರರು, ನ್ಯೂಟ್ರೀಷಿಯನ್, ಕಾರ್ಪೋರೇಟ್ ವ್ಯಕ್ತಿಗಳಗಾಗಿ ಒಂದು ಇ–ಸ್ಪೋರ್ಟ್ಸ್ ಆಪ್ ಅನ್ನು ಸೃಜಿಸಬೇಕಾಗಿರುತ್ತದೆ.

ಕ್ರೀಡಾ ಕೇಂದ್ರ

3.4. ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು – ಒಂದು ಕ್ರೀಡಾ–ನಗರವಾಗಿ ಅಭಿವೃದ್ಧಿ ಹೊಂದಲು ಎಲ್ಲಾ ರೀತಿಯಿಂದ ಸೂಕ್ತವಾಗಿರುತ್ತದೆ. ಈ ನಗರವು ವರ್ಷಪೂರ್ತಿ ಕ್ರೀಡಾ ಸ್ನೇಹಿ ವಾತಾವರಣ, ಕ್ರೀಡಾಸಕ್ತ ಜನ ಮತ್ತು ಬಹುಉಪಯೋಗಿ ಕ್ರೀಡಾಂಗಣಗಳನ್ನು ಹೊಂದಿದೆ. ಇದು ವಿಶ್ವ ದರ್ಜೆಯ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಪರ್ಕವನ್ನು ಹೊಂದಿರುತ್ತದೆ. ಬೆಂಗಳೂರು ನಗರವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾ ಕೂಟಗಳನ್ನು ಆಯೋಜಿಸಿದ ಅನುಭವ ಹೊಂದಿರುತ್ತದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರವು ಬೆಂಗಳೂರನ್ನು ಕ್ರೀಡಾ ಕೇಂದ್ರವನ್ನಾಗಿಸಲು ಸೂಕ್ತ ಯೋಜನೆ ಮತ್ತು ನಕ್ಷೆಯೊಂದನ್ನು ಸಿದ್ಧಪಡಿಸುವುದು. ವಿವಿಧ ಕ್ರೀಡೆಗಳ ಬೆಳವಣಿಗೆಗೆ ಯೋಜನೆ ರೂಪಿಸುವಾಗ ಅಗತ್ಯವಿರುವ ಸೌಲಭ್ಯ ಮತ್ತು ಸಂಪನ್ಮೂಲಗಳನ್ನು ಗಮನದಲ್ಲಿರಿಸಿಕೊಂಡು ಮುಂದುವರೆಯಬೇಕಿದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರ ಹಣವನ್ನು ಕ್ರೋಢೀಕರಿಸಿ, ಆಟಗಾರರು ಮತ್ತು ತರಬೇತುದಾರರನ್ನು ಉತ್ತೇಜಿಸಬೇಕಾಗಿದೆ. ಖಾಸಗಿ ಸಂಸ್ಥೆಗಳು ಸ್ವಯಂ ಪ್ರೇರಣೆಯಿಂದ ವಿಜ್ಞಾನ/ಔಷಧ ಮತ್ತು ತಾಂತ್ರಿಕ ಮೂಲಭೂತ ಸೌಕರ್ಯ ಒದಗಿಸಲು ಪ್ರತಿಕ್ರಿಯಿಸುತ್ತಾರೆ.

ಕಾರ್ಯಕ್ರಮಗಳು ಮತ್ತು ಪ್ರಚಾರ:

ಎಲ್ಲಾ ಕ್ರೀಡಾ ಸಂಸ್ಥೆಗಳು ಮುಂಚಿತವಾಗಿಯೇ ವಾರ್ಷಿಕ ಕ್ರೀಡಾ ಕಾರ್ಯಕ್ರಮಗಳ ಬಗ್ಗೆ ಘೋಸಿಸತಕ್ಕದ್ದು ಮತ್ತು ಡಿ.ವೈ.ಇ.ಸ್. ನಿಂದ ಅನುಮೋದನೆ ಪಡೆಯುವುದು ಮತ್ತು ಒಂದು ವೇಳೆ ವಿಫಲವಾದಲ್ಲಿ, ಡಿ.ವೈ.ಇ.ಎಸ್ ನಿಂದ ಲಭ್ಯವಾಗುವ ಆರ್ಥಿಕ ಸಹಕಾರಕ್ಕೆ ಅರ್ಹರಾಗುವುದಿಲ್ಲ.

ಯಾವುದೇ ಕ್ರೀಡಾ ಸ್ಪರ್ಧೆ/ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮವು ಚಿಕ್ಕದಾಗಿದ್ದು ಮತ್ತು ಅರ್ಥಪೂರ್ಣವಾಗಿರಬೇಕು ಮತ್ತು ಇದು ಎಲ್ಲಾ ಸ್ಪರ್ಧಿಗಳ ನಡುವೆ ಸಂಪರ್ಕ ಏರ್ಪಡಿಸುವಂತಿರಬೇಕು. ಆದ್ದರಿಂದ ಪ್ರತಿಯೊಂದು ಉದ್ಘಾಟನಾ ಕಾರ್ಯಕ್ರಮವು ಈ ಕೆಳಕಂಡಂತೆ ಇರತಕ್ಕದ್ದು.

ಅತಿಥಿಗಳನ್ನು ಸ್ವಾಗತಿಸುವುದು

ಅತಿಥಿಗಳಗೆ ಸ್ಪರ್ಧಿಗಳನ್ನು ಪರಿಚಯಿಸುವುದು

ದೀಪ ಬೆಳಗುವ ಮೂಲಕ/ಬಲೂನ್‌ಗಳನ್ನು ಹಾರಿಬಿಡುವ ಮೂಲಕ ಆರಂಭ

ಆಟಗಳು ಪ್ರಾರಂಭ ಎಂಬುದಾಗಿ ಘೋಷಿಸುವುದು ಮತ್ತು

ಅತಿಥಿಗಳಂದ ಯಾವುದೇ ಭಾಷಣ ಇರಬಾರದು.

ಮುಖ್ಯವಾಗಿ ಕಾರ್ಯಕ್ರಮದ ಸಮಯವು ಯಾವುದೇ ಕಾರಣದಿಂದಲೂ ಹೆಚ್ಚಾಗಬಾರದು ಮತ್ತು ಆಟಗಳು ಸಮಯಕ್ಕೆ ಸರಿಯಾಗಿ ಪ್ರಾರಂಭವಾಗತಕ್ಕದ್ದು.

3.5 ನ್ಯಾಷನಲ್ ಪ್ರೋಪೆಷನಲ್ ಲೀಗ್ ನಲ್ಲಿ ತಂಡಗಳು ಬೆಂಗಳೂರು ನಗರವನ್ನು ತಮ್ಮ ಕೇಂದ್ರ ಸ್ಥಾನವನ್ನಾಗಿ ಪರಿಗಣಿಸಲು ಉತ್ತೇಜನ ನೀಡುವುದು. ಅಂತರರಾಷ್ಟ್ರೀಯ ಕ್ರೀಡಾ ಚಟುವಟಿಕೆಗಳ ಕ್ಯಾಲೆಂಡರ್ ಸಿದ್ಧಪಡಿಸಿ ಪಾಲಿಸುವುದು. ಕರ್ನಾಟಕ ಕ್ರೀಡಾ ಪ್ರಾಧಿಕಾರವು. ಬೆಂಗಳೂರು ಬ್ರಾಂಡ್ ಅನ್ನು ಜನಪ್ರಿಯಗೊಳಿಸುವುದು..

3.6. ಕ್ರೀಡಾ ಚಟುವಟಿಕೆಗಳಿಗೆ ಆತಿಥ್ಯ ವಹಿಸುವುದರ ಜೊತೆಗೆ ದೊಡ್ಡ ಮಟ್ಟದಲ್ಲಿ ಕ್ರೀಡಾ ಎಕ್ಸ್‌ಪೋ ಮತ್ತು ಪ್ರದರ್ಶನಗಳನ್ನು ಆಯೋಜಿಸುವುದು ಮುಖ್ಯವಾಗಿದೆ. ನಗರವು ದೊಡ್ಡ ಮಟ್ಟದ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸುವಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಕೇಂದ್ರಗಳೊಂದಿಗೆ ಸಹಯೋಗ ಹೊಂದುವುದು. ಇದು ವಿಶಾಲವಾದ ಅಂದರೆ ನ್ಯೂಟ್ರೀಷಿಯನ್, ಕ್ರೀಡಾ ವಸ್ತ್ರಗಳು ಮುಂತಾದವುಗಳನ್ನು ಒಳಗೊಂಡಿದೆ. ಸದರಿ ಪ್ರದರ್ಶನದಲ್ಲಿ ಪ್ರಮುಖ ಕ್ರೀಡಾ ವ್ಯಕ್ತಿಗಳು, ಪ್ರಮುಖ ಕ್ರೀಡಾ ಬ್ರಾಂಡ್‌ಗಳು, ಕ್ರೀಡಾ ಶಿಕ್ಷಣ ವಿಶ್ವವಿದ್ಯಾಲಯ ಮತ್ತು ಕೇಂದ್ರಗಳನ್ನು ಭಾರತದಿಂದ ವಿಶ್ವದಾದ್ಯಂತ ಪರಿಚಯಿಸುವುದು.

**ಸ್ಪರ್ಧಾತ್ಮಕ ವಾತಾವರಣ:**

3.7. ಕರ್ನಾಟಕದಲ್ಲಿ ಸ್ಪರ್ಧಾತ್ಮಕ ಕ್ರೀಡಾ ಸಂಸ್ಕೃತಿಯನ್ನು ಸ್ಥಾಪಿಸುವುದು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಪ್ರಮುಖ ಉದ್ದೇಶವಾಗಿರುತ್ತದೆ. ಇದು ಎಲ್ಲಾ ಹಂತದಲ್ಲಿ ಸ್ಪರ್ಧಾತ್ಮಕ ಕ್ರೀಡೆಯನ್ನು ಉತ್ತೇಜಿಸುತ್ತದೆ. ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ಕ್ರೀಡಾ ಚಟುವಟಿಕೆಗಳ ವಾರ್ಷಿಕ ವೇಳಾ ಪಟ್ಟಿಯನ್ನು ತಯಾರಿಸಿ ಅವುಗಳನ್ನು ಸ್ಪರ್ಧಾಳುಗಳಿಗೆ ಒದಗಿಸುವುದು. ನಿಯಮಿತವಾಗಿ ಕರ್ನಾಟಕ ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸ್ಪರ್ಧೆಗಳನ್ನು ಆಯೋಜಿಸುತ್ತಾ ಬರುವುದರಿಂದ ಪ್ರತಿಭೆಗಳನ್ನು ಗುರುತಿಸಿ ಒಂದು ಆರೋಗ್ಯಕರ ಸ್ಪರ್ಧಾತ್ಮಕ ವಾತಾವರಣವನ್ನು ಅಳವಡಿಸಿಕೊಳ್ಳಲು ಉತ್ತೇಜನ ನೀಡಿದಂತಾಗುತ್ತದೆ.

3.8. ಸ್ಥಳೀಯ ಮಟ್ಟದಲ್ಲಿ ಅವರುಗಳು ಸಾಧಿಸಿರುವ ಪ್ರಗತಿಯ ಅನುಗುಣವಾಗಿ ಸ್ಥಳೀಯ ಕ್ರೀಡಾ ಕ್ಲಬ್, ಯುವ ಜನ ಕ್ಲಬ್, ಶಾಲೆ ಮತ್ತು ಕಾಲೇಜುಗಳಿಗೆ ಹಣಕಾಸಿನ ನೆರವನ್ನು

ನೀಡುವುದರ ಮೂಲಕ ಅವರಿಗೆ ಉತ್ತೇಜನ ನೀಡುವುದು. ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಉತ್ತೇಜಿಸುವ ಸಲುವಾಗಿ ರಾಜ್ಯವು ಸಮುದಾಯ ನಾಯಕರುಗಳು, ಪಂಚಾಯತಿ ನಾಯಕರುಗಳನ್ನು ಕ್ರೀಡಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಉತ್ತೇಜಿಸುವುದು.

**ಬಿ. ಪ್ರಶಸ್ತಿ, ಮಾನ್ಯತೆ, ಪ್ರಮಾಣ ಪತ್ರ.**

3.9. ಕ್ರೀಡಾಪಟುಗಳನ್ನು ಗುರುತಿಸಿ, ಮಾನ್ಯತೆ ನೀಡಿ, ಉತ್ತೇಜಿಸಿ ಅವರಿಗೆ ಪ್ರಶಸ್ತಿ ನೀಡುವುದರ ಮೂಲಕ ಡಿ.ವೈ.ಇ.ಎಸ್. ಕ್ರೀಡಾಪಟುಗಳನ್ನು ಉತ್ತೇಜಿಸುತ್ತಿದೆ. ಇದು ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಒಂದು ಸೂಕ್ತ ಮಾರ್ಗವನ್ನು ತೋರಿಸುತ್ತದೆ. ಒಬ್ಬ ಪ್ರತಿಭಾನ್ವಿತ ಅಥ್ಲಿಟ್‌ನ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಪ್ರದರ್ಶನವು ಆತನಿಗೆ ನೀಡಲಾಗುವ ಸಹಕಾರವನ್ನು ಅವಲಂಬಿಸುತ್ತದೆ. ಅವರುಗಳು ಬೆಳವಣಿಗೆಯ ಹಂತದಲ್ಲಿ ಉತ್ತೇಜನವನ್ನು ಬಯಸುತ್ತಾರೆ.

3.10. ಅಥ್ಲೀಟ್‌ಗಳಿಗೆ ಒದಗಿಸಲಾಗುವ ಸಹಾಯದ ಪ್ಯಾಕೇಜ್‌ಗಳಲ್ಲಿ ಪ್ರಮುಖವಾಗಿ ನಾಲ್ಕು ಅಂಶಗಳನ್ನು ಎದುರಿಸಬೇಕಾಗುತ್ತದೆ.

1. ಕ್ರೀಡಾ ಸ್ಪರ್ಧೆಗಳಲ್ಲಿ ಕಡಿಮೆ ಪ್ರಮಾಣದ ಪದಕಗಳು ಪ್ರತಿಭೆಗಳನ್ನು ಗುರುತಿಸುವಲ್ಲಿ ಮತ್ತು ಅವರನ್ನು ಬೆಳೆಸುವಲ್ಲಿನ ಕೊರತೆಯನ್ನು ಸೂಚಿಸುತ್ತವೆ.

2. ಅವಶ್ಯಕತೆ ಇರುವ ಕ್ರೀಡಾಪಟುವನ್ನು ಗುರುತಿಸುವಲ್ಲಿ ಮತ್ತು ಅವರುಗಳ ಬೆಳವಣಿಗೆಗೆ ಅಗತ್ಯವಾದ ಸಹಕಾರದ ವ್ಯವಸ್ಥೆಯನ್ನು ಒದಗಿಸುವುದು.

3. ಸಂಬಂಧಪಟ್ಟ ಕ್ರೀಡಾಪಟುವಿಗೆ ಅಗತ್ಯವಾದ ಸಹಾಯವನ್ನು ವಿಶೇಷವಾಗಿ ಒದಗಿಸುವುದು. ಪ್ರಸ್ತುವ ವ್ಯವಸ್ಥೆಯು ಅಂತಹ ಸಹಕಾರಗಳಿಗೆ ಸೂಕ್ತವಲ್ಲ.

4. ಅವರುಗಳಿಗೆ ಒದಗಿಸಲಾಗುವ ಸಹಾಯದ ಪ್ರಮಾಣವು ಮುಖ್ಯವಾಗಿ ಲಭ್ಯವಿರುವ ಆಯವ್ಯಯದ ಮೇಲೆ ಅವಲಂಬಿಸಿರುತ್ತದೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರವು ಅಂತಹ ಅರ್ಹತೆಯುಳ್ಳ ಕ್ರೀಡಾಪಟುಗಳನ್ನು ಗುರುತಿಸಿ, ಪ್ರತಿಭೆಗಳಿಗೆ ಸೂಕ್ತವಾದ ಯೋಜನೆಗಳ ಮೂಲಕ ಅಗತ್ಯವಾದ ಆರ್ಥಿಕ ಸಹಕಾರವನ್ನು ಒದಗಿಸಲು ಖಾಸಗಿ ಕ್ಷೇತ್ರದಿಂದ ನಿಧಿಯನ್ನು ಕ್ರೋಢೀಕರಿಸಿ ಸಹಕರಿಸುವುದು.

3.11. ಕರ್ನಾಟಕ ಕ್ರೀಡಾ ಪ್ರಾಧಿಕಾರ, ಡಿ.ವೈ.ಇ.ಎಸ್.ನ ಸಹಯೋಗದೊಂದಿಗೆ ಕರ್ನಾಟಕವು ಈಗಾಗಲೇ ಅತ್ಯುತ್ತಮ ಸಾಧನೆಯನ್ನು ತೋರಿರುವ ನಿರ್ದಿಷ್ಟ ಕ್ರೀಡೆಯನ್ನು ಗುರುತಿಸುತ್ತದೆ. ಒಂದು ನಿರ್ದಿಷ್ಟ ಕ್ರೀಡೆಯನ್ನು ಕೇಂದ್ರೀಕರಿಸಿ ಇದರಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಗೆಲ್ಲಲು ಸಹಕಾರಿಯಾಗುತ್ತದೆ ಮತ್ತು ಇದು ಒಟ್ಟಾರೆ ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಪ್ರತಿ 4 ವರ್ಷಕ್ಕೊಮ್ಮೆ ಆದ್ಯತೆಯನ್ನು ಪರಿಶೀಲಿಸುವುದು (ಪ್ರತಿ ಬೇಸಿಗೆ ಒಲಂಪಿಕ್ ಕ್ರೀಡೆ ಸಮಯದಲ್ಲಿ) ಮತ್ತು ಕ್ರೀಡಾ ಸಂಸ್ಥೆಗಳು ಹಾಗೂ ಪರಿಣಿತರಿಂದ ಸೂಕ್ತ ಸಲಹೆಗಳನ್ನು ಪಡೆದುಕೊಳ್ಳುವುದು.

ಅಥ್ಲೀಟ್‌ಗಳಿಗೆ ಆಹ್ವಾನ ಮತ್ತು ಕ್ರೀಡಾ ಆಡಳಿತ ಮಾಹಿತಿ ವ್ಯವಸ್ಥೆ:

3.12. ರಾಜ್ಯದಲ್ಲಿನ ಅಥ್ಲೀಟ್‌ಗಳನ್ನು ಕಂಡುಹಿಡಿಯುವ ಒಂದು ಉತ್ತಮ ಗುರಿಯಿಂದ ಮತ್ತು ಸಂಪನ್ಮೂಲಗಳನ್ನು ಹುಡುಕುವ ನಿಟ್ಟಿನಲ್ಲಿ, ರಾಜ್ಯ ಸರ್ಕಾರವು ಒಂದು ಯೋಜನೆಯನ್ನು ರೂಪಿಸಿದ್ದು, ಇದರಿಂದ ವ್ಯವಸ್ಥಿತವಾಗಿ ಕ್ರೀಡಾಪಟುಗಳನ್ನು (ಜ್ಯೂನಿಯರ್ ಮತ್ತು ಸೀನಿಯರ್ ಹಂತದಲ್ಲಿ) ಗುರುತಿಸಲು ಸಾಧ್ಯವಾಗುತ್ತದೆ. ಇವರುಗಳಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಿ, ಮತ್ತು ಕೇಂದ್ರೀಕೃತ ಆಡಳಿತ ಮಾಹಿತಿ ವ್ಯವಸ್ಥೆಯ ಮೂಲಕ ಅಥ್ಲೀಟ್‌ಗಳ ಪ್ರದರ್ಶನದ ಟ್ರಾಕ್‌ಗಳ ಪಟ್ಟಿಯ ಅನುಸಾರ ಪ್ರತಿಯೊಬ್ಬ ಅಥ್ಲೀಟ್‌ಗಳಿಗೂ ಆರ್ಥಿಕ ಸಹಕಾರ ನೀಡಲು ಸಹಕಾರಿಯಾಗುತ್ತದೆ.

ನಗದು ಪುರಸ್ಕಾರ:

3.13. ಪದಕ ಗೆಲ್ಲುವ ಕ್ರೀಡಾಪಟುವನ್ನು ಗುರುತಿಸಿ ಅವರಿಗೆ ನಗದು ಪುರಸ್ಕಾರವನ್ನು ನೀಡುವುದರ ಮೂಲಕ ಅವರಿಗೆ ಉತ್ತೇಜನ ನೀಡುವುದು, ಅವರನ್ನು ಪ್ರಚುರಪಡಿಸುವುದು ಪ್ರಮುಖವಾಗಿರುತ್ತದೆ. ಮುಂದುವರೆದು, ನಗದು ಪುರಸ್ಕಾರವನ್ನು ನೀಡುವುದರ ಮೂಲಕ ಇತರೆ ರಾಜ್ಯಗಳ ಕ್ರೀಡಾ ಪಟುಗಳನ್ನು ಸಹ ಆರ್ಕರ್ಷಿಸಬಹುದು. ಹಲವಾರು ಸ್ಪರ್ಧೆಗಳಲ್ಲಿ ಅತ್ಯುತ್ತಮವಾದ ಪ್ರದರ್ಶನವನ್ನು ನೀಡಿದ ಅಥ್ಲೀಟ್‌ಗಳಿಗೆ ನಗದು ಪುರಸ್ಕಾರ ನೀಡುವುದು ಒಂದು ಸೂಕ್ತ ಯೋಜನೆಯಾಗಿರುತ್ತದೆ. ರಾಜ್ಯ ಸರ್ಕಾರವು ಪ್ಯಾರಾ ಅಥ್ಲೀಟ್ ಮತ್ತು ಸಂಪೂರ್ಣ ಶಕ್ತ ಅಥ್ಲೀಟ್‌ಗಳಿಗೂ ಪುರಸ್ಕಾರ ನೀಡುತ್ತಿದೆ.

3.14. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪುರಸ್ಕಾರಗಳನ್ನು ಗಮನದಲ್ಲರಿಸಿ ಪುರಸ್ಕಾರಗಳ ಬಗ್ಗೆ ಡಿ.ವೈ.ಇ.ಎಸ್. ಪ್ರತಿ 4 ವರ್ಷಕ್ಕೊಮ್ಮೆ ಪರಾಮರ್ಶಿಸುತ್ತದೆ.

ಹೆಚ್ಚುವರಿಯಾಗಿ, ಕರ್ನಾಟಕವನ್ನು ಪ್ರತಿನಿಧಿಸಿ ಒಲಂಪಿಕ್ / ಪ್ಯಾರಾಲಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಿದವರಿಗೂ ಸಹ ಪುರಸ್ಕಾರ ನೀಡಬಹುದು. ಈ ಮೇಲ್ಕಂಡ ಪುರಸ್ಕಾರಗಳನ್ನು ಅಥ್ಲೀಟ್‌ಗಳಿಗೆ ಅವರ ಸಾಧನೆಯನ್ನು ಆಧರಿಸಿ ನೀಡಲಾಗುವುದು. ಮುಂದುವರೆದು, ಕಾಲಾನುಕ್ರಮವಾಗಿ ಕರ್ನಾಟಕ ರಾಜ್ಯವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ಅಥ್ಲೀಟ್‌ಗಳು, ತರಬೇತುದಾರರಿಗೂ ಸದರಿ ನದಗು ಪುರಸ್ಕಾರದಿಂದ ಪುರಸ್ಕರಿಸಬಹುದಾಗಿದೆ. ಭಾರತೀಯ ಒಲಂಪಿಕ್ ಸಂಸ್ಥೆಯಿಂದ ನಗದು ಪುರಸ್ಕಾರಕ್ಕಾಗಿ ಅನುಮೋದನೆಗೊಂಡಿರುವ ಕ್ರೀಡೆಗಳು:

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಒಲಂಪಿಕ್ ಗೇಮ್ಸ್ | 500.00 | 300.00 | 200.00 |
| 2 | ಏಷಿಯನ್ ಗೇಮ್ಸ್ | 50.00 | 25.00 | 15.00 |
| 3 | ಕಾಮನ್‌ವೆಲ್ತ್ ಗೇಮ್ಸ್ | 25.00 | 15.00 | 8.00 |
| 4 | ವಿಶ್ವಕಪ್ / ವಿಶ್ವ ಚಾಂಪಿಯನ್‌ಷಿಪ್ | 5.00 | 3.00 | 2.00 |
| 5 | ನ್ಯಾಷನಲ್ ಗೇಮ್ಸ್ | 5.00 | 3.00 | 2.00 |
| 6 | ನ್ಯಾಷನಲ್ ಚಾಂಪಿಯನ್‌ಷಿಪ್ (ಒಲಂಪಿಕ್ ಕ್ರೀಡೆಗಳು ಮಾತ್ರ) | 2.00 | 1.00 | 0.50 |
| 7 | ಜ್ಯೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳು ಮಾತ್ರ) | 0.75 | 0.50 | 0.25 |
| 8 | ಸಬ್ ಜ್ಯೂನಿಯರ್ ನ್ಯಾಷಯನ್ (ಒಲಂಪಿಕ್ ಕ್ರೀಡೆಗಳು ಮಾತ್ರ) | 0.50 | 0.25 | 0.15 |

ಎಲ್ಲಾ ನಗದು ಪುರಸ್ಕಾರಗಳನ್ನು ಮಾನ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯ ಸಮಿತಿಯು ತ್ರೈಮಾಸಿಕವಾಗಿ ತೀರ್ಮಾನಿಸುತ್ತದೆ.

ನಗದು ಪುರಸ್ಕಾರಗಳು ಕಾಲಾನುಕ್ರಮ ಸರ್ಕಾರವು ಹೊರಡಿಸುವ ಆದೇಶಾನುಸಾರ ಇರುತ್ತದೆ. ಕ್ರೀಡಾಪಟುಗಳ ಸಾಧನೆಯನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಪರಾಮರ್ಶಿಸಲಾಗುತ್ತದೆ.
ಒಲಂಪಿಕ್ ಮತ್ತು ಏಷಿಯನ್ ಗೇಮ್ಸ್ ನಲ್ಲಿ ಭಾಗವಹಿಸುವ ರಾಜ್ಯದ ಕ್ರೀಡಾಪಟುಗಳಿಗೆ ಆ ಸಂದರ್ಭದಲ್ಲಿ ಪಾಕೆಟ್ ವೆಚ್ಚಗಳನ್ನು ಒದಗಿಸುವುದು.

ಕರ್ನಾಟಕ ಕ್ರೀಡಾ ಪ್ರಶಸ್ತಿಗಳು:

3.15. ಕ್ರೀಡಾ ಕ್ಷೇತ್ರದಲ್ಲಿನ ಕ್ರೀಡಾಪಟುಗಳ ಜನಪ್ರಿಯತೆಯ ಅನುಗುಣವಾಗಿ ಪ್ರಸ್ತುತ "ಏಕಲವ್ಯ ಪ್ರಶಸ್ತಿ", "ಜೀವಮಾನ ಸಾಧನೆ ಪ್ರಶಸ್ತಿ' ಮತ್ತು 'ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ' ಗಳನ್ನು ನೀಡಲಾಗುತ್ತಿದೆ.

- ಏಕಲವ್ಯ ಪ್ರಶಸ್ತಿ: ರಾಜ್ಯದಲ್ಲಿನ ಕ್ರೀಡಾಪಟುವಿಗೆ ನೀಡಲಾಗುವ ಅತ್ಯುನ್ನತ ಪ್ರಶಸ್ತಿಯಾಗಿದ್ದು, ಒಲಂಪಿಕ್ ಕ್ರೀಡೆಗಳಲ್ಲಿ ಕ್ರೀಡಾಪಟುವಿನ ಕಳೆದ 5 ವರ್ಷಗಳ ಸಾಧನೆಗಾಗಿ ಮಾತ್ರ ನೀಡಲಾಗುವುದು. ಈ ಪ್ರಶಸ್ತಿಯು ರೂ.2.00 ಲಕ್ಷ ನಗದು, ಒಂದು ಪದಕ, ಪ್ರಶಸ್ತಿ ಪತ್ರ ಮತ್ತು ಟ್ರೋಫಿಯನ್ನು ಒಳಗೊಂಡಿರುತ್ತದೆ.
  ಪ್ರಶಸ್ತಿ ಪ್ರದಾನ ಸಮಾರಂಭವನ್ನುಪ್ರತಿ ವರ್ಷ ರಾಷ್ಟ್ರೀಯ ಕ್ರೀಡಾ ದಿನವಾದ ದಿನಾಂಕ 29ನೇ ಆಗಸ್ಟ್ ರಂದು ಕಡ್ಡಾಯವಾಗಿ ಆಯೋಜಿಸುವುದು.

| ಒಲಂಪಿಕ್ ಕ್ರೀಡೆ | |
|---|---|
| 1. ಬಿಲ್ಲುಗಾರಿಕೆ | 19. ರೋಲರ್ ಕ್ರೀಡೆ |
| 2. ಬ್ಯಾಡ್ಮಿಂಟನ್ | 20. ರೋಯಿಂಗ್ |
| 3. ಬೇಸ್ ಬಾಲ್ | 21. ರಗ್ಬಿ |
| 4. ಬ್ಯಾಸ್ಕೆಟ್ಬಾಲ್ | 22. ನೌಕಾಯಾನ |
| 5. ಬೀಚ್ ವಾಲಿಬಾಲ್ | 23. ಶೂಟಿಂಗ್ |
| 6. ಬಾಕ್ಸಿಂಗ್ | 24. ಫುಟ್ಬಾಲ್ / ಸಾಕರ್ |
| 7. ಕ್ಯಾನೋಯಿಂಗ್ ಮತ್ತು ಕಯಾಕಿಂಗ್ | 25. ಈಜು |
| 8. ಕ್ಲೈಂಬಿಂಗ್ | 26. ಸರ್ಫಿಂಗ್ |
| 9. ಸೈಕ್ಲಿಂಗ್ | 27. ಸಿಂಕ್ರೊನೈಸ್ ಈಜು |
| 10. ಡೈವಿಂಗ್ | 29. ಟೇಬಲ್ ಟೆನಿಸ್ |
| 11. ಇಕ್ವೆಸ್ಟ್ರಿಯನ್ | 30. ಟೇಕ್ವಾಂಡೋ |
| 12. ಫೆನ್ಸಿಂಗ್ | 31. ಟೆನಿಸ್ |
| 13. ಫೀಲ್ಡ್ ಹಾಕಿ | 32. ಅಥ್ಲೆಟಿಕ್ಸ್ (ಟ್ರ್ಯಾಕ್ & ಫೀಲ್ಡ್) |
| 14. ಗಾಲ್ಫ್ | 33. ಟ್ರಿಯಾಥ್ಲಾನ್ |
| 15. ಜಿಮ್ನಾಸ್ಟಿಕ್ಸ್ | 34. ವಾಲಿಬಾಲ್ |
| 15. ಹ್ಯಾಂಡ್ಬಾಲ್ | 35. ವಾಟರ್ ಪೊಲೊ |
| 16. ಜೂಡೋ | 36. ಭಾರ ಎತ್ತುವಿಕೆ |
| 17. ಕರಾಟೆ | 37. ಕುಸ್ತಿ |
| 18. ಆಧುನಿಕ ಪೆಂಥಾಥ್ಲಾನ್ | |

- “ಜೀವಮಾನ ಸಾಧನೆ ಪ್ರಶಸ್ತಿ’ ಈ ಪ್ರಶಸ್ತಿಯನ್ನು ತರಬೇತುದಾರರಿಗೆ ನೀಡಲಾಗುತ್ತದೆ. ಈ ಪ್ರಶಸ್ತಿಯು ರೂ.1.50 ಲಕ್ಷ ನಗದು, ಒಂದು ಪದಕ, ಪ್ರಶಸ್ತಿ ಪತ್ರ ಮತ್ತು ಟ್ರೋಫಿಯನ್ನು ಒಳಗೊಂಡಿರುತ್ತದೆ.

- ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ: ಈ ಪ್ರಶಸ್ತಿಯನ್ನು ಒಲಿಂಪಿಕ್ ಮತ್ತು ಒಲಂಪಿಕೇತರ ಕ್ರೀಡೆಗಳಲ್ಲಿನ ಸಾಧನೆಗಾಗಿ ನೀಡಲಾಗುತ್ತದೆ. ಈ ಪ್ರಶಸ್ತಿಯು ರೂ.1.00 ಲಕ್ಷ ನಗದು, ಒಂದು ಪದಕ, ಪ್ರಶಸ್ತಿ ಪತ್ರ ಮತ್ತು ಟ್ರೋಫಿಯನ್ನು ಒಳಗೊಂಡಿರುತ್ತದೆ.

ಇವುಗಳಲ್ಲದೆ ರಾಜ್ಯದಲ್ಲಿ ಕ್ರೀಡೆಯ ಬೆಳವಣಿಗೆ ಮತ್ತು ಪ್ರಚಾರಕ್ಕಾಗಿ ತಮ್ಮ ಸಹಕಾರವನ್ನು ನೀಡುವ ಸಂಸ್ಥೆಗಳಗೂ ಸಹ ರಾಜ್ಯ ಸರ್ಕಾರವು ಹಲವಾರು ರೀತಿಯಲ್ಲಿ ಸಹಕಾರವನ್ನು ನೀಡುತ್ತಿದೆ. **ಕರ್ನಾಟಕ ಕ್ರೀಡಾ ಪೋಷಕ ರತ್ನ** ಪ್ರಶಸ್ತಿ ಎಂಬ ಪ್ರಶಸ್ತಿಯನ್ನು ಕ್ರೀಡಾ ಕ್ಷೇತ್ರದಲ್ಲಿ ಬೆಳವಣಿಗೆಗೆ ಸಹಕರಿಸುತ್ತಿರುವ ಸಂಸ್ಥೆಗಳಗಾಗಿ ಪರಿಚಯಿಸಲಾಗಿದೆ. ಈ ಪ್ರಶಸ್ತಿಯು ರೂ.5.00 ಲಕ್ಷಗಳ ನಗದು ಪುರಸ್ಕಾರ ವನ್ನು ಹೊಂದಿರುತ್ತದೆ. ಪ್ರತಿ ವರ್ಷ ಎರಡು ಸಂಸ್ಥೆಗಳಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಈ ಪ್ರಶಸ್ತಿಗಳನ್ನು ನೀಡುವ ಸಲುವಾಗಿ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಹೆಚ್ಚುವರಿಯಾಗಿ, ರಾಷ್ಟ್ರೀಯ ಕ್ರೀಡೆಗಳಲ್ಲಿ, ಒಲಂಪಿಕ್ ಸ್ಪರ್ಧೆಗಳಲ್ಲಿ ಕರ್ನಾಟಕದಿಂದ ಭಾರತವನ್ನು ಪ್ರತಿನಿಧಿಸಿ ಪದಕಗಳನ್ನು ಗೆಲ್ಲುವಂತಹ ಆಟಗಾರರನ್ನು ತರಬೇತುಗೊಳಸಿದ ತರಬೇತುದಾರರಿಗೆ ಹೊಸದಾಗಿ ಪ್ರಶಸ್ತಿಗಳನ್ನು ಪರಿಚಯಿಸಲಾಗುವುದು.

ಅಮೆಚೂರ್ / ಸೆಮಿ-ಪ್ರೊಫೆಷನಲ್ ಹಂತಗಳಲ್ಲಿನ ಕ್ರೀಡಾಪಟುಗಳಗೆ ಉತ್ತೇಜನ:

3.16. ಹಲವಾರು ಅಮೆಚೂರ್ / ಸೆಮಿ-ಪ್ರೊಫೆಷನಲ್ ಹಂತಗಳಲ್ಲಿನ ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಉತ್ತೇಜಿಸಲು ರಾಜ್ಯ ಸರ್ಕಾರವು ಅಗತ್ಯವಾದ ಉತ್ತೇಜನಗಳನ್ನು ನೀಡುವುದು ಅಗತ್ಯವಾಗಿದೆ.

- ಕರ್ನಾಟಕ ರಾಜ್ಯಾದ್ಯಂತ ಅಮೆಚೂರ್ / ಸೆಮಿ-ಪ್ರೊಫೆಷನಲ್ ಹಂತಗಳಲ್ಲಿನ ಕ್ರೀಡೆಗೆ ಸಹಕಾರ ನೀಡುವುದನ್ನು ಮುಂದುವರೆಸುವುದು ಮತ್ತು ಅಂತಹ ಸ್ಪರ್ಧೆಗಳಲ್ಲಿ ಜಯಸಿದವರಿಗೆ ಸೂಕ್ತ ಬಹುಮಾನಗಳನ್ನು ನೀಡುವುದು.
- ಈ ಮೇಲ್ಕಂಡ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ತೋರಿದವರಿಗೆ ಮುಂದಿನ ಹಂತಗಳಲ್ಲಿ ಭಾಗವಹಿಸುವ ಅಂದರೆ ಅಥ್ಲೀಟ್ ಕಾರ್ಡಿಂಗ್ ಹಂತದಲ್ಲಿ ಮುಂದುವರೆಯಲು ಸಹಕಾರ ನೀಡುವುದು.
- ಅಂತಹ ಸ್ಪರ್ಧೆಗಳಲ್ಲಿ ಗೆದ್ದ ಸ್ಪರ್ಧಿಗಳಗೆ ವಾರ್ಷಿಕ ಜಿಲ್ಲಾ ಮತ್ತು ಯುವಜನ ಕ್ರೀಡಾ ಹಬ್ಬಗಳಲ್ಲಿ ಭಾಗವಹಿಸಲು ಅವಕಾಶ ನೀಡುವುದು.

- ಶಿಕ್ಷಣ ಇಲಾಖೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ಇವರ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಉನ್ನತ ಸಾಧನೆಗಾಗಿ ಅಂಕಗಳನ್ನು ನೀಡುವುದು, ಅಗತ್ಯವಿದ್ದಲ್ಲಿ ಹಾಜರಾತಿಯಲ್ಲಿ ರಿಯಾಯಿತಿ ನೀಡುವುದು.

ಆಯ್ಕೆಯಾದ ಅಥ್ಲೀಟ್‌ಗಳಿಗೆ ಆರ್ಥಿಕ ನೆರವು ಮತ್ತು ಹೆಚ್ಚಿನ ಕ್ರೀಡಾ ಸಾಧನೆಗೆ ಬೆಂಬಲ

3.17 ದೀರ್ಘಾವಧಿ ಅಭಿವೃದ್ಧಿ ಯೋಜನೆಯ ಆಧಾರದಲ್ಲಿ ಕಾರ್ಡೆಡ್ ಅಥ್ಲೀಟ್‌ಗಳನ್ನು ಆಯ್ಕೆ ಮಾಡಲು ಹಾಗೂ ಉತ್ತಮ ಪ್ರದರ್ಶನ ನೀಡುವ ತಂಡಗಳಿಗೆ ನೇರವಾಗಿ ಆರ್ಥಿಕ ಸಹಕಾರ ಒದಗಿಸುವುದು. ಇದು ಅವರಿಗೆ ದೀರ್ಘಾವಧಿ ತರಬೇತಿ ಮತ್ತು ಸ್ಪರ್ಧೆಯಲ್ಲಿ ತೊಡಗಿಕೊಳ್ಳಲು ಸಹಕಾರಿಯಾಗುತ್ತದೆ ಹಾಗೂ ಅಂತರರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಮುಂದುವರೆಯಲು ಅಗತ್ಯವಾದ ಸಹಕಾವನ್ನು ನೀಡುತ್ತದೆ. ನೇರ ಆರ್ಥಿಕ ಸಹಕಾರ ನೀಡುವ ಉದ್ದೇಶಕ್ಕೆ, ಕಾರ್ಡೆಡ್ ಅಥ್ಲೀಟ್ ಮತ್ತು ತಂಡಗಳನ್ನು ಈ ಕೆಳಕಂಡ ಎರಡು ಕಾರ್ಯಕ್ರಮಗಳಾಗಿ ವಿಭಾಗ ಮಾಡಲಾಗಿದೆ.

* “ವಿಶ್ವ ದರ್ಜೆ” – ಈ ಕಾರ್ಯಕ್ರಮದಲ್ಲಿ ಒಲಂಪಿಕ್ ಕ್ರೀಡೆ / ವಿಶ್ವ ಚಾಂಪಿಯನ್‌ಷಿಪ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಪದಕಗಳನ್ನು ಗೆಲ್ಲುವ ಸಾಮರ್ಥ್ಯ ಇರುವ ಕಾರ್ಡೆಡ್ ಅತ್ಲೀಟ್ ಮತ್ತು ತಂಡಗಳು ಮತ್ತು ಪ್ಯಾರಾಲಂಪಿಕ್‌ನಲ್ಲಿ ಪದಕಗಳನ್ನು ಗೆಲ್ಲುವ ಸಾಮರ್ಥ್ಯವುಳ್ಳ ತಂಡಗಳು ಮತ್ತು ಅಂತಹ ಸ್ಪರ್ಧೆಗಳಿಂದ ನಾಲ್ಕು ವರ್ಷಗಳ ಮುಂಚೆ.

* “ವಿಶ್ವ ದರ್ಜೆ ಸಾಮರ್ಥ್ಯ” – ಈ ಕಾರ್ಯಕ್ರಮವನ್ನು ಒಲಂಪಿಕ್/ ಪ್ಯಾರಾಲಂಪಿಕ್ ಸಮನಾದ ಸ್ಪರ್ಧೆಗಳಲ್ಲಿ ಪದಕಗಳನ್ನು ಜಯಿಸುವ ಸಾಮರ್ಥ್ಯವಿರುವ ತಂಡಗಳಿಗೆ ಮತ್ತು ಅಥ್ಲೀಟ್‌ಗಳಿಗಾಗಿ ರೂಪಿಸಲಾಗಿದ್ದು, ಅಂತಹ ಸ್ಪರ್ಧೆಗಳಿಂದ ಎಂಟು ವರ್ಷಗಳ ಮುಂಚೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರವು ಡಿ.ವೈ.ಇ.ಎಸ್.ನ ಸಹಕಾರದೊಂದಿಗೆ ಇಂತಹ ಆಯ್ಕೆಯಾದ ಕ್ರೀಡಾಪಟುಗಳಿಗೆ ಅವರ ಗುರಿಯನ್ನು ಸಾಧಿಸಲು ಅಗತ್ಯವಾದ ಆರ್ಥಿಕ ಸಹಕಾರವನ್ನು ಒದಗಿಸಲು ಕಾರ್ಪೊರೇಟ್ ಸಂಸ್ಥೆಗಳನ್ನು ಉತ್ತೇಜಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದು.

ಪ್ರತಿಭಾನ್ವಿತ ಕ್ರೀಡಾಪಟುಗಳ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಅಗತ್ಯವಾದ ವ್ಯವಸ್ಥೆಯ ಮೂಲಕ ಅವರುಗಳ ಪ್ರತಿಭೆಯನ್ನು ಗುರುತಿಸಿ ಸೂಕ್ತವಾದ ಸಹಕಾರ ನೀಡುವುದು.

3.18. ಅಥ್ಲೀಟ್‌ಗಳ ಆಯ್ಕೆ ಮತ್ತು ವರ್ಗೀಕರಣವನ್ನು ಮತ್ತು ಅಗತ್ಯವಾದ ನೆರವಿನ ವಿಧಾನವನ್ನು, ಅವರುಗಳ ಪ್ರದರ್ಶನದ ಆಧಾರದ ಮೇಲೆ ಈ ಉದ್ದೇಶಕ್ಕಾಗಿ ರಚಿಸಲಾದ ಸಮಿತಿಯು ತೀರ್ಮಾನಿಸುವುದು. ಈ ಮೇಲ್ಕಂಡ ಕಾರ್ಯಕ್ರಮಗಳಲ್ಲಿ ಅಥ್ಲೀಟ್‌ಗಳ ಅರ್ಹತೆ ಮತ್ತು ವಿದ್ಯಾರ್ಹತೆಯನ್ನು ಸಹ ಸದರಿ ಸಮಿತಿಯು ನಿರ್ಧರಿಸುವುದು.

3.19. ಆರ್ಥಿಕ ನೆರವು ಮತ್ತು ಹೆಚ್ಚಿನ ಸಾಧನೆಗೆ ಅನುದಾನದ ಬೆಂಬಲ ಸಂಬಂಧ ಪ್ರತಿಯೊಂದು ಕಾರ್ಯಕ್ರಮದಲ್ಲಿ ಈ ಕೆಳಕಂಡಂತೆ ನಿರ್ಧರಿಸುವುದು.

- ಅಂತರಾಷ್ಟ್ರೀಯ ತರಬೇತಿ/ತರಬೇತಿ ಶಿಬಿರ ಮತ್ತು ಭಾಗವಹಿಸುವಿಕೆ.
- ಸಾಮಗ್ರಿಗಳು, ತರಬೇತಿ ಮತ್ತು ಪರಿಣಿತ ಸಹಕಾರ
- ದೇಶೀಯ ತರಬೇತಿ / ತರಬೇತಿ ಶಿಬಿರಗಳು ಮತ್ತು ಭಾಗವಹಿಸುವಿಕೆ.
- ಕ್ರೀಡಾ ಸಾಧನೆಗೆ ಸಂಬಂಧಪಟ್ಟಂತೆ ಕ್ರೀಡಾ ವೆಚ್ಚಗಳು.
- ಕ್ರೀಡೆ ಮತ್ತು ಶೈಕ್ಷಣಿಕ ಸಾಧನೆಗೆ ಒಳಪಟ್ಟಂತೆ ಶಿಕ್ಷಣ ವೇತನ.

3.20. ಈ ಕೆಳಕಂಡ ಅರ್ಹತಾನುಸಾರ ಅಥ್ಲೀಟ್‌ಗಳಿಗೆ ಆದ್ಯತೆಯ ಮೇರೆಗೆ ಸಹಕಾರವನ್ನು ಒದಗಿಸಲಾಗುವುದು

- ಅಥ್ಲೀಟ್‌ಗಳ ಈ ಹಿಂದಿನ ವರ್ಷಗಳ ಸಾಧನೆಯನ್ನು ಪರಿಗಣಿಸಲಾಗುವುದು.
- ರಾಷ್ಟ್ರೀಯ ಕ್ರೀಡೆಗಳಲ್ಲಿ ಪದಕ ಗೆದ್ದವರು, ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದವರು, ವಿಶ್ವ ಚಾಂಪಿಯನ್‌ಷಿಪ್ ಮತ್ತು ಒಲಂಪಿಕ್ಸ್‌ಗೆ ಅರ್ಹತೆ ಗಳಿಸಿದವರು ಮತ್ತು ಮಾನ್ಯತೆ ಪಡೆದ ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪದಕ ಗೆದ್ದವರು.
- ರಾಷ್ಟ್ರೀಯ ಕ್ರೀಡೆಗಳಲ್ಲಿ ಪದಕ ಗೆಲ್ಲುವ ಅರ್ಹತೆ ಇರುವವರು
- ಒಂದು ನಿರ್ಧಿಷ್ಟ ಕ್ರೀಡೆಯಲ್ಲಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗುವ ಅರ್ಹತೆವುಳ್ಳವರು.
- ಒಲಂಪಿಕ್ಸ್ ಮತ್ತು ಪ್ಯಾರಾಲಂಪಿಕ್ಸ್‌ಗೆ ಆಯ್ಕೆಯಾಗಲು ಹಾಗೂ ಪದಕ ಗೆಲ್ಲಲು ಅರ್ಹತೆಯುಳ್ಳ ಅಥ್ಲೀಟ್‌ಗಳು.

3.21. ಅಥ್ಲೀಟ್‌ಗಳು 4 ವರ್ಷಗಳ ಕಾಲ ನೆರವನ್ನು ಪಡೆಯಬಹುದು. ಅಥ್ಲೀಟ್‌ಗಳು ಬಯಸುವ ನೆರವನ್ನು, ಅಂತಹ ಅಥ್ಲೀಟ್‌ಗಳ ಸಾಧನೆಯನ್ನು ಮತ್ತು ಅಗತ್ಯವಾದ ಅಭಿವೃದ್ಧಿಯನ್ನು ಗಮನಿಸಿ ಒಂದು ನುರಿತ ತಂಡವು ನಿರ್ಧರಿಸುತ್ತದೆ. ಸದರಿ ತಂಡದಲ್ಲಿ ನ್ಯೂಟ್ರಿಷಿಯನಿಸ್ಟ್, ಕ್ರೀಡಾ ದೈಹಿಕ ಶಿಕ್ಷಕರು, ಮನಶ್ಶಾಸ್ತ್ರಜ್ಞರು ಮತ್ತು ಕ್ರೀಡಾ ವ್ಯವಸ್ಥಾಪಕರು ಇರುತ್ತಾರೆ.

ಉನ್ನತ ಸಾಧನಾ ಘಟಕ.

3.22. ಸದರಿ ಘಟಕವು ವಿವಿಧ ಜಿಲ್ಲಾ ಕ್ರೀಡಾ ಕೇಂದ್ರ ಮತ್ತು ತಾಲ್ಲೂಕು ಕ್ರೀಡಾ ಕೇಂದ್ರಗಳಲ್ಲಿ ಶಿಬಿರಗಳನ್ನು ನಡೆಸಿ ಅಥ್ಲೀಟ್‌ಗಳು, ತರಬೇತುದಾರರು ಅವರಿಗೆ ಸಂಬಂಧಿಸಿದ ವಿಭಾಗದಲ್ಲಿ

ಅವರ ಜ್ಞಾನವನ್ನು ತಿಳಿಯುವುದು. ಅವರುಗಳಿಗೆ ಸಂಬಂಧಪಟ್ಟ ವಿಭಾಗದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಸಲುವಾಗಿ ಅಗತ್ಯವಾದ ತರಬೇತಿಯನ್ನು ಪಡೆಯಲು ದೇಶದ ಒಳಗೆ ಮತ್ತು/ಅಥವಾ ವಿದೇಶದಲ್ಲಿ ತರಬೇತಿಯನ್ನು ಒದಗಿಸುವುದು. ಮಾಜಿ ಅಥ್ಲೀಟ್‌ಗಳೂ ಸಹ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಅಥ್ಲೀಟ್‌ಗಳಿಗೆ ತರಬೇತಿಯನ್ನು ನೀಡಿ ದೇಶೀಯ ಮತ್ತು ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಲು ತರಬೇತುಗೊಳಿಸಬಹುದು.

3.23. ಗಾಯಗಳನ್ನು ತಡೆಯುವ ಮತ್ತು ರೀಹ್ಯಾಬಿಲಿಟೇಷನ್, ಶಕ್ತಿ ಮತ್ತು ಸಾಮರ್ಥ್ಯ, ನ್ಯೂಟ್ರೀಷಿಯನ್, ತಾಂತ್ರಿಕ ವಿಶ್ಲೇಷಣೆ, ಫಿಜಿಯೋಲಾಜಿ, ಕ್ರೀಡಾ ಮನಶ್ಶಾಸ್ತ್ರ ಮತ್ತು ಯೋಜನಾ ಸಹಕಾರವನ್ನು ರಾಜ್ಯದ ಅಥ್ಲೀಟ್‌ಗಳಿಗೆ ಮತ್ತು ತಂಡಗಳಿಗೆ ಅಗತ್ಯವಾದ ಪಡೆಯಬಹುದು. ಇದು ಕರ್ನಾಟಕ ಉನ್ನತ ಸಾಧನಾ ಘಟಕ ಎಂಬುದಾಗಿದ್ದು, ಕ್ರೀಡಾಪಟುಗಳು ಕರ್ನಾಟಕದಾದ್ಯಂತ ಇರುವ ಕೇಂದ್ರಗಳಲ್ಲಿ ಉಳಿಯಬಹುದು.

ಪ್ರವಾಸ ಭತ್ಯೆ:

3.24. ಒಂದು ವೇಳೆ ಸ್ಥಳೀಯವಾಗಿ ಒಂದು ನಿರ್ದಿಷ್ಟವಾದ ನೆರವು ಸಿಗದೇ ಇದ್ದಲ್ಲಿ, ತರಬೇತಿ ಮತ್ತು ಪ್ರವಾಸ ಭತ್ಯೆ ಯೋಜನೆಯ ಅಡಿಯಲ್ಲಿ ಅಂತಹ ಸಹಕಾರವನ್ನು ದೇಶದ ಇತರೆಡೆ ಅಥವಾ ಅಂತರಾಷ್ಟ್ರೀಯ ಮಟ್ಟದಲ್ಲಿ ಪಡೆದುಕೊಳ್ಳುವುದು. ಸದರಿ ಪ್ರವಾಸ ಭತ್ಯೆ ಯೋಜನೆಯು ಅಂತರಾಷ್ಟ್ರೀಯ ತೆರೆದುಕೊಳ್ಳುವಿಕೆಗೆ ಮತ್ತು ಇತರೆ ಪ್ರಮುಖ ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಒಳಗೊಂಡಿರುತ್ತದೆ.

ಪ್ರತಿಭಾನ್ವೇಷಣೆ ಮತ್ತು ಭಾಗವಹಿಸುವಿಕೆ.

ರಾಜ್ಯದಲ್ಲಿನ ಸುಮಾರು 1000 ಪ್ರತಿಭೆಗಳನ್ನು ಗುರುತಿಸುವ ಸಲುವಾಗಿ 'ಕರ್ನಾಟಕ ಸಹಸ್ರ ಕ್ರೀಡಾ ಪ್ರತಿಭಾ ಯೋಜನೆ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಪಟ್ಟಿಯು ಅಥ್ಲೀಟ್‌ಗಳ ಸಾಧನೆಯನ್ನು ಆಧರಿಸಿ ತಯಾರಿಸುವುದು. ಇಂತಹ ಕ್ರೀಡಾಪಟುಗಳಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಸಾಧನೆಯನ್ನು ಮಾಡಲು ಅಗತ್ಯವಾದ ಎಲ್ಲಾ ನೆರವನ್ನು ಒದಗಿಸುವುದು.

ಪ್ರತಿಯೊಬ್ಬ ಕ್ರೀಡಾಪಟುವಿಗೂ ಗುರಿಗಳನ್ನು ನೀಡಲಾಗಿದ್ದು ಅವುಗಳನ್ನು ನಿಯಮಿತವಾಗಿ ಪರಿವೀಕ್ಷಿಸುವುದು. ಕ್ರೀಡಾಪಟುವು ಸದರಿ ಯೋಜನೆಯಲ್ಲಿ ಮುಂದುವರೆಯಬಹುದೇ ಇಲ್ಲವೇ ಎಂಬುದರ ಬಗ್ಗೆ ವಿಶ್ಲೇಷಣೆಯನ್ನು ಮಾಡಲಾಗುವುದು.

3.25. ಚಿಕ್ಕ ವಯಸ್ಸಿನಲ್ಲಿಯೇ ವಿವಿಧ ವಿಭಾಗಗಳಲ್ಲಿ ಪ್ರತಿಭೆಯನ್ನು ಗುರುತಿಸಿ ಅವರಿಗೆ ಮುಂದುವರೆಯಲು ಮೊದಲ ಹೆಜ್ಜೆ ಇಡಲು ನೆರವು ನೀಡುವುದು ಮುಖ್ಯವಾಗಿರುತ್ತದೆ. ಭಾರತದಲ್ಲಿ ಪ್ರತಿಭೆಯನ್ನು ಗುರುತಿಸಲು ಇರುವ ಸಾಮಾನ್ಯ ನೀತಿ ಎಂದರೆ, ಶಾಲಾ ಮಟ್ಟದಲ್ಲಿ ಮಕ್ಕಳಲ್ಲಿರುವ ಕ್ರೀಡಾ ಪ್ರತಿಭೆಯನ್ನು ಗುರುತಿಸುವುದು. ಮತ್ತು ಇವುಗಳನ್ನು

ರಾಜ್ಯದಲ್ಲಿನ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಪ್ರತಿ ವರ್ಷ ದೈಹಿಕ ಸಾಮರ್ಥ್ಯದ ಅನುಗುಣವಾಗಿ ಪ್ರತಿಭೆಯನ್ನು ಗುರುತಿಸಬಹುದಾಗಿದೆ. ಇದಕ್ಕಾಗಿ ಕೆಲವೊಂದು ನಿರ್ದಿಷ್ಟ ಪರೀಕ್ಷೆಗಳದ್ದು, ಹಲವಾರು ಸುತ್ತುಗಳಲ್ಲಿ ಅವರುಗಳು ಪಡೆದ ಅಂಕಗಳನ್ನು ಕ್ರೀಡಾ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸುವ ಮೂಲಕ ಮಾಡಬಹುದು. ಸದರಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳ ಆಧಾರದಲ್ಲಿ ಅವರಿಗೆ ಉತ್ತೇಜನಗಳನ್ನು ನೀಡಲಾಗುವುದು.

3.26. ಪ್ರಸ್ತುತ ಕರ್ನಾಟಕದಲ್ಲಿ ಪ್ರತಿಭಾನ್ವೇಷಣೆಯನ್ನು ಈ ಕೆಳಕಂಡ ಮೂರು ಹಂತಗಳಲ್ಲಿ ಮಾಡಲಾಗುವುದು.

(ಎ) ಶಾಲಾ ಮಕ್ಕಳಿಗಾಗಿ ಕ್ರೀಡಾ ಪ್ರತಿಭೆ ಮೌಲ್ಯಮಾಪನ ಮಾಧ್ಯಮ (ಎಸ್.ಟಿ.ಇ.ಎಂ.) ಮೂಲಕ ಪ್ರತಿಭಾನ್ವೇಷಣೆ.

3.27. 10 ರಿಂದ 16 ವರ್ಷ ವಯಸ್ಸಿನ ಮಕ್ಕಳ ಕ್ರೀಡಾ ಪ್ರತಿಭೆಯನ್ನು ಶಾಲಾ ಮಟ್ಟದಲ್ಲಿ ದೈಹಿಕ ಶಿಕ್ಷಕರು ಗುರುತಿಸಬಹುದು ಮತ್ತು ಅವರಿಗೆ ಎಸ್.ಟಿ.ಇ.ಎಂ. ಕಾರ್ಯಕ್ರಮಕ್ಕೆ ಸೇರಿಸಬಹುದು. ಸದರಿ ಎಸ್.ಟಿ.ಇ.ಎಂ. ಕಾರ್ಯಕ್ರಮವು ಒಟ್ಟು ನಾಲ್ಕು ಪರೀಕ್ಷಾ ಹಂತಗಳನ್ನು ಹೊಂದಿದ್ದು, ಶಾಲಾ ಮಕ್ಕಳ ಪ್ರತಿಭೆ, ಅರ್ಹತೆ, ಗುಣಮಟ್ಟ, ಪರಿಣಿತಿಯನ್ನು ಈ ಕೆಳಕಂಡಂತೆ ಪರೀಕ್ಷಿಸಲಾಗುವುದು

* ಹಂತ-1: ದೈಹಿಕ ಶಿಕ್ಷಕರಿಂದ ಗುರುತಿಸಲ್ಪಟ್ಟ ಶಾಲಾ ಮಕ್ಕಳು ಹಲವಾರು ಪರೀಕ್ಷೆಗಳಿಗೆ ಒಳಪಡುತ್ತಾರೆ ಅಂದರೆ ಅವರುಗಳ ಶಕ್ತಿ, ಸಾಮರ್ಥ್ಯ, ವೇಗ ಇವುಗಳನ್ನು ಅವರ ವಯೋಮಾನಕ್ಕೆ ನಿರ್ದಿಷ್ಟಪಡಿಸಿದಂತೆ ನಡೆಸಲಾಗುವುದು. ಈ ಹಂತವನ್ನು ಪ್ರತಿ ತಾಲ್ಲೂಕು ಮಟ್ಟದಲ್ಲಿ ಕಾಲಕಾಲಕ್ಕೆ ಸಮುದಾಯ ತರಬೇತುದಾರರಿಂದ ನಡೆಸಲಾಗುವುದು.

* ಹಂತ-2: ಒಂದನೇ ಹಂತದಲ್ಲಿ ಅರ್ಹತೆ ಗಳಿಸಿದ ಅಥ್ಲೀಟ್‌ಗಳನ್ನು ಅವರ ಮುಂದಿನ ಪ್ರತಿಭೆಯನ್ನು ಗುರುತಿಸಲು ಜಿಲ್ಲಾ ಮಟ್ಟದ ಪರೀಕ್ಷೆಗಳಿಗೆ ಕರೆತರಲಾಗುವುದು. ಇಂತಹ ಪರೀಕ್ಷೆಗಳನ್ನು ಜಿಲ್ಲಾ ಮಟ್ಟದಲ್ಲಿ ಮಾಧ್ಯಮಿಕ ತರಬೇತುದಾರರಿಂದ ನಡೆಸಲಾಗುವುದು.

*	ಹಂತ–3:	ಎರಡನೇ ಹಂತದಲ್ಲಿ ಅರ್ಹತೆ ಗಳಿಸಿದ ಅಥ್ಲೀಟ್‌ಗಳನ್ನು ಅಂತಿಮವಾಗಿ ಉನ್ನತ ಸಾಧನಾ ಘಟಕದಲ್ಲಿ ಸೂಕ್ತವಾದ ತರಬೇತುದಾರರಿಂದ ಪರೀಕ್ಷೆಗೆ ಒಳಪಡಿಸಲಾಗುವುದು.

*	ಹಂತ–4:	ಎಸ್.ಟಿ.ಇ.ಎಂ.ನ ಈ ಮೂರೂ ಹಂತಗಳಲ್ಲಿ ಅರ್ಹತೆ ಗಳಿಸಿದ ಅಥ್ಲೀಟ್‌ಗಳು ಕಾರ್ಡೆಡ್ ಅಥ್ಲೀಟ್‌ಗಳಾಗುತ್ತಾರೆ ಮತ್ತು ಇವರು ಅನುದಾನ, ತರಬೇತಿ ಮುಂತಾದ ನೆರವಿಗೆ ಅರ್ಹರಾಗುತ್ತಾರೆ.

(ಬಿ)	ಕರ್ನಾಟಕದ ಮಾನ್ಯತೆ ಪಡೆದ ತರಬೇತುದಾರರಿಂದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸ್ಪರ್ಧೆಗಳ ಮೂಲಕ ಪ್ರತಿಭಾನ್ವೇಷಣೆ:

3.28.	ಪದಕ ವಿಜೇತರು ಮತ್ತು ಅಥ್ಲೀಟ್‌ಗಳು ವಿಶೇಷವಾದ ಪ್ರತಿಭೆಗಳಾಗಿದ್ದು, ಅವರುಗಳನ್ನು ರಾಜ್ಯದ ಮಾನ್ಯತೆ ಪಡೆದ ತರಬೇತುದಾರರು, ಅವಶ್ಯಕತೆ ಇದ್ದಲ್ಲಿ ಸೂಕ್ತ ತರಬೇತಿಯನ್ನು ಒದಗಿಸುವ ಮೂಲಕ ಗುರುತಿಸುತ್ತಾರೆ. ಪ್ರತಿಯೊಂದು ಆಯ್ಕೆ ಪ್ರಕ್ರಿಯೆಯ ಕೊನೆಯಲ್ಲಿ, ಪದಕ ಗೆಲ್ಲುವ ಅರ್ಹತೆಯುಳ್ಳ ಅಥ್ಲೀಟ್‌ಗಳು ಕಾರ್ಡೆಡ್ ಅಥ್ಲೀಟ್‌ಗಳಾಗುತ್ತಾರೆ ಮತ್ತು ಅವರು ಅನುದಾನ, ತರಬೇತಿ ಮುಂತಾದ ನೆರವಿಗೆ ಅರ್ಹರಾಗುತ್ತಾರೆ.

ಕ್ರೀಡಾಪಟುಗಳಿಗೆ ಶೈಕ್ಷಣಿಕ ನೆರವು:

3.29.	ಸದರಿ ನೀತಿಯು ಈ ಕೆಳಕಂಡ ವಿಷಯಗಳ ಆಧಾರದಲ್ಲಿ ಶೈಕ್ಷಣಿಕವಾಗಿ ಕ್ರೀಡಾಪಟುಗಳಿಗೆ ಸಹಕಾರ ಒದಗಿಸಲಾಗುವುದು.

ಡಿ.ವೈ.ಇ.ಎಸ್. ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ದೇಶ ಹಾಗೂ ರಾಜ್ಯದ ಘನತೆ, ಗೌರವವನ್ನು ಬೆಳಗಿಸಿದ ಕ್ರೀಡಾಪಟುಗಳಿಗೆ ಈ ಕೆಳಕಂಡ ಉತ್ತೇಜನಗಳನ್ನು ಒದಗಿಸಲು ಕೋರಿಕೊಳ್ಳುತ್ತದೆ.

*	ಗ್ರೇಸ್ ಮಾರ್ಕ್ಸ್ / ಹೆಚ್ಚುವರಿ ಅಂಕಗಳು: ಪ್ರತಿಯೊಂದು ವಿಷಯಗಳಲ್ಲೂ ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದವರೆಗೂ (ಸಾಧನೆಗೆ ಅನುಗುಣವಾಗಿ ಪ್ರತಿಯೊಂದು ವಿಷಯದಲ್ಲೂ ಗರಿಷ್ಟ 25 ಅಂಕಗಳು: ಅಂತರಾಷ್ಟ್ರೀಯ–25 ಗರಿಷ್ಟ, ಮತ್ತು ರಾಷ್ಟ್ರೀಯ–15 ಗರಿಷ್ಟ ಮತ್ತು ರಾಜ್ಯ–10).

*	ಹಾಜರಾತಿ ರಿಯಾಯಿತಿ: ತರಬೇತಿ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ ಅವಧಿಗೆ.

* ಒಂದು ವೇಳೆ ಪರೀಕ್ಷೆ ಮತ್ತು ಪ್ರಾಂತೀಯ, ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗಳ ದಿನಾಂಕಗಳು ಒಂದೇ ದಿನ ಬಂದಲ್ಲಿ, ಕ್ರೀಡಾಪಟುಗಳಿಗೆ ಪ್ರತ್ಯೇಕವಾದ ಪರೀಕ್ಷೆಯನ್ನು ನಡೆಸುವುದು.

* ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ) ಮೂಲಕ ಕ್ರೀಡಾ ಮೀಸಲಾತಿ ಅಡಿಯಲ್ಲಿ ಕ್ರೀಡಾಪಟುಗಳಿಗೆ ಪ್ರವೇಶಾತಿ.

  ಒಲಂಪಿಕ್ ಕ್ರೀಡೆಗಳಲ್ಲಿ ವೈಯಕ್ತಿಕ ಮತ್ತು ತಂಡ ಇವುಗಳ ಅನುಸಾರ ಆದ್ಯತೆಯನ್ನು ನೀಡುವುದು.  ವೈಯಕ್ತಿಕ ಕ್ರೀಡೆಯು ಹೆಚ್ಚಿನ ಆದ್ಯತೆಯನ್ನು ಪಡೆಯುತ್ತದೆ.

  ಸಿ.ಇ.ಟಿ. ಶಿಫಾರಸ್ಸನ್ನು ಕರ್ನಾಟಕ ಒಲಂಪಿಕ್ ಸಂಸ್ಥೆಯು ಒಪ್ಪುವುದು ಮತ್ತು ಅಂತಿಮವಾಗಿ ಡಿ.ವೈ.ಇ.ಎಸ್. ರವರು ಅನುಮೋದಿಸುತ್ತಾರೆ.

ಕ್ರೀಡಾಪಟುಗಳಿಗೆ ವೃತ್ತಿಪರ ಕ್ರೀಡಾ ಜೀವನದ ನಂತರದಲ್ಲಿ ನೆರವು.

3.30 ಸದರಿ ನೀತಿಯು ಕ್ರೀಡಾಪಟುಗಳಿಗೆ ಈ ಕೆಳಕಂಡ ರೀತಿಯಲ್ಲಿ ನೆರವು ಒದಗಿಸುತ್ತದೆ.

- ಎಲ್ಲಾ ಮಾಜಿ ಕ್ರೀಡಾಪಟುಗಳಿಗೆ ಪಿಂಚಣಿ ಯೋಜನೆ (ನಿಗಧಿತ ವಾರ್ಷಿಕ ವರಮಾನಕ್ಕಿಂತ ಕಡಿಮೆ ಇರುವವರಿಗೆ) ಮತ್ತು ಸದರಿ ಪಿಂಚಣಿ ಯೋಜನೆಯು ಪ್ರತಿ ಎರಡು ವರ್ಷಗಳಿಗೊಮ್ಮೆ ಪರಿಶೀಲಿಸಲ್ಪಡುವುದು.
- ವಸತಿ ನಿವೇಶನಗಳ ಹಂಚಿಕೆ / ಒಲಂಪಿಕ್ಸ್ / ಪ್ಯಾರಾಲಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದಿರುವವರು ಅಥವಾ ಏಷಿಯನ್/ಕಾಮನ್‌ವೆಲ್ತ್ ಆಟಗಳಲ್ಲಿ ಚಿನ್ನದ ಪದಕ ಗೆದ್ದಿರುವವರಿಗೆ ನಿವೇಶನಗಳ ಹಂಚಿಕೆಯಲ್ಲಿ ಆದ್ಯತೆ ಒದಗಿಸಲು ಪ್ರಯತ್ನಿಸುವುದು.
- ನಿವೃತ್ತ ಅಥ್ಲೀಟ್‌ಗಳಿಗೆ ರಾಜ್ಯದ ಸ್ಟ್ರಾಟಜಿಕ್ ಕೋಚ್ ಡೆವಲಪ್‌ಮೆಂಟ್ ಕಾರ್ಯಕ್ರಮದಲ್ಲಿ ಸಕ್ರಿಯ ನೇಮಕಾತಿ.
- **ರಾಜ್ಯ ಸರ್ಕಾರಿ ಸೇವೆಗೆ ನೇರ ನೇಮಕಾತಿ.**

ದರ್ಜೆ–1 ಪತ್ರಾಂಕಿತ ಅಧಿಕಾರಿ: ಒಲಂಪಿಕ್ಸ್‌ನಲ್ಲಿ ಪದಕ ಗೆದ್ದಿರುವ ಕ್ರೀಡಾಪಟು ಮತ್ತು
ದರ್ಜೆ–2 ಪತ್ರಾಂಕಿತ ಅಧಿಕಾರಿ, ಏಷಿಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತು ಗೇಮ್ಸ್‌ಗಳಲ್ಲಿ ಪದಕ ಗೆದ್ದಿರುವವರು ಇವರಿಗೆ ಅವರ ವಿದ್ಯಾಭ್ಯಾಸ, ಅಸಕ್ತಿ, ಪರಿಣಿತಿಗೆ ಸಂಬಂಧಪಟ್ಟಂತೆ ಅವರ ಸಾಧನೆಯ ಅನುಸಾರ ರಾಜ್ಯ ಸರ್ಕಾರಿ ಇಲಾಖೆಗಳಲ್ಲಿ ಒದಗಿಸುವುದು.

* ಮೀಸಲಾತಿ

  ಒಲಂಪಿಕ್‌ನಲ್ಲಿರುವ ಕ್ರೀಡೆಗಳಲ್ಲಿ ಸಾಧನೆ ಮಾಡಿದ ಕ್ರೀಡಪಟುಗಳಿಗೆ ಅವರ ವಿದ್ಯಾರ್ಹತೆ ಪ್ರಕಾರ ರಾಜ್ಯ ಸರ್ಕಾರದ ಎಲ್ಲಾ ಇಲಾಖೆ, ಮಂಡಳಿ ಮತ್ತು ಕಾರ್ಪೋರೇಷನ್‌ಗಳಲ್ಲಿ ಸಿ ಮತ್ತು ಡಿ ವರ್ಗದಲ್ಲಿ 3% ಮೀಸಲಾತಿ.

*   ಖಾಸಗಿ ಕ್ಷೇತ್ರಗಳಲ್ಲಿ ಲಾಭದಾಯಕ ವೃತ್ತಿಯನ್ನು ಪಡೆಯಲು ಅನುಕೂಲವಾಗುವಂತೆ ತರಬೇತಿ ಶಿಬಿರ ಮತ್ತು ಉದ್ಯೋಗ ಮೇಳಗಳನ್ನು ನಡೆಸುವುದು.
*   ಖಾಸಗಿ ಕ್ಷೇತ್ರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ತರಬೇತಿ ಕಾರ್ಯಕ್ರಮಗಳಿಗೆ ಸಹಾಯ

ಸಿ. ಕ್ರೀಡಾ ಸಾಮಗ್ರಿಗಳ ಉದ್ಯಮ:

3.31. ಕ್ರೀಡಾ ಸಾಮಗ್ರಿಗಳ ಉದ್ಯಮವು ರಾಜ್ಯದ ಜಿ.ಡಿ.ಪಿ. ಹೆಚ್ಚಾಗಲು ಅನುಕೂಲವಾಗುವುದಲ್ಲದೆ, ಸಾಮಾನ್ಯ ಜನರಿಗೆ ಕ್ರೀಡಾ ಸಾಮಗ್ರಿಗಳು ಕಡಿಮೆ ಬೆಲೆಯಲ್ಲಿ ದೊರೆಯಲು ಅನುಕೂಲವಾಗುತ್ತದೆ. ಸರ್ಕಾರವು ವಿಶೇಷ ಆರ್ಥಿಕ ವಲಯದ ಕ್ರೀಡಾ ಸಾಮಗ್ರಿಗಳ ಅಂದರೆ ಏರೋ ಸ್ಪೇಸ್ ಉದ್ದಿಮೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಉತ್ತೇಜನಗಳನ್ನು ನೀಡಿದ್ದು,. ಈ ಉದ್ದಿಮೆಯು ಸಹ ಒಂದು ಕಾರ್ಮಿಕ ಸಂಬಂಧಿತ ಉದ್ದಿಮೆಯಾಗಿದ್ದು, ಚೀನಾದಂತೆ ವಿಶ್ವಾದ್ಯಂತ ಮಾನ್ಯತೆ ಹೊಂದಿದೆ. ಇಂದು ಒಂದು ಬದಲಿ ಉದ್ಯೋಗ ಕ್ಷೇತ್ರವಾಗಿ ಕೆಲಸ ನಿರ್ವಹಿಸುತ್ತದೆ. ಕ್ರೀಡಾ ಸಾಮಗ್ರಿಗಳ ತಯಾರಿಕೆ ಮತ್ತು ಕ್ರೀಡಾ ಸಂಬಂಧಿ ಸೇವೆಗಳನ್ನು ಕರ್ನಾಟಕ ಉದ್ಯಮ ನೀತಿ 2014-19 ರಲ್ಲಿ ಸೇರಿದ್ದು, ಇದನ್ನು ರಾಜ್ಯ ಸರ್ಕಾರದ ಒಂದು ಉದ್ದಿಮೆ/ಸೇವಾ ಉದ್ಯಮವಾಗಿ ಪರಿಗಣಿಸುವುದು.

3.32. ಕ್ರೀಡಾ ಸಾಧನೆ, ಕ್ರೀಡಾ ಮಾಧ್ಯಮ ಮತ್ತು ಕ್ರೀಡಾ ಪ್ರಸಾರವು ತಾಂತ್ರಿಕವಾಗಿ ಬೆಳವಣಿಗೆ ಹೊಂದುತ್ತಾ ಬಂದಿದ್ದು, ತಾಂತ್ರಿಕ ವ್ಯವಹಾರದಲ್ಲಿ ಹಲವಾರು ಅವಕಾಶಗಳನ್ನು ಒದಗಿಸುತ್ತಿದೆ. ರಾಜ್ಯದಲ್ಲಿ ತಾಂತ್ರಿಕವಾಗಿ ಒಂದು ಸದೃಢ ಸಾಮರ್ಥ್ಯವನ್ನು ಹೊಂದಿ, ಕ್ರೀಡಾ ತಾಂತ್ರಿಕತೆಯಲ್ಲಿ ಹೊಸ ಅವಕಾಶಗಳನ್ನು ಒದಗಿಸುತ್ತಿದೆ ಮತ್ತು ಕ್ರೀಡಾ ತಾಂತ್ರಿಕತೆಯಲ್ಲಿ ಆಧುನಿಕ ಬೆಳವಣಿಗೆಯ ಕೇಂದ್ರವಾಗಿ ಕರ್ನಾಟಕವು ಸ್ಥಾನ ಗಳಿಸಿದೆ.

3.33. ಇದೇ ರೀತಿಯಾಗಿ ರಾಜ್ಯವು ಕ್ರೀಡಾ ಪ್ರವಾಸೋದ್ಯಮದಲ್ಲಿ ತನ್ನ ಕಾಣಿಕೆಯನ್ನು ನೀಡುತ್ತಿದ್ದು, ಇದರಿಂದ ಕರ್ನಾಟಕದ ಕ್ರೀಡಾ ಸಂಸ್ಕೃತಿಯನ್ನು ಪ್ರಚುರಪಡಿಸಬಹುದಾಗಿದೆ. ರಾಜ್ಯದಲ್ಲಿ ವರ್ಷಪೂರ್ತಿ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದ್ದು, ಇದು ವಿಶ್ವಾದ್ಯಂತ ಪ್ರವಾಸೋದ್ಯಮವನ್ನು ಆಕರ್ಷಿಸುತ್ತದೆ.

3.34. ಸಾಹಸ ಕ್ರೀಡೆಗಳ ಉತ್ತೇಜನ ಮತ್ತು ಬೆಳವಣಿಗೆಗೆ ಕ್ರೀಡಾ ಪ್ರವಾಸೋದ್ಯಮವನ್ನು ಬಳಸಬಹುದಾಗಿದೆ. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ (ಚೇತನಾ) ಸಂಸ್ಥೆಯು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿದೆ. ಕರ್ನಾಟಕವನ್ನು ಸಾಹಸ ಕೇಂದ್ರಗಳ ಕೇಂದ್ರವನ್ನಾಗಿ ಪರಿಗಣಿಸಲು ಕ್ರಮ ವಹಿಸಬಹುದಾಗಿದೆ. ರಾಜ್ಯದ ಭೌಗೋಳಿಕ ಲಕ್ಷಣಗಳು ಮತ್ತು ಅನುಕೂಲತೆಗಳನ್ನು ಈ ಸಂಬಂಧ ಬಳಸಬಹುದಾಗಿದೆ.

3.35 ಬ್ರಾಂಡ್ ಅಂಬಾಸಿಡರ್ಸ್:

ಖ್ಯಾತ ಕ್ರೀಡಾಪಟುಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

ಡಿ. ಕ್ರೀಡಾ ವಿಜ್ಞಾನ/ಔಷಧ:

3.36. ಕ್ರೀಡಾಪಟುಗಳು ಅತ್ಯುತ್ತಮ ಸಾಧನೆಯನ್ನು ತೋರುವಲ್ಲಿ ಮತ್ತು ಕಾಪಾಡುವಲ್ಲಿ ಕ್ರೀಡಾ ವಿಜ್ಞಾನ/ಔಷಧಗಳು ಅವಶ್ಯಕವಾಗಿರುತ್ತವೆ. ಕ್ರೀಡಾ ವಿಜ್ಞಾನ/ಔಷಧಗಳು ಆರ್ಥೋಪೆಡಿಕ್, ಫಿಸಿಯೋಥೆರಪಿ, ಟ್ರೈನರ್ಸ್, ನ್ಯೂಟ್ರಿಷಿಯನ್, ಬಯೋಮೆಕಾನಿಕ್ಸ್, ಟ್ರೈನಿಂಗ್ ಮೆಥಡ್, ರೀಹ್ಯಾಬಿಲಿಟೇಷನ, ಮತ್ತು ಚಿಕಿತ್ಸೆ ಮತ್ತು ಗಾಯಗಳ ಸಂಬಂಧಿತ ಕ್ರೀಡೆ ಮತ್ತು ವ್ಯಾಯಾಮಗಳನ್ನು ಒಳಗೊಂಡಿರುತ್ತದೆ.

3.37. ಪ್ರಸ್ತುತ, ದೇಶದಲ್ಲಿ ಕೆಲವೇ ಕೆಲವು ಕಾರ್ಪೋರೇಟ್ ಆಸ್ಪತ್ರೆಗಳು ಪ್ರತ್ಯೇಕವಾದ ಕ್ರೀಡಾ ವಿಜ್ಞಾನ/ಔಷಧ ವಿಭಾಗವನ್ನು ಹೊಂದಿರುತ್ತವೆ. ಆದರೆ, ಭಾರತದಲ್ಲಿ ಕ್ರೀಡಾ ಔಷದ ಬೆಳವಣಿಗೆಗಾಗಿ ರಾಜ್ಯ ಸರ್ಕಾರ ಮತ್ತು ಕ್ರೀಡಾ ಸಂಸ್ಥೆಗಳು ಸೂಕ್ತ ಸಹಕಾರ ನೀಡುವ ಅವಶ್ಯಕತೆ ಇರುತ್ತದೆ. ಈ ನಿಟ್ಟಿನಲ್ಲಿ ಈ ನೀತಿಯು ಕರ್ನಾಟಕವನ್ನು ಕ್ರೀಡಾ ವಿಜ್ಞಾನ/ಔಷಧಕ್ಕೆ ಸಂಬಂಧಪಟ್ಟ ಅವಶ್ಯಕತೆಗಳಿಗೆ ಕೇಂದ್ರವನ್ನಾಗಿ ರೂಪಿಸುತ್ತದೆ. ಸದರಿ ಕೇಂದ್ರವು ಕ್ರೀಡಾ ವಿಜ್ಞಾನ/ಔಷಧ ವಿಭಾಗದಲ್ಲಿ ನುರಿತ ಫಿಸಿಯೋಥೆರಪಿಸ್ಟ್, ವೈದ್ಯರು ಮತ್ತು ಸಲಹೆಗಾರರನ್ನು ಹೊಂದಿರುತ್ತದೆ. ಕರ್ನಾಟಕದಲ್ಲಿ ಬೆಂಗಳೂರು ಮತ್ತು ಮಣಿಪಾಲ್‌ಗಳಲ್ಲಿ ಕ್ರೀಡಾ ಔಷಧಕ್ಕೆ ಸಂಬಂಧಪಟ್ಟ ಆಸ್ಪತ್ರೆಗಳ ಕೇಂದ್ರವಾಗುವ ಅವಕಾಶಗಳು ಇರುತ್ತವೆ. ರಾಜ್ಯ ಸರ್ಕಾರವು ಇವುಗಳ ನಕಲಿಗೆ ಪ್ರಯತ್ನಿಸುವುದರ ಬದಲಾಗಿ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ನೆರವು ನೀಡಿ ಉತ್ತೇಜಿಸಬೇಕಾಗಿದೆ.

ಇ. ಕ್ರೀಡಾ ತಂತ್ರಜ್ಞಾನ ಕೇಂದ್ರ:

3.38. ಕ್ರೀಡಾ ತಂತ್ರಜ್ಞಾನವು ಬೆಳೆಯುತ್ತಿರುವ ವಿಷಯವಾಗಿದೆ ಮತ್ತು ಬೆಂಗಳೂರು ಈ ವಿಷಯದಲ್ಲಿ ಒಂದು ಉತ್ತಮ ಸ್ಥಾನವನ್ನು ಹೊಂದಿದೆ. ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸುವಲ್ಲಿ ಬೆಂಗಳೂರು ಹೆಸರುವಾಸಿಯಾಗಿದ್ದು, ಅಥ್ಲೀಟ್‌ಗಳ ಸಾಧನೆ/ಪ್ರದರ್ಶನಕ್ಕೆ ಸಂಬಂಧಪಟ್ಟ ವಿವರಗಳನ್ನು ಸಂಗ್ರಹಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇವುಗಳನ್ನು ವಿಡಿಯೋ ಮತ್ತು ಮಾಹಿತಿ, ಬಯೋಮೆಕ್ಯಾನಿಕ್ಸ್, ಸೆನ್ಸಾರ್ ತಂತ್ರಜ್ಞಾನ ಮುಂತಾದವುಗಳ ಮೂಲಕ ಮಾಡಬಹುದಾಗಿದೆ. ಅಥ್ಲೀಟ್‌ಗಳ ವಿವರಗಳನ್ನು ಸಂಗ್ರಹಿಸುವುದು ಅವರುಗಳ ಪ್ರದರ್ಶನವನ್ನು ಉತ್ತಮಗೊಳಿಸುವಲ್ಲಿ ಅನುಕೂಲವಾಗುತ್ತದೆ. ವಿವರಗಳ ವಿಶ್ಲೇಷಣೆಯು ಅವರುಗಳ ತರಬೇತುದಾರರಿಗೆ ಅವರನ್ನು ಹುರಿಗೊಳಿಸುವಲ್ಲಿ ಸಹಕಾರಿಯಾಗುತ್ತದೆ.

3.39. ಅಂತಹ ಕ್ರೀಡಾ ಕೇಂದ್ರಗಳು ವಿಶ್ವ ಗುಣಮಟ್ಟದ ಕ್ರೀಡಾ ವಿಜ್ಞಾನ/ಔಷಧ ಮತ್ತು ಕ್ರೀಡಾ ತಂತ್ರಜ್ಞಾನಗಳು ನಮ್ಮ ಅಥ್ಲೀಟ್‌ಗಳ ಪ್ರದರ್ಶನವನ್ನು ಉತ್ತಮಗೊಳಿಸುವಲ್ಲಿ ಬೆನ್ನೆಲುಬಾಗಿರುತ್ತದೆ. ಅಂತರಾಷ್ಟ್ರೀಯ ಕ್ರೀಡೆಗಳಲ್ಲಿ ಆಸ್ಟ್ರೇಲಿಯಾವು ಯಶಸ್ವಿಯಾಗಲು ಆಸ್ಟ್ರೇಲಿಯನ್ ಕ್ರೀಡಾ ಸಂಸ್ಥೆಯು ಪ್ರಮುಖ ಕಾರಣವಾಗಿರುವುದನ್ನು ಗಮನಿಸಬಹುದು.

ಎಫ್. ಖಾಸಗಿ ಸಂಸ್ಥೆಗಳ ತೊಡಗಿಸುವಿಕೆ

3.40 ಇಂಡಿಯನ್ ಪ್ರೀಮಿಯರ್ ಲೀಗ್ ಮತ್ತು ಇತರೆ ಕ್ರೀಡಾ ಮನೋರಂಜನಾ ಕ್ಷೇತ್ರದಲ್ಲಿ ಕಾರ್ಪೋರೇಟ್ ಸಂಸ್ಥೆಗಳು ಉತ್ತೇಜನ ನೀಡುತ್ತಿದ್ದು, ಇವುಗಳು ಕ್ರೀಡೆಯ ಮೇಲೆ ಹೂಡಿಕೆ ಮಾಡಲು ಸಾಮರ್ಥ್ಯ ಉಳ್ಳವರಾಗಿರುತ್ತಾರೆ.. ಅಲ್ಲದೆ ಕಾರ್ಪೋರೇಟ್ ಸಂಸ್ಥೆಗಳು ಕ್ರೀಡೆಯ ಮೇಲೆ ಬಂಡವಾಳ ಹೂಡುವುದನ್ನು ತಮ್ಮ ಸಾಮಾಜಿಕ ಜವಾಬ್ದಾರಿ ಸೇವೆ (ಸಿ.ಎಸ್.ಆರ್) ರ ಒಂದು ಭಾಗವಾಗಿರುತ್ತದೆ. ಖಾಸಗಿ ಸಂಸ್ಥೆಗಳಿಂದ ಬಂಡವಾಳ ಕ್ರೂಢೀಕರಿಸಿ ಕ್ರೀಡೆ ಮತ್ತು ಕ್ರೀಡಾಪಟುಗಳ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುವುದು.

3.41. ಸರ್ಕಾರವು ಹಲವು ಯೋಜನೆಗಳು ಹಾಗೂ ಉತ್ತೇಜನಗಳನ್ನು ನೀಡುವ ಮೂಲಕ ಕರ್ನಾಟಕದಲ್ಲಿ ಕ್ರೀಡಾ ಅಭಿವೃದ್ಧಿಗಾಗಿ ಕಾರ್ಪೋರೇಟ್ ಮತ್ತು ಖಾಸಗಿ ಸಂಸ್ಥೆಗಳನ್ನು ಕ್ರೀಡೆಗಾಗಿ ಬಂಡವಾಳ ಹೂಡಲು ಉತ್ತೇಜಿಸುತ್ತಿದೆ. ಕ್ರೀಡೆಯಲ್ಲಿ ಹೂಡಿಕೆ ಅಂದರೆ, ಅಭಿವೃದ್ಧಿ, ಹಣ ಹೂಡಿಕೆ, ಕ್ರೀಡಾ ಅಕಾಡೆಮಿಗಳ ನಿರ್ವಹಣೆ, ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರಾಯೋಜಕತ್ವ ವಹಿಸುವುದು, ಕ್ರೀಡಾ ಸಂಸ್ಥೆಗಳ ನಿರ್ವಹಣೆ, ಅತ್ಲೀಟ್‌ಗಳಿಗೆ ಪ್ರಾಯೋಜಕತ್ವ ವಹಿಸುವುದು ಮುಂತಾದವುಗಳನ್ನು ಒಳಗೊಂಡಿರುತ್ತದೆ. ಹೂಡಿಕೆ ಅವಕಾಶಗಳನ್ನು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ನಡುವೆ ಪರಸ್ಪರ ಗುರುತಿಸಿ ನಿರ್ವಹಿಸಬಹುದಾಗಿದೆ. ಕರ್ನಾಟಕದಲ್ಲಿ ದೀರ್ಘಾವಧಿ ಯೋಜನೆಗಳ ಅನುಷ್ಠಾನವನ್ನು ಅರ್ಥಪೂರ್ಣವಾಗಿ ನಿರ್ವಹಿಸಲು ಹೂಡಿಕೆದಾರರು ಮತ್ತು ದಾನಿಗಳಿಗೆ ಸೂಕ್ತ ಅವಕಾಶವನ್ನು ಒದಗಿಸುತ್ತದೆ. ಖಾಸಗಿ ಸಂಸ್ಥೆಗಳನ್ನು ಕ್ರೀಡಾ ವಲಯದಲ್ಲಿ ತರುವುದರಿಂದ ಕ್ರೀಡೆಯಲ್ಲಿ ಹೆಚ್ಚಿನ ಬದ್ಧತೆ ಉಂಟಾಗುತ್ತದೆ. ಉದಾಹರಣೆಗೆ ಈ ಕೆಳಕಂಡ ಯೋಜನೆಗಳು ಈ ಕ್ರೀಡಾ ನೀತಿಯ ಅಡಿಯಲ್ಲಿ ಖಾಸಗಿ ವಲಯಗಳ ಭಾಗಿತ್ವಕ್ಕೆ ಅವಕಾಶ ಒದಗಿಸುತ್ತದೆ.

- ಅಥ್ಲೀಟ್‌ಗಳಿಗೆ ತರಬೇತಿ ಮತ್ತು ಸಾಮಗ್ರಿಗಳ ಪ್ರಾಯೋಜಕತ್ವ
- ಉನ್ನತ ಸಾಧನಾ ಕೇಂದ್ರಗಳು ಮತ್ತು ಅಕಾಡೆಮಿಗಳು
- ಕ್ರೀಡಾ ಶಿಕ್ಷಣ ಮತ್ತು ಸಂಶೋಧನೆ
- ಪ್ರತಿಭಾನ್ವೇಷಣಾ ಕಾರ್ಯಕ್ರಮಗಳು
- ತರಬೇತಿ ಅಭಿವೃದ್ಧಿ ಕಾರ್ಯಕ್ರಮಗಳು

- ಸಮುದಾಯ ಕ್ರೀಡಾ ಕೇಂದ್ರಗಳು
- ಸಮುದಾಯ, ಜಿಲ್ಲಾ ಮತ್ತು ಪ್ಯಾರಾ ಅಥ್ಲೀಟ್ ಕ್ರೀಡೆಗಳು
- ಕ್ರೀಡಾಂಗಣ ಹಾಗೂ ಮೈದಾನಗಳ ನಿರ್ಮಾಣ, ನಿರ್ವಹಣೆ
- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡಾಕೂಟಗಳ ಆಯೋಜನೆ
- ಕ್ರೀಡಾ ಪ್ರಾವಾಸೋದ್ಯಮ ಅಭಿವೃದ್ಧಿ.

3.42. ಡಿ.ವೈ.ಇ.ಎಸ್ ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿ.ಪಿ.ಪಿ)ಗೆ ಒಂದು ವಿನ್ಯಾಸವನ್ನು ರೂಪಿಸುವುದು ಮತ್ತು ಕಾರ್ಪೋರೇಟ್ ರವರು ದೇಣಿಗೆ ನೀಡಲು ಕೋರುವುದು. ಈ ನಿಟ್ಟಿನಲ್ಲಿ ಒಂದು ಪಿ.ಪಿ.ಪಿ. ತಂಡವನ್ನು ರಚಿಸಿ ಸರ್ಕಾರ-ವ್ಯವಹಾರ ಸಂಬಂಧವನ್ನು ನಿರ್ವಹಿಸುವುದು.

3.43. ರಾಜ್ಯದಲ್ಲಿ ಹಲವಾರು ಖಾಸಗಿ ಸಂಸ್ಥೆಗಳು, ಕ್ರೀಡಾ ಸೌಲಭ್ಯ, ಮೈದಾನ, ಕ್ರೀಡಾಂಗಣಗಳನ್ನು ನಿರ್ಮಾಣ ಮಾಡಿದ್ದು ಅವುಗಳನ್ನು ಸರ್ಕಾರವು ಉಪಯೋಗಿಸುತ್ತಿದೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಎಲ್ಲಿ ಈ ಸೌಲಭ್ಯಗಳು ಇರುವುದಿಲ್ಲವೋ ಅಲ್ಲಿ ಈ ಯೋಜನೆಯ ಮೂಲಕ ಸೌಲಭ್ಯವನ್ನು ಒದಗಿಸುವುದು. ಇದು ಖಾಸಗಿ ಸಂಸ್ಥೆಗಳು ಆ ಸ್ಥಳಗಳಲ್ಲಿ ಸೌಲಭ್ಯವನ್ನು ಒದಗಿಸಲು ಉತ್ತೇಜನ ನೀಡಿದಂತಾಗುತ್ತದೆ.

3.44. ರಾಜ್ಯವು ಸಮುದಾಯ ಕ್ರೀಡಾ ಕೇಂದ್ರಗಳು ಮತ್ತು ಸಮುದಾಯ ಕ್ರೀಡಾ ಕ್ಲಬ್‌ಗಳನ್ನು ಪಿ.ಪಿ.ಪಿ. ಮಾದರಿಯಲ್ಲಿ ಸ್ಥಾಪಿಸಲು ಪ್ರಯತ್ನಿಸಬೇಕು. ಇಂತಹ ಸೌಲಭ್ಯಗಳನ್ನು ಒದಗಿಸಲು ಆಸಕ್ತ ಸಂಸ್ಥೆಗಳಿಗೆ ಅನುದಾನ, ನಿವೇಶನ ಮುಂತಾದವುಗಳನ್ನು ಒದಗಿಸುವ ಮೂಲಕ ಉತ್ತೇಜಿಸುವುದು.

## 4. ಸ್ಥಂಭ-3 – ಕ್ರೀಡಾ ಭೌತಿಕ ಮೂಲಭೂತ ಸೌಕರ್ಯಗಳು

4.1. ಇದು ಆಟದ ಮೈದಾನ, ಕ್ರೀಡಾಂಗಣ ಮತ್ತು ಸಾಮಗ್ರಿಗಳ ಕಿಟ್ ಒಳಗೊಂಡಿರುತ್ತದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರವು ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಲಭ್ಯವಿರುವ ಕ್ರೀಡಾ ಮೈದಾನ ಮತ್ತು ಸೌಲಭ್ಯಗಳ ದತ್ತಾಂಶವನ್ನು ಸಿದ್ಧಪಡಿಸುವುದು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಗುರುತಿಸುವ ಮೂಲಕ ಕ್ರೀಡಾ ಸೌಕರ್ಯಗಳ ಕೊರತೆಯನ್ನು ನೀಗಿಸಲು ಪ್ರಯತ್ನಿಸುವುದು. ಈ ಮೂಲಕ ಎಲ್ಲೆಲ್ಲಿ ಕ್ರೀಡಾ ಮೂಲಭೂತ ಸೌಕರ್ಯಗಳಉನ್ನತೀಕರಣ ಅಗತ್ಯವಿದೆ ಎಂಬುದನ್ನು ಸಹ ಅಭ್ಯಸಿಸುವುದು. ನಂತರ, ಕರ್ನಾಟಕ ರಾಜ್ಯವನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತಲುಪಿಸಲು ಅಗತ್ಯವಾದ ತರಬೇತಿ ಹಾಗೂ ಆಟದ ಸಾಮಗ್ರಿಗಳ ಬಗ್ಗೆ

ಅಭ್ಯಸಿಸುವುದು. ಈ ವಿಷಯದಲ್ಲಿ ಕಂಡುಬಂದ ಕೊರತೆಯ ಆಧಾರದಲ್ಲಿ ಆರ್ಥಿಕ ಪ್ರಸ್ತಾವನೆಯನ್ನು ಸಿದ್ಧಪಡಿಸುವುದು ಮತ್ತು ಖಾಸಗಿ ಕ್ಷೇತ್ರವನ್ನು ತೊಡಗಿಸಿಕೊಂಡು ಈ ಕೊರತೆಗಳನ್ನು ಸರಿದೂಗಿಸುವುದು.

ಕ್ರೀಡಾ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಡಿ.ವೈ.ಇ.ಎಸ್.) ಯ ನಿಯಮಗಳು:

- ರಾಜ್ಯದಲ್ಲಿ ಕ್ರೀಡಾ ಯೋಜನೆಗಳನ್ನು ಕೈಗೊಳ್ಳಲು ಡಿ.ವೈ.ಇ.ಎಸ್ ನೋಡಲ್ ಏಜೆನ್ಸಿಯಾಗಿರತಕ್ಕದ್ದು.
  ರಾಜ್ಯದಲ್ಲಿ ಯಾವುದೇ ಕ್ರೀಡಾ ಮೂಲಭೂತ ಸೌಕರ್ಯ ಸೃಜನೆಯ ಯೋಜನೆ ಅನುಷ್ಠಾನದಲ್ಲಿ ಯೋಜನೆಯ ತಾಂತ್ರಿಕ ವಿವರಗಳು ಮತ್ತು ಅಂತರರಾಷ್ಟ್ರೀಯ ನಿಯಮಗಳು ಮತ್ತು ಗುಣಮಟ್ಟದ ಪಾಲನೆಯನ್ನು ಖಾತ್ರಿಪಡಿಸಲು ಡಿ.ವೈ.ಇ.ಎಸ್.ನ ಸಲಹೆ ಕಡ್ಡಾಯ. ಡಿ.ವೈ.ಇ.ಎಸ್. ಗೆ ನೀಡಿರುವ ಈ ಅಧಿಕಾರವನ್ನು ಎಲ್ಲಾ ಇಲಾಖೆಗಳು ಪಾಲಿಸತಕ್ಕದ್ದು.
- ಎಲ್ಲಾ ಕ್ರೀಡಾ ಮೂಲಭೂತ ಸೌಕರ್ಯಗಳ, ಈಜುಕೊಳ ಸೇರಿದಂತೆ, ತಾಂತ್ರಿಕ ವಿವರಗಳು ಮತ್ತಿತರೆ ವಿಷಯಗಳನ್ನು ಡಿವೈಇಎಸ್ ನೊಂದಿಗೆ ಚರ್ಚಿಸುವುದು.
  - ಕನಿಷ್ಠ ಸುರಕ್ಷತಾ ಮತ್ತು ತಾಂತ್ರಿಕ ವಿವರಗಳನ್ನು ಪಾಲಿಸುವುದನ್ನು ಖಾತ್ರಿಪಡಿಸಲು
  - ಸರ್ಕಾರದಿಂದ ಅನುದಾನ/ಸೌಲಭ್ಯಗಳನ್ನು ಸ್ವೀಕರಿಸುವ ಎಲ್ಲಾ ಕ್ಲಬ್ ಮತ್ತು ಸಂಸ್ಥೆಗಳು ಸರ್ಕಾರದ ನಿಯಮಗಳು ಮತ್ತು ನಿಯಂತ್ರಣಗಳಿಗೆ ಬದ್ಧರಾಗಿರುವುದನ್ನು ಖಾತ್ರಿಪಡಿಸಲು
  - ಯಾವುದೇ ಕ್ರೀಡಾ ಮೂಲಭೂತ ಸೌಕರ್ಯವು ಅಂತರರಾಷ್ಟ್ರೀಯವಾಗಿ ಒಪ್ಪಿಕೊಂಡ ರೂಢಿಗಳು ಮತ್ತು ತಾಂತ್ರಿಕ ನಿಯಮಗಳನ್ನು ಅನುಸರಣೆ ಮಾಡುತ್ತಿರುವುದನ್ನು ಖಾತ್ರಿಪಡಿಸಲು, ಅಂತಹ ಸೌಕರ್ಯಗಳ ತಪಾಸಣೆಯನ್ನು ಮಾಡುವ ಅಧಿಕಾರವನ್ನು ಡಿ.ವೈ.ಇ.ಎಸ್. ಹೊಂದಿರುತ್ತದೆ.

ಖಾಸಗಿ ವಲಯದ ತೊಡಗಿಸಿಕೊಳ್ಳುವಿಕೆ:

- ಪಿ.ಪಿ.ಪಿ. ಮೂಲಕ ಖಾಸಗಿ ವಲಯಗಳ ಸಹಯೋಗದೊಂದಿಗೆ ಅವಶ್ಯಕತೆ ಇರುವ ಕಡೆ ಹೊಸ ಕ್ರೀಡಾ ಸೌಲಭ್ಯಗಳನ್ನು ಒದಗಿಸುವುದು ಮತ್ತು ಆಧುನೀಕರಣಗೊಳಿಸುವುದು.

- ಕ್ರೀಡಾ ಮೂಲಭೂತ ಸೌಕರ್ಯವು ಸ್ವಯಂ ನಿರ್ವಹಣಾ ಸಾಮರ್ಥ್ಯವನ್ನು ಹೊಂದುವಂತೆ ಮಾಡಲಾಗುವುದು. ಆದಾಯ ಹಂಚಿಕೆ ಅಥವಾ ಇತರೆ ಸ್ವಯಂ ನಿರ್ವಹಣಾ ಸಾಮರ್ಥ್ಯ ಮಾದರಿಗಳನ್ನು ಈ ಉದ್ದೇಶದ ಸಾಧನೆಗೆ ಪಾರದರ್ಶಕ ರೀತಿಯಲ್ಲಿ ಬಳಸಿಕೊಳ್ಳುವುದು.

4.2. ವಿಶ್ವ ದರ್ಜೆಯ ತರಬೇತಿ ಸೌಕರ್ಯಗಳನ್ನು ಹೊಂದಿದ 'ಕ್ರೀಡಾ ಶ್ರೇಷ್ಠತಾ ಕೇಂದ್ರ'ಗಳನ್ನು ರಾಜ್ಯದಲ್ಲಿ ಸ್ಥಾಪಿಸುವುದು ಮತ್ತು ಕ್ರೀಡಾ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಕ್ರೀಡೆಯನ್ನು ವೃತ್ತಿಪರ ರೀತಿಯಲ್ಲಿ ನಿರ್ವಹಿಸಲು ಅಗತ್ಯ ವಿಷಯಗಳಿಗೆ ಸಂಬಂಧಿಸಿದಂತೆ, ಕೋರ್ಸ್‌ಗಳನ್ನು ಪರಿಚಯಿಸುವುದು. ಕ್ರೀಡಾ ವಿಶ್ವವಿದ್ಯಾಲಯವು ತನ್ನ ಅಧೀನದಲ್ಲಿ ಶಾಲೆ ಮತ್ತು ಕಾಲೇಜುಗಳನ್ನು ಹೊಂದಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಔಷಧ ವಿಭಾಗದಲ್ಲಿ ಪದವಿ / ಸ್ನಾತಕೋತ್ತರ ಪದವಿಯನ್ನು ನೀಡುವುದು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಅಥವಾ ಎರಡು ಎಸ್‌ಸಿ/ಎಸ್‌ಟಿ ಮಾದರಿ ಶಾಲೆಗಳನ್ನು ಕ್ರೀಡಾ ಶಾಲೆಗಳನ್ನಾಗಿ ಪರಿವರ್ತಿಸುವುದು ಮತ್ತು ಅವುಗಳನ್ನು ಉದ್ದೇಶಿತ ಕ್ರೀಡಾ ವಿಶ್ವವಿದ್ಯಾಲಯದ ಅಧೀನದಲ್ಲಿ ತರುವುದು.

ಹಾಲಿ ಇರುವ ಹಿರಿಯ ಕ್ರೀಡಾ ಹಾಸ್ಟೆಲ್‌ಗಳನ್ನು ಅಕಾಡೆಮಿಗಳನ್ನಾಗಿ ಪರಿವರ್ತಿಸುವುದು. ಕ್ರೀಡಾ ಅಕಾಡೆಮಿಗಳನ್ನು ಅರೆ ಸ್ವಾಯತ್ತತೆ ಆಧಾರದಲ್ಲಿ ನಿರ್ವಹಿಸುವುದು.

4.3. ಬೆಂಗಳೂರನ್ನು ಅಂತರಾಷ್ಟ್ರೀಯ ಗುಣಮಟ್ಟದ ಕ್ರೀಡಾ ಸೌಕರ್ಯಗಳನ್ನು ಹೊಂದಿರುವ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು. ಪ್ರತಿಯೊಂದು ಆಯ್ದ ಕ್ರೀಡೆಯಲ್ಲಿ ಆದ್ಯತೆಯನ್ನು ನೀಡಿ ಅಂತರಾಷ್ಟ್ರೀಯ ಗುಣಮಟ್ಟದ ಸೌಲಭ್ಯವನ್ನು ಒದಗಿಸುವುದು.

4.4. ಕ್ರೀಡಾ ಮೂಲಭೂತ ಸೌಕರ್ಯಗಳಿಗೆ ಪೂರಕವಾದ ಹಾಸ್ಪಿಟಾಲಿಟಿ, ಸಾರಿಗೆ ಮತ್ತು ಇತರೆ ಕ್ಷೇತ್ರಗಳಲ್ಲಿ ಮೂಲಭೂತ ಸೌಕರ್ಯಗಳ ಸೃಜನೆಗೆ ಮತ್ತು ನಿರ್ವಹಣೆಗೆ ಒತ್ತು ನೀಡುವುದು..

4.5. ಪ್ರತಿಯೊಂದು ಕ್ರೀಡೆಯಲ್ಲಿಯೂ ಸಹ ಒಲಂಪಿಕ್ ಮತ್ತು ಅಂತರಾಷ್ಟ್ರೀಯ ಗುಣಮಟ್ಟದ ಕ್ರೀಡಾಪಟುಗಳನ್ನು ತಯಾರು ಮಾಡುವ ಕ್ರೀಡಾ ಸೌಕರ್ಯಗಳು ಮತ್ತು ತರಬೇತುದಾರರನ್ನು ನೀಡುವುದು. ರಾಜ್ಯ ಸರ್ಕಾರವು ಏಕ ಮಾತ್ರ ವ್ಯವಸ್ಥೆಯಾಗಿ ಸ್ವತಃ ಇದನ್ನು ಸಾಧಿಸಲು ಸಾಧ್ಯವಿಲ್ಲ. ಇದಕ್ಕಾಗಿ ಖಾಸಗಿ ವಲಯ ಮತ್ತು ಖಾಸಗಿ ಸಂಸ್ಥೆಗಳನ್ನು ತೊಡಗಿಸಬೇಕು ಮತ್ತು ಅವುಗಳನ್ನು ಸೌಲಭ್ಯ ಒದಗಿಸಲು ಮತ್ತು ನಿರ್ವಹಿಸಲು ಉತ್ತೇಜಿಸಬೇಕು.

ನಿರ್ವಹಣೆ ಮತ್ತು ಸಾಮಗ್ರಿಗಳು:

4.6. ಕ್ರೀಡಾ ಮೂಲಭೂತ ಸೌಕರ್ಯಗಳ ನಿರ್ವಹಣೆ ಮತ್ತು ಉನ್ನತ ಗುಣಮಟ್ಟದ ಕ್ರೀಡಾ ಸಾಮಗ್ರಿಗಳ ಸತತ ಸರಬರಾಜು ಮಾಡುವುದು ಅತೀ ಮುಖ್ಯ. ಕಾರ್ಪೋರೇಟ್ ವಲಯವು ಸಿ.ಎಸ್.ಆರ್ ಮೂಲಕ ನಿರ್ವಹಿಸಲು ಕೋರಬಹುದು ಮತ್ತು ಅವರಿಗೆ ತಮ್ಮ ಬ್ರಾಂಡ್ ಅನ್ನು ಜಾಹೀರಾತುಪಡಿಸಲು ಅವಕಾಶ ನೀಡಬಹುದು. ಅದೇ ರೀತಿ ಕ್ರೀಡಾ ಸಾಮಗ್ರಿಗಳನ್ನು ನೀಡುವಂತೆ ಸಹ ಕೋರಬಹುದು.

4.7 ರಾಜ್ಯವು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸೂಕ್ತವಾದ ಕ್ರೀಡಾ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ತಾಲೂಕು ಮತ್ತು ಜಿಲ್ಲಾ ಹಂತದ ಕ್ರೀಡಾಸ್ಪರ್ಧೆಗಳನ್ನು ನಿರಂತರವಾಗಿ ಸಂಘಟಿಸಲು ಸಾಧ್ಯವಾಗಿಸುವುದು. ಕ್ರೀಡಾಕೂಟಗಳನ್ನು ಆಯೋಜಿಸಲು ಅಗತ್ಯವಾದ ಎಲ್ಲಾ ಸೌಕರ್ಯಗಳನ್ನು ಒಳಗೊಂಡ ಸಮುದಾಯ ಕ್ರೀಡಾ ಕೇಂದ್ರಗಳು ಮತ್ತು ಜಿಲ್ಲಾ ಕ್ರೀಡಾ ಕೇಂದ್ರಗಳನ್ನು ಸ್ಥಾಪಿಸುವುದು. ಸಂಘರ್ಷ ವಲಯ, ಬುಡಕಟ್ಟು ಪ್ರದೇಶಗಳು, ಅಂಚಿನಲ್ಲಿರುವ ಸಮುದಾಯ ಪ್ರದೇಶಗಳಲ್ಲಿ ಕ್ರೀಡೆ ಮತ್ತು ತರಬೇತಿಗೆ ಅಗತ್ಯವಾದ ಕ್ರೀಡಾ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಾರ್ಯಪ್ರವೃತ್ತರಾಗುವುದು.

ಮನರಂಜನೆ ಸೌಲಭ್ಯ ಮತ್ತು ಖಾಲಿ ಜಾಗಗಳು.

4.8. ತಾಲ್ಲೂಕು ಮತ್ತು ಮುನಿಸಿಪಾಲಿಟಿಗಳಲ್ಲಿ ಸಮುದಾಯ ಕ್ರೀಡಾ ಕೇಂದ್ರಗಳ ಹೊರತಾಗಿ ರಾಜ್ಯ ಸರ್ಕಾರವು ಗ್ರಾಮೀಣ ಭಾಗಗಳಲ್ಲಿರುವ ಖಾಲಿ ಇರುವ ಜಾಗಗಳನ್ನು ಉಪಯೋಗಿಸಿಕೊಳ್ಳಲು ಸೂಕ್ತ ಗಮನ ಹರಿಸಬೇಕು ಮತ್ತು ಇವುಗಳನ್ನು ಸಾಮಾನ್ಯ ದೈಹಿಕ ಚಟುವಟಿಕೆ ಮತ್ತು ಆಟಗಳಿಗೆ ಬಳಸಿಕೊಳ್ಳಬೇಕು.

ಜಿಲ್ಲಾ ಕ್ರೀಡಾ ಕೇಂದ್ರಗಳು:

4.9. ಜಿಲ್ಲಾ ಕ್ರೀಡಾ ಕೇಂದ್ರವು ಪ್ರತಿಯೊಂದು ಜಿಲ್ಲೆಯಲ್ಲಿಯೂ, ಸಮುದಾಯ ಕ್ರೀಡಾ ಕೇಂದ್ರಗಳ ಮೂಲಕ ಶಿಫಾರಸ್ಸುಗೊಂಡ ಅಥ್ಲೀಟ್‌ಗಳ ಪ್ರತಿಭೆಯನ್ನು ಅಭಿವೃದ್ಧಿಪಡಿಸುವಲ್ಲಿ ಗಮನಹರಿಸುವುದು. ಜಿಲ್ಲಾ ಕ್ರೀಡಾ ಕೇಂದ್ರಗಳು ನಿರ್ದಿಷ್ಟ ಕ್ರೀಡೆಗಳಲ್ಲಿ ರಾಜ್ಯಾದ್ಯಂತ ಅಥ್ಲೀಟ್‌ಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಗಮನಹರಿಸುವುದು. ಅವುಗಳು ಕ್ರೀಡಾ ಶ್ರೇಷ್ಠತಾ ಕೇಂದ್ರಗಳಿಗೆ ಉನ್ನತ ಮಟ್ಟದ ಪ್ರದರ್ಶನಕ್ಕೆ ಕ್ರೀಡಾಪಟುಗಳನ್ನು ಒದಗಿಸುವ ಕೇಂದ್ರವಾಗಿರುತ್ತವೆ ಮತ್ತು ಸಮುದಾಯ ಕ್ರೀಡಾ ಕೇಂದ್ರಗಳಿಗೆ ಅಗತ್ಯ ಕ್ರೀಡಾ ಸಾಮಗ್ರಿ ನೀಡಿ ಸಹಕರಿಸುತ್ತವೆ.

4.10. ಪ್ರತಿಯೊಂದು ಜಿಲ್ಲೆಯು ಒಂದು ಬಹುಪಯೋಗಿ ಕ್ರೀಡಾ ತರಬೇತಿ ಕೇಂದ್ರ, ಒಲಂಪಿಕ್ ಗುಣಮಟ್ಟದ ಒಂದು ಈಜುಕೊಳ ವನ್ನು ಹೊಂದಿರುವುದು, ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ ಮತ್ತು ನಗರ ಮುನಿಸಿಪಾಲಿಟಿಗಳಲ್ಲಿ ಸೂಕ್ತ ಕ್ರೀಡಾ ಸಾಮಗ್ರಿಗಳು, ಪರಿಣಿತ ತರಬೇತುದಾರರು, ವೃತ್ತಿಪರ ನಿರ್ವಹಣಾ ಮತ್ತು ಮಾಹಿತಿ ವ್ಯವಸ್ಥೆ ಹೊಂದಿರುವ ಕನಿಷ್ಟ ಒಂದು ಸಮುದಾಯ ಕ್ರೀಡಾ ಕೇಂದ್ರವನ್ನು ಹೊಂದಿರುವುದು.

4.11. ಸಾರ್ವಜನಿಕ ಆಟದ ಮೈದಾನಗಳನ್ನು ಸೃಜಿಸಲು ನಿವೇಶನ ಮೀಸಲಿರಿಸುವುದು ಮತ್ತು ಆಟದ ಮೈದಾನಗಳನ್ನು ಹೊಂದಿಲ್ಲದೇ ಇರುವ ಶಾಲೆಗಳಿಗೆ ಈ ಮೈದಾನಗಳನ್ನು ಬಳಸಲು ಅವಕಾಶ ಕಲ್ಪಿಸುವುದು ಮತ್ತು ಈ ಆಟದ ಮೈದಾನಗಳು 2 ಕಿ.ಮೀ ಅಂತರದಲ್ಲಿರುವ ಎಲ್ಲಾ ಶಾಲೆಗಳಿಗೆ ಉಪಯೋಗಿಸಲು ಅನುಕೂಲವಾಗುವಂತೆ ಒದಗಿಸುವುದು.

4.12. (1) ದೈಹಿಕ ಚಟುವಟಿಕೆಯ ಸಾಮಗ್ರಿಗಳು ಮತ್ತು ಕಿಟ್ ಅವಶ್ಯಕತೆ ಇರುವ ಎಲ್ಲಾ ಸರ್ಕಾರಿ ಶಾಲೆಗಳು ಮತ್ತು (2) ಸರ್ಕಾರದ ಭಾಗವಹಿಸುವಿಕೆಯ ಗುರಿಯನ್ನು ಸಾಧಿಸಿದ ಎಲ್ಲಾ ಶಿಕ್ಷಣ ಸಂಸ್ಥೆಗಳು ಇವುಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಒದಗಿಸುವುದು.

ಬಿ. ಸಮುದಾಯ ಕ್ರೀಡಾ ಕೇಂದ್ರಗಳು:

4.13. ದೈಹಿಕ ಚಟುವಟಿಕೆ ಮತ್ತು ಫಿಟ್‌ನೆಸ್ ಸಂಸ್ಕೃತಿಯು ರಾಜ್ಯದಲ್ಲಿನ ಕೆಲವೇ ಸಮುದಾಯ ಮತ್ತು ಪ್ರದೇಶಕ್ಕೆ ಸೀಮಿತವಾಗಿರುತ್ತದೆ. ಸಮಾದಲ್ಲಿನ ಎಲ್ಲಾ ವರ್ಗಗಳು, ಜನಗಳು, ಪ್ರಾಂತ್ಯಗಳಿಗೆ ತಲುಪಿಸಲು ಮೊದಲ ಹೆಜ್ಜೆಯನ್ನು ಇಡಬೇಕಾಗಿದೆ. ಈ ನಿಟ್ಟಿನಲ್ಲಿ ಸಮುದಾಯ ಕ್ರೀಡಾ ಸಮುದಾಯವನ್ನು ಸ್ಥಾಪಿಸುವುದು ಅವಶ್ಯಕವಾಗಿರುತ್ತದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯೊಂದಿಗೆ ಸಮನ್ವಯ ಸಾಧಿಸಿ ಅನುಷ್ಠಾನಗೊಳಿಸುವುದು.

ವಿನ್ಯಾಸ ಮತ್ತು ಸ್ಥಳ:

4.14 ಸಮುದಾಯ ಕ್ರೀಡಾ ಕೇಂದ್ರಗಳ ವಿನ್ಯಾಸ ಮತ್ತು ಸ್ಥಳ ಎಲ್ಲರನ್ನು ಒಳಗೊಳ್ಳುವಂತಿರಬೇಕು ಮತ್ತು ರಾಜ್ಯದ ಎಲ್ಲಾ ಜನರಿಗೂ ಮುಕ್ತವಾಗಿರಬೇಕು. ಸಾರ್ವಜನಿಕರು ವಯೋಮಿತಿ, ಲಿಂಗ, ಸಮಾಜೋ–ಆರ್ಥಿಕ ಹಿನ್ನೆಲೆ, ಭಾಷೆ, ಧಾರ್ಮಿಕ ನಂಬಿಕೆಗಳನ್ನು ಮೀರಿ ಕ್ರೀಡೆಗಳಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡಬೇಕು. ಈ ಕೇಂದ್ರಗಳಿಗೆ ನಿರಂತರವಾಗಿ ಗುಣಮಟ್ಟದ ಕ್ರೀಡಾ ಸಾಮಗ್ರಿ ಮತ್ತು ಸೌಕರ್ಯಗಳನ್ನು ನೀಡುವುದು ಮತ್ತು ಸ್ಥಳೀಯ ಜನಪ್ರಿಯ ಕ್ರೀಡೆಗಳನ್ನು ಪ್ರಚುರಪಡಿಸುವುದು.

4.15. ಹಾಲಿ ಇರುವ ಯುವ ಶಕ್ತಿ ಕೇಂದ್ರ ಕಾರ್ಯಕ್ರಮದ ಸೌಲಭ್ಯಗಳು ಮತ್ತು ಸಾಮಗ್ರಿಗಳು ಸಮುದಾಯ ಕ್ರೀಡಾ ಕೇಂದ್ರಗಳೊಂದಿಗೆ ಬೆಸೆದಿವೆ. ಭಾರತ ಸರ್ಕಾರದ ಸಹಯೋಗದೊಂದಿಗೆ, ಹಾಲಿ ಇರುವ ಯೂತ್ ಕ್ಲಬ್‌ಗಳನ್ನು ಸಮುದಾಯ ಕೇಂದ್ರಗಳನ್ನಾಗಿ ಪರಿವರ್ತಿಸಿ, ಮಹಿಳೆಯರಿಗೆ ಮತ್ತು ಹಿರಿಯ ನಾಗರೀಕರಿಗೆ ವಿಶೇಷ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಯೋಚಿಸುವುದು.

ಸಿಬ್ಬಂದಿ:

4.16. ಪ್ರತಿಯೊಂದು ಸಮುದಾಯ ಕ್ರೀಡಾ ಕೇಂದ್ರಗಳು ಸಮುದಾಯ ತರಬೇತುದಾರರನ್ನು ಸ್ವಂತ ಸಂಪನ್ಮೂಲಗಳೊಂದಿಗೆ ಅನುಷ್ಠಾನಗೊಳಸುವುದು.

ಒಲಂಪಿಕ್ ಮತ್ತು ಏಷಿಯನ್ ಗೇಮ್ಸ್‌ಗಾಗಿ ಕ್ರೀಡಾ ನಗರ:

4.17. ರಾಜ್ಯ ಸರ್ಕಾರವು ಡಿ.ವೈ.ಇ.ಎಸ್./ಎಸ್.ಎ.ಕೆ ಮೂಲಕ ರಾಜ್ಯದಲ್ಲಿ ಕ್ರೀಡೆಯನ್ನು ಅಭಿವೃದ್ಧಿಗೊಳಸುವ ನಿಟ್ಟಿಯಲ್ಲಿ 2025ರ ಒಳಗಾಗಿ ಒಂದು ಕ್ರೀಡಾ ನಗರವನ್ನು ರೂಪಿಸುವುದು ಮತ್ತು ಅಂತರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳು ಉದಾ<sup></sup> ಒಲಂಪಿಕ್ ಗೇಮ್ಸ ಮತ್ತು ಇತರೆ ಕ್ರೀಡೆಗಳ ಆಯೋಜನೆಗೆ ಅಗತ್ಯ ಸೌಕರ್ಯಗಳನ್ನು ಒಳಗೊಂಡಿರುವುದು. ಇಂತಹ ಸೌಲಭ್ಯಗಳು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹತ್ತಿರದಲ್ಲಿರತಕ್ಕದ್ದು. ಭಾರತದಲ್ಲಿ ಬೆಂಗಳೂರು ನಗರವು ಐಟಿ/ಬಿಟಿ ಹಾಗೂ ವಿಜ್ಞಾನ ನಗರವಾಗಿದ್ದು, ಇವುಗಳ ಜೊತೆಗೆ ಕ್ರೀಡಾ ನಗರವನ್ನಾಗಿಯೂ ಸಹ ಅಭಿವೃದ್ಧಿಪಡಿಸುವುದು.

4.18. ದುಬೈ ಮತ್ತು ದೋಹಾ ನಗರಗಳು ಅಂತಹ ಸೌಲಭ್ಯಗಳನ್ನು ಒದಗಿಸಲು ಬಿಡ್ ಮಾಡಿವೆ ಎಂಬುದನ್ನು ರಾಜ್ಯ ಸರ್ಕಾರವು ತಿಳದಿದೆ. ಆದ್ದರಿಂದ ಪ್ರಮುಖ ಆದ್ಯತೆಯೊಂದಿಗೆ ಅಗತ್ಯವಾದ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವುದು. ಡಿ.ವೈ.ಇ.ಎಸ್ ಯು "ಒಲಂಪಿಕ್ಸ್ ಕ್ರೀಡೆಗಾಗಿ ಬೆಂಗಳೂರು ಕ್ರೀಡಾ ನಗರ"ವನ್ನಾಗಿ ರೂಪಿಸಲು ನೀಲಿನಕ್ಷೆಯನ್ನು ಸಿದ್ಧಗೊಳಸುವುದು.

5. ಸ್ಥಂಭ – 4 ಮಾನವೀಕ ಸೌಲಭ್ಯಗಳು:

ಎ. ಕ್ರೀಡಾ ತರಬೇತಿ

ಬಿ. ಕ್ರೀಡಾ ಮತ್ತು ವೈದ್ಯಕೀಯ ಸಲಹೆ

ಸಿ. ಕ್ರೀಡಾ ಶ್ರೇಷ್ಠತಾ ಕೇಂದ್ರಗಳು

ಡಿ. ಕ್ರೀಡೆ ಮತ್ತು ದೈಹಿಕ ಶಿಕ್ಷಣ

ಇ. ಮಾನ್ಯತೆ

5.1. ಪರಿಸರ ವ್ಯವಸ್ಥೆಯ ಪ್ರಮುಖ ಅಂಗವೆಂದರೆ ಮೃದು ಮೂಲಭೂತ ಕ್ರೀಡಾ ಸೌಕರ್ಯಗಳು ಇದು ಪ್ರಮುಖ ಪಾತ್ರ ವಹಿಸುತ್ತದೆ. ಈ ನೀತಿಯು ಕ್ರೀಡಾ ತರಬೇತುದಾರರು, ಸಮಾಲೋಚನೆ, ದೈಹಿಕ ಶಿಕ್ಷಣ ಮತ್ತು ಕೇಂದ್ರಗಳನ್ನು ಸ್ಥಾಪಿಸುವುದಾಗಿದೆ.

ಅ. ಕ್ರೀಡಾ ತರಬೇತಿ:

5.2. ಕ್ರೀಡಾ ತರಬೇತಿ ಮತ್ತು ಶಿಕ್ಷಣಕ್ಕಾಗಿ ಒಂದು ವಿಶೇಷ ಘಟಕವನ್ನು ಸ್ಥಾಪಿಸುವುದು.

ತರಬೇತಿ ಮತ್ತು ಶಿಕ್ಷಣ ನೀಡುವುದರ ಜೊತೆಗೆ ಸೂಕ್ತ ತರಬೇತಿ ಪ್ರತಿಭೆಯನ್ನು ಗುರುತಿಸುವುದು ಬಹಳ ಮುಖ್ಯವಾಗುತ್ತದೆ. ಇದರ ಪ್ರಮುಖ ಉದ್ದೇಶವೆಂದರೆ ಕರ್ನಾಟಕದಲ್ಲಿರುವ ಎಲ್ಲಾ ಅಥ್ಲೀಟ್‌ಗಳನ್ನು ಗುಣಮಟ್ಟದ ತರಬೇತಿಯ ಅನುಭವ ನೀಡುವುದು, ಮತ್ತು ಕ್ರೀಡಾ ತರಬೇತಿಯಲ್ಲಿ ಸೂಕ್ತ ಮತ್ತು ಸ್ಫೂರ್ತಿದಾಯಕ ಭವಿಷ್ಯವನ್ನು ರೂಪಿಸುವುದು.

ತರಬೇತುದಾರರ ಅಭಿವೃದ್ಧಿ ಕಾರ್ಯಕ್ರಮ:

5.3. ತರಬೇತುದಾರರ ಅಭಿವೃದ್ಧಿ ಕಾರ್ಯಕ್ರಮವು ಈ ನಾಲ್ಕು ಪ್ರಮುಖ ಅಂಶಗಳ ಬಗ್ಗೆ ಗಮನ ಹರಿಸುತ್ತದೆ.

- ಸೂಕ್ತ ತರಬೇತಿ ಪ್ರತಿಭೆಯನ್ನು ಗುರುತಿಸುವುದು.
- ನಿರಂತರ ತರಬೇತಿ ವಿಧಾನ ಮತ್ತು ತರಬೇತಿ ಶಿಕ್ಷಣ
- ಗುಣಮಟ್ಟ ಅಭಿವೃದ್ಧಿ ಕಾರ್ಯಕ್ರಮಗಳು
- ಭವಿಷ್ಯ ರೂಪಿಸುವುದು, ಬಹುಮಾನಗಳು ಮತ್ತು ಉತ್ತೇಜನಗಳು.

5.4. ಇವುಗಳನ್ನು ಅಕಾಡೆಮಿಗಳು, ರಾಷ್ಟ್ರೀಯ ಮತ್ತು ರಾಜ್ಯ ಕ್ರೀಡಾ ಫೆಡರೇಷನ್, ಹಾಲಿ ಇರುವ ಅತ್ಯುತ್ತಮ ತರಬೇತಿದಾರರು ಮತ್ತು ಶಿಕ್ಷಣ ಸಂಸ್ಥೆಗಳ ಪಾಲುದಾರಿಕೆಯೊಂದಿಗೆ ಸಾಧಿಸಬಹುದು.

5.5 ತರಬೇತುದಾರರ ಸಂಖ್ಯೆಯಲ್ಲಿ ಹೆಚ್ಚಳ, ತರಬೇತುದಾದರರ ಸಾಮರ್ಥ್ಯ ಅಭಿವೃದ್ಧಿಗಾಗಿ ಕ್ರಮ ವಹಿಸುವುದು.

ತರಬೇತುದಾರರ ವರ್ಗೀಕರಣ:

5.6. ಒಟ್ಟಾರೆ ಮೂರು ಹಂತದ ತರಬೇತಿಯನ್ನು ಗುರುತಿಸಬಹುದು ಅವುಗಳೆಂದರೆ; ಉನ್ನತ್ತ, ಮಾಧ್ಯಮಿಕ ಮತ್ತು ಸಮುದಾಯ ಮತ್ತು ಪ್ರತಿಯೊಂದು ಹಂತದಲ್ಲಿಯೂ, ನಿರ್ದಿಷ್ಟ ಕ್ರೀಡೆ ಮತ್ತು ಬಹುಉಪಯೋಗಿ ತರಬೇತುದಾರರು ಮತ್ತು ತರಬೇತಿ ಜ್ಞಾನವನ್ನು ಹೊಂದಿರಬೇಕು. ಒಟ್ಟಾರೆಯಾಗಿ, ಒಬ್ಬ ತರಬೇತುದಾರನು ವಿವಿಧ ಯೋಜನೆಗಳು, ಪರಿಣಿತಿ, ಜ್ಞಾನ ಹೊಂದಿರಬೇಕು. ಅದೇ ರೀತಿ ತರಬೇತುದಾರರು ವಿವಿಧ ಹಂತಗಳಲ್ಲಿ ಸಾಧನೆ ತೋರಲು ಉತ್ತೇಜನಗಳನ್ನು ನೀಡಿ ಅವರನ್ನು ದೃಢೀಕರಿಸುವುದು. ಪ್ರತಿಯೊಬ್ಬ ತರಬೇತುದಾರನ್ನು ಗುರುತಿಸಲು ಅಗತ್ಯವಾದ ಮಾನದಂಡಗಳನ್ನು ಅನುಚ್ಛೇದದಲ್ಲಿ ವಿವರಿಸಲಾಗಿದೆ (ಅನುಚ್ಛೇದ-1 ನೋಡಿ). ಎಸ್.ಎ.ಕೆ.ಯು ಇದನ್ನು ಪರಿಗಣಿಸಿ, ಕ್ರೀಡಾ ಸಂಸ್ಥೆಗಳಿಗೆ ಇದನ್ನು ಸಾಧಿಸಲು ಸಹಕರಿಸತಕ್ಕದ್ದು.

5.7. ನುರಿತ ತರಬೇತುದಾರರನ್ನು ಆಯ್ಕೆ ಮಾಡಿ ಅವರನ್ನು ಸೂಕ್ತ ಸ್ಥಳಗಳಲ್ಲಿ ನೇಮಕಾತಿ ಮಡುವುದು ಮತ್ತು ಅವರಿಗೆ ಉತ್ತಮ ಪ್ರದರ್ಶನ ಘಟಕ, ಕ್ರೀಡಾ ಕೇಂದ್ರಗಳಲ್ಲಿ ಮತ್ತು ಎಲ್ಲಾ ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕ್ರೀಡಾಂಗಣ, ಕ್ರೀಡಾ ಶಾಲೆಗಳು ಮತ್ತು ಹಾಸ್ಟೆಲ್‌ಗಳಲ್ಲಿ ನೇಮಿಸುವುದು.

5.8. ಈ ಮೇಲೆ ವಿವರಿಸಿದ ಪ್ರತಿಯೊಂದು ವಿಭಾಗಗಳಲ್ಲಿಯೂ ಸೂಕ್ತ ತರಬೇತಿ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿಯಿರುತ್ತದೆ. ಮತ್ತು ಮಾಧ್ಯಮಿಕ ತರಬೇತಿದಾರರು ಪ್ರತಿ ಜಿಲ್ಲೆಗಳಲ್ಲಿ ಅವರಿಗೆ ಒದಗಿಸಿರುವ ಸೌಲಭ್ಯಗಳ ಅನುಸಾರ ಅಥ್ಲೀಟ್‌ಗಳಿಗೆ ತರಬೇತಿ ನೀಡಲಾಗುತ್ತಿದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ. ಪ್ರತಿಭಾವಂತ ಕ್ರೀಡಾಪಟುಗಳನ್ನು ಉನ್ನತ ಸಾಧನೆಗೆ ಕಳುಹಿಸುವುದು.

ದೈಹಿಕ ಶಿಕ್ಷಣ ಶಿಕ್ಷಕರು:

5.9 ಸೂಕ್ತವಾದ ದೈಹಿಕ ಚಟುವಟಿಕೆ ಗುರಿಯನ್ನು ಸಾಧಿಸಲು, ರಾಜ್ಯಾಂದ್ಯಂತ ಅರ್ಹ ದೈಹಿಕ ಶಿಕ್ಷಕರ ಪಟ್ಟಿಯನ್ನು ಸೃಜಿಸಬೇಕಾಗಿರುತ್ತದೆ. ರಾಜ್ಯದಲ್ಲಿ ದೈಹಿಕ ಶಿಕ್ಷಣ ಹಾಗೂ ಕ್ರೀಡೆಗೆ ಸಂಬಂಧಪಟ್ಟ ಕೋರ್ಸ್‌ಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ.

5.10. ಸಾಮಾನ್ಯ ಕೋರ್ಸ್‌ಗಳು: ದೈಹಿಕ ಶಿಕ್ಷಕರನ್ನು ತರಬೇತಿಗೊಳಸಲು – ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಲು ಇಂತಹ ಕೋರ್ಸುಗಳು ಅಗತ್ಯ.

ದೇಶದ ಇತರೆ ರಾಜ್ಯಗಳಿಂದ ಮತ್ತು ಅದೇ ರೀತಿ ಅಂತರಾಷ್ಟ್ರೀಯ ಮಟ್ಟದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ಬದಲಾವಣೆ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಉತ್ತೇಜಿಸುವುದು . ಒಮ್ಮೆ ತರಬೇತಿ ಹೊಂದಿದಲ್ಲಿ ದೈಹಿಕ ಶಿಕ್ಷಕರನ್ನು ದೃಢೀಕರಿಸುವುದು ಮತ್ತು ಅವರಿಗೆ ಸರ್ಕಾರಿ ಶಿಕ್ಷಕರಿಗೆ ನೀಡುವ ವೇತನವನ್ನು ನೀಡುವುದು.

5.11. ಪ್ರತಿಯೊಂದು ಬಾಲಕಿಯರ ಮತ್ತು ಸಂಯುಕ್ತ ಶಾಲೆಗಳಲ್ಲಿ ಮಹಿಳಾ ದೈಹಿಕ ಶಿಕ್ಷಕರು ಅವಶ್ಯಕ.

5.12. ದೈಹಿಕ ಶಿಕ್ಷಕರು ಮಾದರಿ ಕೈಪಿಡಿಯಲ್ಲಿ ನಿಗಧಿಪಡಿಸಿರುವ ಕೋರ್ಸ್ ಅನ್ನು ಜಾರಿಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ ಮತ್ತು ಶಾಲೆಯಲ್ಲಿ ಕ್ರೀಡೆಗಳನ್ನು ಪರಿಚಯಿಸುವ ಜವಾವ್ದಾರಿಯನ್ನು ಹೊಂದಿರುತ್ತಾರೆ. ಮತ್ತು ಶಾಲೆಗಳಲ್ಲಿ ವಿವಿಧ ಹಂತಗಳಲ್ಲಿ ಪಂದ್ಯಗಳನ್ನು ಮತ್ತು ಕ್ರೀಡಾಕೂಟಗಳನ್ನು ಆಯೋಜಿಸುವ ಜವಾಬ್ದಾರಿ ದೈಹಿಕ ಶಿಕ್ಷಕರದ್ದಾಗಿರುತ್ತದೆ.

ಶಿಕ್ಷಕರಿಗೆ ಕ್ರೀಡಾ ವಿಜ್ಞಾನದ ತಿಳುವಳಿಕೆಯನ್ನು ನೀಡುವುದು ಅವಶ್ಯವಾಗಿರುತ್ತದೆ. ಇದರಿಂದ ಗ್ರಾಮೀಣ ಭಾಗದ ಯುವಜನ'ರಲ್ಲಿ ಕ್ರೀಡೆಯ ಬಗ್ಗೆ ಪ್ರಾಮುಖ್ಯತೆಯನ್ನು ಸಂದೇಶವನ್ನು ಸಾರಬಹುದು. ಮತ್ತು ತಿಂಗಳಿಗೊಮ್ಮೆ ಕ್ರೀಡಾ ವಿಜ್ಞಾನದ ಬಗ್ಗೆ ಒಂದು ಹೊತ್ತಿಗೆಯನ್ನು ತಂದು ಅವುಗಳನ್ನು ಎಲ್ಲಾ ದೈಹಿಕ ಶಿಕ್ಷಕರಿಗೆ ನೀಡುವುದು.

ಪ್ರತಿಯೊಬ್ಬ ದೈಹಿಕ ಶಿಕ್ಷಕರನ್ನು ಅವರ ವಾರ್ಷಿಕ ಕ್ರೀಡಾ ಸಾಧನೆಯ ಅನುಗುಣವಾಗಿ ಪ್ರೋತ್ಸಾಹಿಸುವುದು..

ಬಿ. ಕ್ರೀಡಾ ಸಮಾಲೋಚನೆ:

5.13. ಒಮ್ಮೆ ಒಬ್ಬ ಕ್ರೀಡಾಪಟುವು ಅವರ ಅತ್ಯುತ್ತಮ ಪ್ರತಿಭೆಯಿಂದ ಗುರುತಿಸಲ್ಪಟ್ಟಲ್ಲಿ ಅವರಿಗೆ ಅವರ ಭವಿಷ್ಯ ರೂಪಿಸಿಕೊಳ್ಳಲು ಒಬ್ಬ ಸಮಾಲೋಚಕರನ್ನು ಒದಗಿಸುವುದು. ಸಮುದಾಯ ಕ್ರೀಡಾ ಕೇಂದ್ರ ಅಥವಾ ಇತರೆ ಕ್ರೀಡಾಂಗಣ ಅಥವಾ ಸಾರ್ವಜನಿಕ ವಲಯದಲ್ಲಿ ಜ್ಞಾನವನ್ನು ಬೆಳೆಸಿಕೊಳ್ಳಲು ಮತ್ತು ನೆರವನ್ನು ಒದಗಿಸಲು ಸಮಾಲೋಚಕರನ್ನು ನಿಯೋಜಿಸುವುದು. ಇದರ ಮುಖ್ಯ ಉದ್ದೇಶವೆಂದರೆ ವಿದ್ಯಾಭ್ಯಾಸವನ್ನು ಹೆಚ್ಚಿಸುವುದು, ಪರಿಣಿತಿ ಮತ್ತು ಜ್ಞಾನವನ್ನು ನೀಡುವುದು ಮತ್ತು ಉಪಯುಕ್ತ ಮಾಹಿತಿಗಳನ್ನು ನೀಡಿ ಎಲ್ಲಾ ವಯೋಮಾನದವರು ಕ್ರೀಡೆಯ ಮೂಲಕ ಅಭಿವೃದ್ಧಿ ಹೊಂದಲು ತಿಳುವಳಿಕೆ ನೀಡುವುದು.

5.14. ಇವುಗಳು ಸ್ಥಳೀಯ ಕ್ಲಬ್, ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಜೊತೆಗೂಡಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ತರಬೇತುದಾರರ ನಡುವೆ ಜಾಗೃತಿಯನ್ನು ಮೂಡಿಸುವುದು.

5.15. ಭವಿಷ್ಯ ರೂಪಿಸುವ ಮತ್ತು ಮಾಹಿತಿ ನೀಡುವ ಸಮಾಲೋಚನೆಯ ಜೊತೆಗೆ ಇನ್ನಿತರ ಹಲವಾರು ವಿಧಾನದಲ್ಲಿ ನೆರವನ್ನು ನೀಡಬಹುದು, ಅಂದರೆ ಶಿಕ್ಷಣ ಸಂಸ್ಥೆಗಳ ಆಯ್ಕೆ, ಕ್ರೀಡಾ ವಿಭಾಗಗಳ ಆಯ್ಕೆ, ಾಯವ್ಯಯ, ಕಾನೂನು ಸಲಹೆ, ಆಡಳಿತಾತ್ಮಕ ನೆರವು ಮುಂತಾದವು.

[

ಸಿ. ಕ್ರೀಡಾ ಶ್ರೇಷ್ಠತಾ ಕೇಂದ್ರಗಳು:

ಎ. ರಾಜ್ಯದಲ್ಲಿ ಕ್ರೀಡಾ ಪ್ರತಿಭೆಯನ್ನು ಬಲವರ್ಧನೆಗೊಳಸಲು ಮೂರು ಹಂತಗಳ ವ್ಯವಸ್ಥೆಯನ್ನು ಅಭಿವೃದ್ಧಿಗೊಳಸುವುದು.

ಹಂತ 1 : ಕ್ರೀಡಾ ಹಾಸ್ಟೆಲ್‌ಗಳು

ಹಂತ 2 : ಕ್ರೀಡಾ ಅಕಾಡೆಮಿಗಳು

ಹಂತ 3 : ಕ್ರೀಡಾ ಶ್ರೇಷ್ಠತಾ ಕೇಂದ್ರಗಳು

5.16 ಕ್ರೀಡಾ ಹಾಸ್ಟೆಲ್‌ಗಳು:-

ಇದು ಇಲಾಖೆಯ ಪ್ರಮುಖ ಕಾರ್ಯಕ್ರಮವಾಗಿದೆ.

ಮಹಿಳಾ ಕ್ರೀಡಾಪಡುಗಳ ಸುರಕ್ಷತೆ, ರಕ್ಷಣೆ ಮತ್ತು ಖಾಸಗಿತನಕ್ಕಾಗಿ ಕ್ರೀಡಾ ಹಾಸ್ಟೆಲ್‌ಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕವಾದ ವಿಭಾಗಗಳನ್ನು ಒದಗಿಸಲಾಗುವುದು.

ಪ್ರತಿಭಾವಂತ ಕ್ರೀಡಾಪಟುಗಳ ತರಬೇತಿಗಾಗಿ ಪ್ರತಿ ಜಿಲ್ಲೆಯಲ್ಲಿ ವಿವಿಧ ಕ್ರೀಡೆಗಳಲ್ಲಿ ಕ್ರೀಡ ವಸತ ನಿಲಯಗಳನ್ನು ಹೊಂದುವುದು.

ಗ್ರಾಮೀಣ ಪ್ರತಿಭೆಗಳಿಗೆ ತರಬೇತಿ ನೀಡಲು ಕ್ರೀಡಾ ವಸತಿ ನಿಲಯಗಳನ್ನು ತಾಲೂಕು ಕೇಂದ್ರಗಳಿಗೆ ಕಾಲಕ್ರಮೇಣ ವಿಸ್ತರಿಸಲಾಗುವುದು.

5.17. ಕ್ರೀಡಾ ಅಕಾಡೆಮಿಗಳು:

ಹಾಲಿ ಇರುವ ಕ್ರೀಡಾ ಹಾಸ್ಟೆಲ್‌ಗಳನ್ನು ಕ್ರೀಡಾ ಅಕಾಡೆಮಿಗಳಾಗಿ ಉನ್ನತೀಕರಿಸಲಾಗುವುದು. ಪ್ರತಿಯೊಂದು ಅಕಾಡೆಮಿಯೂ ಒಂದು ನಿರ್ದಿಷ್ಟ ಕ್ರೀಡೆಯನ್ನು ಹೊಂದಿರತಕ್ಕದ್ದು. ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ತೋರಲು ಉತ್ತೇಜಿಸುವ ಸಲುವಾಗಿ ಪ್ರತಿಯೊಂದು ಕ್ರೀಡೆಗೂ ಪ್ರತ್ಯೇಕವಾದ ಕ್ರೀಡಾ ಅಕಾಡೆಮಿಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಪ್ರತಿಯೊಂದು ಕ್ರೀಡೆಯಲ್ಲೂ ಅತ್ಯುತ್ತಮವಾದ ಪ್ರತಿಭೆಯನ್ನು ಗುರುಗಿಸಿ, ಅವರ ಪ್ರತಿಭೆಗೆ ಅನುಗುಣವಾಗಿ ಅವರಿಗೆ ಅಗತ್ಯವಾದ ಸಂಪನ್ಮೂಲಗಳನ್ನ ಒದಗಿಸುವುದು. ಕ್ರೀಡಾ ತಂತ್ರಜ್ಞಾನ ಸೆಲ್‌ಗಳ ಮೂಲಕ ನಿಯಮಿತವಾಗಿ ಅವರುಗಳ ಪ್ರಗತಿಯನ್ನು ವಿಶ್ಲೇಷಿಸಲಾಗುವುದು ಮತ್ತು ಉತ್ತಮ ಪ್ರದರ್ಶನ ತೋರದವರನ್ನು ವಾರ್ಷಿಕ ಆಧಾರದ ಮೇಲೆ ತೆರವುಗೊಳಿಸಲಾಗುವುದು.

ಅತ್ಯುತ್ತಮ ಪ್ರದರ್ಶನಕ್ಕಾಗಿ ವೈಜ್ಞಾನಿಕ ತರಬೇತಿ, ಪೌಷ್ಠಿಕ ಆಹಾರ, ಅತ್ಯುತ್ತಮವಾದ ವಸತಿ ಸೌಲಭ್ಯ, ಕ್ರೀಡಾ ವಿಜ್ಞಾನ ಕೇಂದ್ರ, ಅಂತರಾಷ್ಟ್ರೀಯ ಮಟ್ಟದ ಸಾಮಗ್ರಿಗಳು ಮತ್ತು ಸೌಲಭ್ಯಗಳನ್ನು ಒದಗಿಸುವುದು.

ಪ್ರತಿಯೊಂದು ಅಕಾಡೆಮಿಗೂ ಅಗತ್ಯವಾದ ಮಾನವ ಸಂಪನ್ಮೂಲ, ಆರ್ಥಿಕ ನೆರವನ್ನು ಮತ್ತು ಸ್ವಾಯತ್ತತೆಯನ್ನು ಒದಗಿಸಲಾಗುವುದು. ತರಬೇತಿಗಾಗಿ ಅಂತರಾಷ್ಟ್ರೀಯ ಮಟ್ಟದ ತರಬೇತುದಾರರನ್ನು ಕರೆಸಿಕೊಳ್ಳಲಾಗುವುದು. ಕ್ರೀಡಾಪಟುಗಳಿಗೆ ಕ್ರೀಡಾ ಪ್ರವಾಸಗಳನ್ನು ಏರ್ಪಡಿಸಲಾಗುವುದು.

೫.೧೮. ಕ್ರೀಡಾ ಶ್ರೇಷ್ಠತಾ ಕೇಂದ್ರಗಳು: ಕ್ರೀಡಾಪಟುಗಳ ಭವಿಷ್ಯವನ್ನು ರೂಪಿಸುವ ಸಲುವಾಗಿ ಬೆಂಗಳೂರಿನ ವಿದ್ಯಾನಗರ ಮತ್ತು/ಅಥವಾ ಕೂಡಿಗೆ ಮತ್ತು/ಅಥವಾ ಸೂಕ್ತವಾದ ಸ್ಥಳದಲ್ಲಿ ಪ್ರಾರಂಭಿಸಲಾಗುವುದು. ಕ್ರೀಡಾಪಟುಗಳ ಸಾಮರ್ಥ್ಯ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸುವುದು.

ಕ್ರೀಡಾ ಸಂಬಂಧಿತ ವಿಷಯಗಳಲ್ಲಿ ಪದವಿಪೂರ್ವ ಡಿಪ್ಲೊಮಾ ಕೋರ್ಸ್‌ಗಳು:

೫.೧೯. ಕ್ರೀಡಾ ಶ್ರೇಷ್ಠತಾ ಕೇಂದ್ರವು ಕ್ರೀಡಾ ಸಂಬಂಧಿತವಾದ ಕೆಲವು ವಿಷಯಗಳಲ್ಲಿ ಅಂದರೆ ಕ್ರೀಡಾ ನಿರ್ವಹಣೆ, ಕ್ರೀಡಾ ಪೌಷ್ಠಿಕತೆ, ಕ್ರೀಡಾ ಸಾಧನೆ, ಕ್ರೀಡಾ ತರಬೇತಿ ಮುಂತಾದ ವಿಷಯಗಳಲ್ಲಿ ಕ್ರೀಡಾಪಟುಗಳಿಗೆ ಡಿಪ್ಲೊಮಾ/ಒಕೇಷನಲ್/ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪರಿಚಯಿಸುವುದು. ಇವುಗಳು ಪ್ರಾಜೆಕ್ಟ್ ಅವಲಂಬಿತ ಕೋರ್ಸುಗಳಾಗಿರುತ್ತವೆ. ಕ್ರೀಡಾಪುಟಗಳ ಶೈಕ್ಷಣಿಕ ವಿದ್ಯಾರ್ಹತೆಯ ಅನುಗುಣವಾಗಿ ಅವರಿಗೆ ಮುಂದೆ ಅವರ ಡಿಪ್ಲೊಮಾವನ್ನು ಪದವಿಯನ್ನಾಗಿ ಪರಿವರ್ತಿಸಲು ಹೆಚ್ಚುವರಿಯಾಗಿ ಪ್ರಾಜೆಕ್ಟ್ ವರ್ಕ್‌ಗಳನ್ನು ನೀಡುವ ಮೂಲಕ ಅವಕಾಶ ನೀಡಲಾಗುವುದು. ಸ್ಪರ್ಧಾಳುಗಳಲ್ಲದ ಕ್ರೀಡಾ ಆಡಳಿತ ಮತ್ತು ನಿರ್ವಹಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಡಿಪ್ಲೊಮಾ ಮತ್ತು ಪದವಿ

ಕೋರ್ಸ್‌ಗಳನ್ನು ಪಡೆಯಲು ಆಸಕ್ತರಾಗಿರುವವರಿಗೂ ಅವಕಾಶವನ್ನು ಒದಗಿಸಲಾಗುವುದು.

5.20 ಕ್ರೀಡಾ ಶ್ರೇಷ್ಠತಾ ಕೇಂದ್ರವು ಇತರೆ ಶಿಕ್ಷಣ ಸಂಸ್ಥೆಗಳೊಂದಿಗೆ ಸಹಯೋಗ / ಪಾಲುದಾರಿಕೆಯನ್ನು ಹೊಂದಿ ಕ್ರೀಡಾ ಕ್ಷೇತ್ರದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಅವಕಾಶವನ್ನು ಒದಗಿಸಲಾಗುವುದು. ಕ್ರೀಡಾ ಕ್ಷೇತ್ರಗಳಲ್ಲಿ ಇರುವವರು ತಮ್ಮ ಜ್ಞಾನವನ್ನು ಹಂಚಿಕೊಳ್ಳುವ, ತಿಳಿದುಕೊಳ್ಳುವ ಸಲುವಾಗಿ ಕ್ರೀಡಾ ಶ್ರೇಷ್ಠತಾ ಕೇಂದ್ರವು ರಾಜ್ಯಾದ್ಯಂತ ಸೆಮಿನಾರ್, ಸಮ್ಮೇಳನ ಮುಂತಾದವುಗಳನ್ನು ನಡೆಸುವುದು.

ಕ್ರೀಡಾ ಜ್ಞಾನ ನಿರ್ವಹಣೆ:

5.21. ಕ್ರೀಡಾ ಶ್ರೇಷ್ಠತಾ ಕೇಂದ್ರವು ಕ್ರೀಡಾ ಜ್ಞಾನದ ವಿಷಯವಾಗಿ ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ ಮತ್ತು ದೈಹಿಕ ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ಕ್ರೀಡಾ ವಿಜ್ಞಾನ, ಕ್ರೀಡಾ ತಂತ್ರಜ್ಞಾನ ಮತ್ತು ಅತ್ಯುನ್ನತ ತರಬೇತಿ, ಕ್ರೀಡಾ ವಿಜ್ಞಾನ ಮತ್ತು ಔಷಧ, ಕ್ರೀಡಾ ಕಾನೂನು, ಕ್ರೀಡಾ ವಿಶ್ಲೇಷಣೆ, ಸಮಾಲೋಚನೆ ಮತ್ತು ಅತ್ಲೀಟ್‌ಗಳ ಭಾಗವಹಿಸುವಿಕೆ/ನಿರ್ವಹಣೆಯ ವಿಷಯದಲ್ಲಿ ಕಾರ್ಯ ನಿರ್ವಹಿಸುತ್ತದೆ.

5.22. ಕ್ರೀಡಾ ಶ್ರೇಷ್ಠತಾ ಕೇಂದ್ರವು ಕ್ರೀಡಾ ಮಾಹಿತಿ ಕೇಂದ್ರವನ್ನು ಸ್ಥಾಪಿಸಿ ಇದರಲ್ಲಿ ಕ್ರೀಡೆಗೆ ಸಂಬಂಧಪಟ್ಟ ಮಾಹಿತಿ ಹಾಗೂ ಸೇವೆಗಳನ್ನು ಒದಗಿಸುವುದು. ಇದು ರಾಜ್ಯದ ಅಥ್ಲೀಟ್‌ಗಳು, ತರಬೇತಿದಾರರು, ಕ್ರೀಡಾ ಆಡಳಿತಗಾರರು, ನೀತಿ ರೂಪಿಸುವವರು, ಸಂಶೋಧಕರು, ದೈಹಿಕ ಶಿಕ್ಷಕರು, ಕ್ರೀಡಾ ವಿಜ್ಞಾನಿಗಳು ಮತ್ತು ವೈದ್ಯಕೀಯ ಸಿಬ್ಬಂದಿಗಳಿಗೆ ಅನುಕೂಲವಾಗುವುದು. ಇದರ ಮುಖ್ಯ ಉದ್ದೇಶವೇನೆಂದರೆ, ರಾಜ್ಯದಲ್ಲಿ ಕ್ರೀಡಾ ಸಂಬಂಧಿತ ಪ್ರತಿಯೊಂದು ಹಂತದಲ್ಲಿಯೂ ಅಂತಹ ಜ್ಞಾನವನ್ನು ಅಳವಡಿಸುವುದು.

ಡಿ. ಕ್ರೀಡೆ ಮತ್ತು ದೈಹಿಕ ಶಿಕ್ಷಣ:

5.23. ಕರ್ನಾಟಕ ರಾಜ್ಯದಲ್ಲಿರುವ 6-14 ವರ್ಷದ ಪ್ರತಿಯೊಬ್ಬ ಮಕ್ಕಳೂ ಸಹ ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಉತ್ತೇಜನ ನೀಡಬೇಕಾಗಿದೆ. ಇದು ರಾಜ್ಯದ ಪ್ರತಿಯೊಬ್ಬ ನಾಗರೀಕನೂ ಆರೋಗ್ಯಕರವಾಗಿ ಮತ್ತು ಉತ್ತಮ ಪ್ರಜೆಯನ್ನಾಗಿ ರೂಪಿಸುವ ಗುರಿಯನ್ನು ಹೊಂದಿದೆ.

ಕಡ್ಡಾಯ ದೈಹಿಕ ಶಿಕ್ಷಣ:

5.24. ಕ್ರೀಡಾ ಇಲಾಖೆಯ ಸಹಯೋಗದೊಂದಿಗೆ ಪ್ರತಿಯೊಂದು ಶಾಲೆಗಳಲ್ಲಿಯೂ ಸಂಘಟಿತ ದೈಹಿಕ ಚಟುವಟಿಕೆಗಳನ್ನು ಪರಿಚಯಿಸುವುದು. ಈ ಯೋಜನೆಯು ರಾಜ್ಯದಲ್ಲಿನ ಎಲ್ಲಾ ಶಾಲೆಗಳಲ್ಲಿ 6 ರಿಂದ 14 ವರ್ಷದ ಮಕ್ಕಳು ಎಲ್ಲಾ ಶಾಲಾ ದಿನಗಳಲ್ಲಿ ಕನಿಷ್ಟ ಅರ್ಧ ಗಂಟೆ ದೈಹಿಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುವುದು. ಸಾಧ್ಯವಾದ ಕಡೆಗಳಲ್ಲಿ ಒಂಭತ್ತು ಮತ್ತು ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೂ ಸಹ ಈ ಯೋಜನೆಯನ್ನು ವಿಸ್ತರಿಸಿ ಚಟುವಟಿಕೆಗಳನ್ನು ಗರಿಷ್ಟ ಅವಧಿಯವರೆಗೂ ಮುಂದುವರೆಸಬಹುದು.

5.25. ಗುಣಮಟ್ಟದ ದೈಹಿಕ ಶಿಕ್ಷಣ ವೇಳಾಪಟ್ಟಿಯನ್ನು ಶಾಲಾ ಪರೀಕ್ಷಾ ಮಂಡಳಿ, ರಾಜ್ಯ ಶಿಕ್ಷಣ ಇಲಾಖೆ, ಕೇಂದ್ರ ಮಂತ್ರಾಲಯ ಮತ್ತು ಇತರೆ ಕ್ರೀಡಾ ಮುಖ್ಯಸ್ಥರುಗಳ ಜೊತೆ ಸಮಾಲೋಚಿಸಿ ವಿನ್ಯಾಸಗೊಳಿಸುವುದು.

ಚಟುವಟಿಕೆಗಳು

5.26. ಕ್ರೀಡಾ ನೀತಿಗಳಲ್ಲಿ ನಿರ್ದಿಷ್ಟಪಡಿಸಿರುವ ಪ್ರತಿಭಾನ್ವೇಷಣೆ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ನಡೆಸುವುದು ಇದನ್ನು ಶಾಲಾ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವರನ್ನು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸುವುದಾಗಿದೆ.

5.27 ರಾಜ್ಯವು ಸಮುದಾಯ ಕ್ರೀಡಾ ಕೇಂದ್ರಗಳ ಮುಖಾಂತರ ಆರ್ಥಿಕವಾಗಿ ಹಿಂದುಳಿದವರು, ಗಿರಿಜನರು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಅವರನ್ನು ಶಾಲೆಗೆ ದಾಖಲಿಸಿ ಅವರನ್ನು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸುವುದು.

ಮಾನ್ಯತೆ:

ಡಿ.ವೈ.ಇ.ಎಸ್/ಎಸ್.ಎ.ಕೆ ಯು ಮಾನ್ಯತೆ ಚಟುವಟಿಕೆಗಳನ್ನು ಕೈಗೊಳ್ಳುವುದು ಉದಾ: ತರಬೇತದಾರರು, ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಖಾಸಗಿ ಕ್ರೀಡಾ ಸೌಕರ್ಯಗಳು ಇತ್ಯಾದಿ.

**ಕೌಶಲ್ಯ ತರಬೇತಿ ಕಾರ್ಯಕ್ರಮದ ಮೂಲಕ ಮಾಜಿ ಕ್ರೀಡಾಪಟುಗಳ ಸಾಮರ್ಥ್ಯಗಳನ್ನು ವೃದ್ಧಿಸುವುದು.**

ತಮ್ಮ ಕ್ರೀಡಾ ಜೀವನದ ಮುಖ್ಯ ಘಟ್ಟವನ್ನು ಮುಗಿಸಿ ತಮ್ಮ ಜೀವನಕ್ಕಾಗಿ ದಾರಿ ಹುಡುಕುತ್ತಿದ್ದು, ಕ್ರೀಡೆಗಾಗಿ ಯಾವುದಾದರೂ ಕೊಡುಗೆಯನ್ನು ನೀಡಲು ಬಯಸುತ್ತಿರುವ ಕ್ರೀಡಾಪಟುಗಳನ್ನು ಗುರುತಿಸಿ ಅವರನ್ನು ಡಿ.ವೈ.ಇ.ಎಸ್.ಗೆ ಸೇರಿಸಿಕೊಳ್ಳುವುದು. ಕೌಶಲ್ಯ ತರಬೇತಿ ಮೂಲಕ ಸಾಮರ್ಥ್ಯ ಅಭಿವೃದ್ಧಿಯು ಈ ನಿಟ್ಟಿನಲ್ಲಿ ಒಂದು ಪ್ರಮುಖ ಹಂತವಾಗಿದೆ. ಆದ್ದರಿಂದ ಕಡ್ಡಾಯವಾಗಿ ಡಿ.ವೈ.ಇ.ಎಸ್ ತರಬೇತಿ ಕಾರ್ಯಕ್ರಮಗಳನ್ನು ಅಂದರೆ, ಈಜು ತರಬೇತುದಾರರ

ತರಬೇತಿ, ಜೀವ ರಕ್ಷಕ ತರಬೇತಿ, ಫಿಟ್ನೆಸ್ ತರಬೇತುದಾರರ ತರಬೇತಿ, ಗುರುತುಗಾರರು, ಕ್ರೀಡಾ ಕ್ಷೇತ್ರ ನಿರ್ವಹಣಾ ಸಿಬ್ಬಂತಿ, ವ್ಯಕ್ತಿತ್ವ ವಿಕಸನ ತರಬೇತಿ, ಸಂವಹನ ಕೌಶಲ್ಯ ತರಬೇತಿ ಮುಂತಾದವುಗಳನ್ನು ಕ್ರೀಡಾ ಕ್ಷೇಮಾಭಿವೃದ್ಧಿಯ ಭಾಗವಾಗಿ ಹಮ್ಮಿಕೊಳ್ಳುವುದು. ಇದಕ್ಕಾಗಿ, ಈ ವಿಷಯದಲ್ಲಿ ಪರಿಣಿತಿ ಹೊಂದಿರುವ ಹಾಗೂ ಅನುಭವ ಹೊಂದಿರುವ ಏಜೆನ್ಸಿಗಳನ್ನು ಗುರುತಿಸಿ ಅವರೊಂದಿಗೆ ಸೇರಿ ಅಂತರಾಷ್ಟ್ರೀಯ ಮಾನ್ಯತೆ ಪಡೆದಿರುವ ಪ್ರಮಾಣ ಪತ್ರಗಳನ್ನು ನೀಡುವುದು.

## 6. ಸಂಪನ್ಮೂಲ ಮತ್ತು ಪರಿವೀಕ್ಷಣೆ:

ಎ. ಅನುದಾನ ಕ್ರೋಢೀಕರಣ

ಬಿ. ಪರಿವೀಕ್ಷಣೆ

ಎ. ಅನುದಾನ ಕ್ರೋಢೀಕರಣ:

6.1 ಕರ್ನಾಟಕ ಕ್ರೀಡಾ ನೀತಿಯಲ್ಲಿ ಉದ್ದೇಶಿಸಲಾಗಿರುವ ಗುರಿಗಳನ್ನು ಈಡೇರಿಸುವ ಸಲುವಾಗಿ, ಸರ್ಕಾರವು ವಾರ್ಷಿಕವಾಗಿ ಡಿ.ವೈ.ಇ.ಎಸ್. ಗೆ ನೀಡುವ ಆಯವ್ಯಯವನ್ನು ಬಳಸಲಾಗುವುದು.

6.2. ಈ ಆಯವ್ಯಯವನ್ನು ಕ್ರೀಡಾ ನೀತಿಯ ಅಡಿಯಲ್ಲಿ ಉದ್ದೇಶಿರುವ ಗುರಿಗಳನ್ನು ತಲುಪಲು ಉದ್ದೇಶಿಸಲಾಗಿದೆ.

- ಡಿ.ವೈ.ಇ.ಎಸ್ ಮತ್ತು ಎಸ್.ಎ.ಕೆ ಬಲಪಡಿಸಲು, ಕ್ರೀಡಾ ನಿಯಮಗಳು, ಸಂಸ್ಥೆಗಳನ್ನು ಬಲಪಡಿಸಲು :
- ಕ್ರೀಡಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮತ್ತು ಉನ್ನತೀಕರಿಸಲು, ಸಂಸ್ಥೆಗಳಿಗೆ ನೆರವು ನೀಡಲು ಮತ್ತು ಬಾಡಿಗೆಗೆ ಪಡೆಯಲು, ತರಬೇತಿ ಮತ್ತು ತರಬೇತಿ ಸೌಲಭ್ಯಗಳು, ಸಮುದಾಯ ಕೇಂದ್ರಗಳು ಮುಂತಾದವುಗಳಿಗೆ:
- ಬಹುಮಾನಗಳು ಮತ್ತು ಇನ್ಸೆಂಟಿವ್ಸ್, ತರಬೇತಿ ಅಭಿವೃದ್ಧಿ ಕಾರ್ಯಕ್ರಮಗಳು, ಭಾಗವಹಿಸುವಿಕೆ, ಕ್ರೀಡಾ ನೆರವು, ಅತ್ಲೀಟ್ ಕಾರ್ಡಿಂಗ್ ಮತ್ತು ನಿರ್ವಹಣಾ ವ್ಯವಸ್ಥೆ ಮತ್ತು ಪ್ರದರ್ಶನ ನಿರ್ವಹಣಾ ಘಟಕ:
- ವೈದ್ಯಕೀಯ ಮತ್ತು ತಂತ್ರಜ್ಞಾನ ಕೇಂದ್ರ, ಕ್ರೀಡಾ ಸಂಪನ್ಮೂಲ ಮತ್ತು ಜ್ಞಾನ: ಮತ್ತು
- ಮೂಲ ಬಂಡವಾಳ, ವಿಶೇಷ ವಲಯಗಳ ಸ್ಥಾಪನೆ, ಪಿ.ಪಿ.ಪಿ ಜೊತೆಗಿನ ಪಾಲುದಾರಿಕೆ ಮುಂತಾದವು.

6.3. ವಾರ್ಷಿಕ ಆಯವ್ಯಯವನ್ನು ಎಸ್.ಎ.ಕೆ. ಸಿದ್ಧಪಡಿಸುವುದು ಮತ್ತು ಡಿ.ವೈ.ಇ.ಎಸ್ ಅನುಮೋದಿಸುವುದು. ಆಯವ್ಯಯಕ್ಕೆ ಸಂಬಂಧಿಸಿದ ಖರ್ಚು ವೆಚ್ಚಗಳನ್ನು ಡಿ.ವೈ.ಇ.ಎಸ್ ಮತ್ತು ಎಸ್.ಎ.ಕೆ. ರವರು ನಿಗಾವಹಿಸುವುದು ಮತ್ತು ಹಲವಾರು ಸಂಸ್ಥೆಗಳಗಾಗಿ ಮಾಡಿದ ಖರ್ಚುಗಳನ್ನು ಮತ್ತು ಒದಗಿಸಿದ ಸೌಲಭ್ಯಗಳ ವರದಿಗಳನ್ನು ಶಿಫಾರಸ್ಸಿನೊಂದಿಗೆ ಪ್ರತಿ ಮೂರು ತಿಂಗಳಗೊಮ್ಮೆ ಸಲ್ಲಿಸುವುದು ಮತ್ತು ಡಿ.ವೈ.ಇ.ಎಸ್ ಇದನ್ನು ಪರಿಶೀಲಿಸುತ್ತದೆ. ಡಿ.ವೈ.ಇ.ಎಸ್. ಆರ್ಥಿಕ ಮತ್ತು ಭೌತಿಕ ಹಂತಗಳನ್ನು ನೋಡಿಕೊಳ್ಳುವುದು.

6.4. ಕ್ರೀಡಾ ಚಟುವಟಿಕೆಗಳ ಪ್ರಚಾರಕ್ಕಾಗಿ ಮತ್ತು ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಎಸ್.ಎ.ಕೆ.ಯು ಒಂದು ಪ್ರಮುಖ ಅಂಗವಾಗಿ ಕಾರ್ಯ ನಿರ್ವಹಿಸುತ್ತದೆ.

6.5. ಔದ್ಯೋಗಿಕ ಕ್ಷೇತ್ರ, ಕಂಪನಿಗಳಿಂದ ನಿಧಿಯನ್ನು ಆಕರ್ಷಿಸುವ ಸಲುವಾಗಿ ಹಲವಾರು ಕ್ರೀಡಾಪಟುಗಳನ್ನು ಅಳವಡಿಸಿಕೊಳ್ಳಲಾಗುವುದು. ಸದರಿ ನಿಧಿಗಳನ್ನು ಅಭಿವೃದ್ಧಿ ಚಟುವಟಿಕೆಗಳಿಗೆ ಉಪಯೋಗಿಸಿ ಕೊಳ್ಳಲಾಗುವುದು.

ಬಿ. **ಪರಿವೀಕ್ಷಣೆ:**

6.6. ಕರ್ನಾಟಕ ಕ್ರೀಡಾ ನೀತಿಯು ಎಲ್ಲಾ ಕಾರ್ಯಕ್ರಮಗಳ ಜಾರಿಗೆ ತರುವುದರ ಬಗ್ಗೆ ಪರಿವೀಕ್ಷಣೆ ನಡೆಸುವುದು. ಕಾರ್ಯಕ್ರಮಗಳ ಅಳವಡಿಕೆ ಮತ್ತು ಉತ್ತಮಪಡಿಸುವ ಬಗ್ಗೆ ಸಂಬಂಧಿತ ಎಲ್ಲಾ ವ್ಯಕ್ತಿಗಳೊಡನೆ ಸಂಪರ್ಕ ಹೊಂದಿ ಸಮಾಲೋಚನೆಯನ್ನು ನಡೆಸುವುದು.

6.7 ಕರ್ನಾಟಕ ಕ್ರೀಡಾ ನೀತಿಯು ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನವನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಪರಾಮರ್ಶಿಸುವುದು ಮತ್ತು ನಿರಂತರ ಪ್ರಗತಿಗಾಗಿ ಸಮಾಲೋಚನಾ ಪ್ರಕ್ರಿಯೆಯನ್ನು ನಡೆಸುವುದು.

6.8. ಎಸ್.ಎ.ಕೆ.ಯು ಪರಿವೀಕ್ಷಣೆ ನಡೆಸಿ ಡಿ.ವೈ.ಇ.ಎಸ್. ಗೆ ವರದಿಯನ್ನು ಸಲ್ಲಿಸುವುದು. ಪರಿಶೀಲನೆ ನಡೆಸುವ ಸಮಯದಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು.

- ಕ್ರೀಡಾ ನೀತಿಯಲ್ಲಿ ತಿಳಿಸಿರುವ ಅಂಶಗಳ ಬಗ್ಗೆ ಕ್ರಮ ಮತ್ತು ಮುಂದೆ ಅಗತ್ಯವಾದ ಕ್ರಮಗಳು.
- ಎಲ್ಲಾ ಏಜೆನ್ಸಿಗಳನ್ನು ಗುರುತಿಸುವುದು ಮತ್ತು ಅವರಿಗೆ ವಹಿಸಬೇಕಾದ ಜವಾಬ್ದಾರಿಗಳನ್ನು ಗುರುತಿಸುವುದು.
- ಎಲ್ಲಾ ಏಜೆನ್ಸಿಗಳೊಂದಿಗೆ ಸಮಾಲೋಚಿಸಿ ಅವರಿಗೆ ನೆರವು ನೀಡಿ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಅಗತ್ಯವಾದ ಕರಡು ತಯಾರಿಸುವುದು.

- ಎಲ್ಲಾ ಏಜೆನ್ಸಿಗಳಿಗೆ ಅವರುಗಳ ಕಾರ್ಯವನ್ನು ನಿರ್ವಹಿಸುವಲ್ಲಿ ಅಗತ್ಯವಾದ ಎಲ್ಲಾ ಸಹಕಾರವನ್ನು ನೀಡುವುದು.

6.9. ಪ್ರತಿಯೊಂದು ಏಜೆನ್ಸಿಗೂ ವಾರ್ಷಿಕ ಮತ್ತು ಮೂರು ವರ್ಷಗಳ ಗುರಿಗಳನ್ನು ನೀಡುವುದು. ಕಾರ್ಯಕ್ರಮಗಳು ನಿಗಧಿತ ಸಮಯದಲ್ಲಿ ನಡೆಯುತ್ತಿವೆಯೇ ಎಂಬ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸುವುದು.

## ವಿಶೇಷ ಚೇತನರಿಗಾಗಿ ಕ್ರೀಡೆ

ಸರ್ಕಾರವು ವಿಶೇಷ ಚೇತನರಿಗಾಗಿ ಹಲವಾರು ವಿಶೇಷ ಪ್ರಯತ್ನಗಳನ್ನು ಮಾಡುತ್ತಿದ್ದು, ಇದರ ಬಗ್ಗೆ ಜಾಗೃತಿ ಮೂಡಿಸಿ, ತಡೆಗಳನ್ನು ನಿವಾರಿಸಿ, ಭಾಗವಹಿಸುವಿಕೆಯನ್ನು ವಿಸ್ತರಿಸಿ, ವಿಶೇಷ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಿ ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ ತರಬೇತಿಯನ್ನು ನೀಡುವುದು. ಈ ನಿಟ್ಟಿನಲ್ಲಿ ರಾಜ್ಯ ಸಂಸ್ಥೆ ಮತ್ತು ರಾಷ್ಟ್ರೀಯ ಫೆಡರೇಷನ್ ಸಹಯೋಗದೊಂದಿಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಿಶೇಷ ಚೇತನರಿಗಾಗಿ ಲಭ್ಯವಿರುವ ಅವಕಾಶಗಳ ಬಗ್ಗೆ ನಾಗರೀಕರಲ್ಲಿ ಜಾಗೃತಿಯನ್ನು ಮೂಡಿಸುವುದು, ಜೊತೆಯಲ್ಲಿ ವರ್ಗೀಕರಣ ವಿವರಗಳನ್ನು ಸಹ ವಿವರವಾಗಿ ನೀಡುವುದು.

- ಇತ್ತೀಚೆಗೆ ನಡೆದ ಪ್ಯಾರಾಲಂಪಿಕ್ಸ್‌ನಲ್ಲಿ ವಿಶೇಷ ಚೇತನರು ತೋರಿದ ಪ್ರದರ್ಶನವನ್ನು ಪರಿಗಣಿಸುವುದು ಮತ್ತು ಅವರ ಶಕ್ತಾನುಸಾರ ಅವರಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಅವರ ಪ್ರತಿಭೆಯನ್ನು ಪರಿಚಯಿಸುವುದು ಮತ್ತು ಅವರಲ್ಲಿ ಭರವಸೆ ಮತ್ತು ಆತ್ಮವಿಶ್ವಾಸವನ್ನು ಮೂಡಿಸುವುದು.
- ವಿಕಲಚೇತನರಿಗೆ ಎಲ್ಲಾ ಹಂತಗಳಲ್ಲೂ ಕ್ರೀಡಾ ಸೌಲಭ್ಯಗಳು ಅವರಿಗೆ ಅನುಕೂಲವಾಗುವಂತೆ ಒದಗಿಸುವುದು. ಈ ವಿಚಾರದಲ್ಲಿ ಅಂತರಾಷ್ಟ್ರೀಯ ಗುಣಮಟ್ಟವನ್ನು ಗುರುತಿಸಿ ಅವುಗಳನ್ನು ಮೂಲ ಹಂತದಿಂದ ಒದಗಿಸುವುದು.
- ಪ್ರತಿಯೊಂದು ಯುವಜನರಿಗ ಕ್ರೀಡಾ ಪ್ರತಿಭೆಯನ್ನು ಗುರುತಿಸುವ ಸಲುವಾಗಿ ಪ್ರತಿಭಾನ್ವೇಷಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ತೋರುವ ನಿಟ್ಟಿನಲ್ಲಿ ಅಗತ್ಯವಾದ ತರಬೇತಿಗಳನ್ನು ಒದಗಿಸಲು ಕ್ರೀಡಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದು.
- ಅವರುಗಳ ತರಬೇತಿಗಾಗಿ ವಿಶ್ವದರ್ಜೆಯ ಕ್ರೀಡಾ ಸಲಕರಣೆಗಳನ್ನು ಒದಗಿಸುವುದು.

- ಪ್ಯಾರಾಲಂಪಿಕ್‌ನ ವಿವಿಧ ವರ್ಗೀಕರಣಗಳನ್ನು ಅಭ್ಯಸಿಸುವುದು ಮತ್ತು ಪ್ರತಿಯೊಂದು ಹಂತದಲ್ಲಿಯೂ ವಿಶೇಷ ಚೇತನರ ಸಾಮರ್ಥ್ಯವನ್ನು ಗುರುತಿಸುವುದು. ಇದನ್ನು ವಿಶ್ವ ಮಟ್ಟದ ವರ್ಗೀಕರಣ ಮಟ್ಟದಲ್ಲಿ ನಡೆಸಲಾಗುವುದು.
- ವಿಶೇಷ ಚೇತನರಿಗಾಗಿ ಲಭ್ಯವಿರುವ ಎಲ್ಲಾ ಕ್ರೀಡಾ ನೀತಿಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದು. ಮುಂದುವರೆದು, ವಿಶೇಷ ಚೇತನರಿಗಾಗಿ ವೀಲ್‌ಚೇರ್ ಟೆನ್ನಿಸ್, ಕರ್ಲಿಂಗ್ ಫೆನ್ಸಿಂಗ್, ಬಾಸ್ಕೆಟ್ ಬಾಲ್, ರಗ್ಬಿ, ಬೇಸ್‌ಬಾಲ್, ಕ್ರಿಕೆಟ್, ಗಾಲ್ಫ್ ಮುಂತಾದ ಕ್ರೀಡೆಗಳನ್ನು ಪರಿಚಯಿಸುವುದು.
- ಪ್ರತಿಭೆಯು ನಿರಂತರವಾಗಿರಲು ಕ್ರೀಡಾ ವಿಜ್ಞಾನ ನೆರವು, ಕ್ರೀಡಾ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು.
- ತಳಮಟ್ಟದಿಂದ ಪ್ರತಿಭೆಯನ್ನು ಗುರುತಿಸುವ ಸಲುವಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುವುದು. ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸ್ಪರ್ಧೆಗಳಿಗೆ ಸಹಕಾರ ನೀಡಲಾಗುವುದು.

- ಪ್ರತಿಯೊಂದು ವಿಭಾಗದಲ್ಲಿಯೂ ಅರ್ಹ ತರಬೇತಿದಾರರು ಮತ್ತು ಅವರ ಸಹ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಳ್ಳಲಾಗುವುದು.
- ವಿಶೇಷ ಚೇತನರ ಪ್ರತಿಭೆಯನ್ನು ನಗದು ಪುರಸ್ಕಾರ, ಬಹುಮಾನ, ಸರ್ಕಾರಿ ಸೇವೆಯಲ್ಲಿ ನೌಕರಿಯಲ್ಲಿ ಆದ್ಯತೆ ಮುಂದಾವುಗಳ ಮೂಲಕ ಉತ್ತೇಜಿಸಲಾಗುವುದು.
- ಕ್ರೀಡಾಭಿವೃದ್ಧಿ ಯೋಜನೆ ಮತ್ತು ಸಿಎಸ್‌ಆರ್ ಯೋಜನೆಗಳ ಮೂಲಕ ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವ ಪ್ರತಿಭೆಗಳನ್ನು ಗುರುತಿಸುವುದು.
- ವಿಶೇಷ ಚೇತನರ ಸಬಲೀಕರಣ ಇಲಾಖೆಯು ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸಿ ತನ್ನ ನಿರಂತರ ಸಹಕಾರವನ್ನು ಒದಗಿಸುವುದು.

ವಿಶೇಷ ಚೇತನರಲ್ಲಿ ಕ್ರೀಡೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಅಗತ್ಯವಾದ ಮೇಲ್ಕಂಡ ಎಲ್ಲಾ ಅಥವಾ ಯಾವುದಾದರೂ ಸಹಕಾರವನ್ನು ನೀಡಲು ಸರ್ಕಾರವು ಬದ್ಧವಾಗಿರುತ್ತದೆ.

ಸಾಹಸ ಕ್ರೀಡೆಗಳು:

ಇಲಾಖೆಯು ಕರ್ನಾಟಕ ರಾಜ್ಯದಲ್ಲಿ ಸಾಹಸ ಕ್ರೀಡೆಗಳನ್ನು 1989 ರಲ್ಲಿ ಸ್ಥಾಪಿತವಾದ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ (ಜೇತನಾ) ಮೂಲಕ ಪ್ರಚುರಪಡಿಸುತ್ತಿದೆ.

ಭೂ, ಜಲ ಮತ್ತು ವಾಯು ಕ್ರೀಡೆಗಳನ್ನು ಸಾಹಸ ಪ್ರವೃತ್ತಿಯುಳ್ಳ ಯುವ ಜನರಲ್ಲಿ ಪ್ರಚುರಪಡಿಸಲಾಗುತ್ತಿದ್ದು ಮತ್ತು ಪ್ರಕೃತಿಯ ಬಗ್ಗೆ ಜಾಗೃತಿ ಮೂಡಿಸಿ ಪ್ರಕೃತಿಯನ್ನು ತಿಳಿದುಕೊಳ್ಳಲು ಸಹಕರಿಸುತ್ತಿದೆ.

ರಾಜ್ಯವು ವಿಶಾಲವಾದ ಕಾಡು, ಕರಾವಳಿ, ಬೆಟ್ಟ ಗುಟ್ಟಗಳು, ನೀರಿನ ತಾಣಗಳನ್ನು ಹೊಂದಿದ್ದು ರಾಜ್ಯದಲ್ಲಿ ಸಾಹಸ ಕ್ರೀಡೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇದರಲ್ಲಿ ಹಲವಾರು ಇಲಾಖೆಗಳು ಮತ್ತು ಸಂಸ್ಥೆಗಳು ಕೈಜೋಡಿಸಿವೆ.

1. ರಾಜ್ಯಾದ್ಯಂತ ನಿರ್ದಿಷ್ಟವಾದ ಸಾಹಸ ತಾಣಗಳನ್ನು ಗುರುತಿಸುವುದು ಮತ್ತು ಯುವಜನರಲ್ಲಿ ಸಾಹಸ ಪ್ರವೃತ್ತಿಯನ್ನು ಬೆಳೆಸುವುದು ಮತ್ತು ಅವರಲ್ಲಿ ವಿಶ್ವಾಸವನ್ನು ಮುಡಿಸುವುದು.

2. ಜೇತನಾ ಸಂಸ್ಥೆಯು ಯು ವಿಶ್ವದರ್ಜೆಯ ಸಾಹಸ ಕ್ರೀಡೆಯ ಸುರಕ್ಷಾ ಮಾರ್ಗದರ್ಶನವನ್ನು ಜಾರಿಗೆ ತರುತ್ತಿದೆ.

3. ಭೂ, ಜಲ ಮತ್ತು ವಾಯು ಸಾಹಸ ಕ್ರೀಡೆಗಳಲ್ಲಿ ಅಗತ್ಯವಾದ ಕೌಶಲ್ಯಗಳನ್ನು ಜಾರಿಗೆ ತರುವುದು.

4. ವಿಶ್ವದರ್ಜೆಯ ಸುರಕ್ಷಾ ವಿಧಾನಗಳನ್ನು ತರಬೇತುದಾರರಿಗೆ ಮತ್ತು ತರಬೇತಿ ಪಡೆಯುವವರಿಗೆ ಪರಿಚಯಿಸುವುದು ಮತ್ತು ಸಾಹಸ ಕ್ರೀಡೆಗಳ ಮಾರ್ಗದರ್ಶನವನ್ನು ನೀಡುವುದು.

5. ರಾಜ್ಯದಲ್ಲಿ ಸಾಹಸ ಕ್ರೀಡೆಗಳ ಅಭಿವೃದ್ಧಿಗಾಗಿ ಎಲ್ಲಾ ಸಾಹಸಿ ಕಂಪನಿಗಳನ್ನು ಒಂದುಗೂಡಿಸುವುದು.

6. ಈ ವಿಭಾಗದಲ್ಲಿ ನುರಿತ ಹಾಗೂ ಅರ್ಹ ಅಭ್ಯರ್ಥಿಗಳ ಅವಶ್ಯಕತೆ ಇದ್ದು, ಆದ್ದರಿಂದ ಈ ಕೌಶಲ್ಯವನ್ನು ಪಡೆಯಲು ತರಬೇತಿಯನ್ನು ನೀಡಲಾಗುವುದು.

7. ತಾಲ್ಲೂಕು ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸುವುದು, ಇದರಿಂದ ಪ್ರವಾಸ ಕ್ರೀಡಾ ಅವಶ್ಯಕತೆಗಳಂದ ಅವರನ್ನು ಉಪಯೋಗಿಸಿಕೊಳ್ಳುವುದು.

8. ಬೆಟ್ಟ ಹತ್ತುವುದು, ತೇಲುವುದು, ಬೆಟ್ಟಗಳಲ್ಲಿ ಬೈಕ್ ಓಡಿಸುವುದು, ಸಮುದ್ರದಲ್ಲಿ ಈಜುವುದು, ರಿವರ್ ರ್‍ಯಾಫ್ಟಿಂಗ್ ಮತ್ತು ಕಯಾಕಿಂಗ್ ಮುಂತಾದ ಸ್ಪರ್ಧೆಗಳನ್ನು ಆಯೋಜಿಸುವುದು.

9. ಕರ್ನಾಟಕ ರಾಜ್ಯದಲ್ಲಿ ಅಂರತಾಷ್ಟ್ರೀಯ ಮಟ್ಟದ ಚಟುವಟಿಕೆಗಳನ್ನು ನಿರ್ವಹಿಸುವುದು.

10. ಒಲಂಪಿಕ್ಸ್ ಒಳಗೊಂಡಂತೆ ಅಥ್ಲೀಟ್‌ಗಳನ್ನು ಸಾಹಸ ಕ್ರೀಡೆಯಲ್ಲಿ ತರಬೇತಿ ನೀಡುವುದು ಮತ್ತು ನೆರವು ನೀಡುವುದು.

ಅನುಚ್ಛೇದ-1

ಅನ್ವೇಷಣಾ ಕಾರ್ಯಕ್ರಮ:

ಒಬ್ಬ ತರಬೇತುದಾರನು ಗುರಿಯನ್ನು ಸಾಧಿಸಲು ವಿವಿಧ ಹಂತಗಳಲ್ಲಿ ವಿವಿಧ ರೀತಿಯ ಕೊಡುಗೆಗಳನ್ನು ನೀಡತಕ್ಕದ್ದು. ಸಾಮಾನ್ಯ ಹಂತದಲ್ಲಿ ಒಬ್ಬ ತರಬೇತುದಾರನು ಸಾರ್ವಜನಿಕರ ಜೊತೆ ಕೆಲಸ ಮಾಡುವುದನ್ನು ಇಷ್ಟಪಡುವುದು, ಸಮಸ್ಯೆಗಳನ್ನು ಪರಿಹರಿಸುವ ಕೌಶಲ್ಯತೆ, ನಾಯಕತ್ವ ಗುಣ ಹೊಂದಿರತಕ್ಕದ್ದು ಮತ್ತು ಜ್ಞಾನವನ್ನು ತಿಳಸುವ ಸಂವಹನಾ ಶಕ್ತಿ ಹೊಂದಿರತಕ್ಕದ್ದು. ತರಬೇತಿ ಜ್ಞಾನವನ್ನು ಬೋಧಿಸುವಾಗ, ತರಬೇತಿಗೆ ಅರ್ಹರಾದ ವ್ಯಕ್ತಿಯನ್ನು ಆಯ್ಕೆ ಮಾಡುವುದು ಮುಖ್ಯವಾಗುತ್ತದೆ.

| ಹಂತ | ಅರ್ಹತೆ | ಗುರುತಿಸುವ ವಿಧಾನ |
|---|---|---|
| ಸಮುದಾಯ | * ಪ್ರಮುಖವಾಗಿ ಕ್ರೀಡೆಯ ಬಗ್ಗೆ ಆಸಕ್ತಿ ಮತ್ತು ಪ್ರೀತಿ ಮತ್ತು 1-2 ನಿರ್ದಿಷ್ಟ ಕ್ರೀಡೆಯಲ್ಲಿ ಕೌಶಲ್ಯ ಹೊಂದಿರಬೇಕು.<br>* ಯುವಜನರನ್ನು ಉತ್ತೇಜಿಸುವ ಹಾಗೂ ಜನರೊಂದಿಗೆ ಬೆರೆಯುವ ಶಕ್ತಿ.<br>* ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು<br>* ಸುರಕ್ಷಿತ ಭಾಗವಹಿಸುವಿಕೆ<br>* ವಯಸ್ಸು ಒಂದು ಮಾನದಂಡವಲ್ಲ | ಕಾರ್ಯಕ್ರಮಗಳನ್ನು ರೂಪಿಸುವ ಸಾಮರ್ಥ್ಯ<br>ಗುರಿಗಳು:<br>* ಶಾಲಾ ಶಿಕ್ಷಕರು<br>* ದೈಹಿಕ ಶಿಕ್ಷಕರು<br>* ಜಿಮ್ ತರಬೇತಿದಾರರು<br>* ಕಾರ್ಯಕ್ರಮ ಆಯೋಜಕರು<br>* ಮಾಜಿ ರಾಜ್ಯ ಮಟ್ಟದ ಅತ್ಲೀಟ್‌ಗಳು |

| | | |
|---|---|---|
| | * ದೀರ್ಘಾವಧಿಯವರೆಗೂ ಕೆಲಸ ಮಾಡುವ ಸಾಮರ್ಥ್ಯ | * ಕ್ಲಬ್ ಸಿಬ್ಬಂದಿಗಳು<br>* ಜ್ಯೂನಿಯರ್ ಅಕಾಡೆಮಿ ಸಿಬ್ಬಂದಿ |
| ಮಧ್ಯಮ | * ಒಂದು ನಿರ್ದಿಷ್ಟ ಕ್ರೀಡೆಯಲ್ಲಿ ಅತ್ಯುತ್ತಮ ಕೌಶಲ್ಯ<br>* ಶಿಸ್ತುಬದ್ಧವಾದ ಕಾರ್ಯಕ್ರಮ ಆಯೋಜನೆಯಲ್ಲಿ ಕೌಶಲ್ಯ<br>* ಮನಶ್ಶಾಸ್ತ್ರ ಮತ್ತು ತರಬೇತಿ ವಿಧಾನಗಳ ತಿಳುವಳಿಕೆ.<br>* ಉತ್ತಮ ಕೆಲಸದ ನೀತಿ<br>* ಕಲಿಯುವಿಕೆ ಮತ್ತು ಜ್ಞಾನದ ಬೆಳವಣಿಕೆಯ ಶಕ್ತಿ. | ನಿಗಧಿತ ಗುರಿಯನ್ನು ಹೊಂದಿದ್ದು, ಪ್ರತಿಭಾನ್ವೇಷಣಾ ವಿಧಾನವನ್ನು ಬಲ್ಲವರಾಗಿದ್ದು, ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು.<br>ಗುರಿಗಳು:<br>* ಮಾಜಿ ರಾಷ್ಟ್ರೀಯ ಮಟ್ಟದ ಆಟಗಾರರು, ಹಾಲಿ ಪಿಎಸ್‌ಯು ನಲ್ಲಿ ಉದ್ಯೋಗಿಗಳು<br>* ಎಸ್‌ಎಐ ತರಬೇತುದಾರರು<br>* ಮಧ್ಯಂತರ ಮಟ್ಟದ ಅಕಾಡೆಮಿ ಸಿಬ್ಬಂದಿ<br>* ಹಾಲಿ ರಾಜ್ಯ ಮಟ್ಟದ ತರಬೇತಿದಾರರು |
| ಉತ್ತಮ | * ನಿರ್ದಿಷ್ಟವಾದ ಒಂದು ಕ್ರೀಡೆಯಲ್ಲಿ ಉನ್ನತ ಹಂತದಲ್ಲಿ ಆಡಿರುವವರು.<br>* ಉನ್ನತ ಮಟ್ಟದ ತರಬೇತಿ ಮತ್ತು ಕ್ರೀಡೆಯ ಬಗ್ಗೆ ತಿಳಿದುಕೊಂಡಿರುವರು<br>* ಆಟಗಾರರನ್ನು ಉತ್ತೇಜಿಸುವವರು<br>* ಫಲಿತಾಂಶ ತರಬಲ್ಲವರು | ಉನ್ನತ ಮಟ್ಟದ ಪ್ರತಿಭಾನ್ವೇಷಣೆ ಮತ್ತು ನೇಮಕಾತಿ ಅರ್ಹತೆ ಉಳ್ಳವರು.<br>ನಿವೃತ್ತಿ ಹೊಂದುತ್ತಿರುವ ಉತ್ತಮ ಅಥ್ಲೀಟ್‌ಗಳು<br><br>ಕ್ರೀಡಾ ಕೋಟಾದ ಅಡಿಯಲ್ಲಿ ನೇಮಕಾತಿ ಹೊಂದಿರುವ ಆಟಗಾರರು ಕೋಚಿಂಗ್ ಗಾಗಿ ಬಿಡುಗಡೆಗೊಳಿಸುವುದು |

ಶೈಕ್ಷಣಿಕ ಕಾರ್ಯಕ್ರಮಗಳು:

ಈ ಕಾರ್ಯಕ್ರಮವನ್ನು ಒಮ್ಮೆ ಗುರುತಿಸಿ, ನೇಮಕಾತಿ ಮಾಡಿರುವ ತರಬೇತಿದಾರರಿಗೆ, ಅವರುಗಳ ತರಬೇತಿ ನೀಡುವ ಕೌಶಲ್ಯದ ಬಗ್ಗೆ ಅಗತ್ಯವಾದ ಜ್ಞಾನವನ್ನು ನೀಡುವುದು. ಮೊದಲನೆಯದಾಗಿ ತರಬೇತಿದಾರರಿಗೆ ಮೂಲ ಜ್ಞಾನವನ್ನು ಒದಗಿಸಿ ನಂತರ ಅವರಿಗೆ ಕಾಲಾನುಕ್ರಮವಾಗಿ ಉನ್ನತೀಕರಣಗೊಳಿಸುವುದು, ಮತ್ತು ಅಗತ್ಯವಿದ್ದಲ್ಲಿ, ಒಂದು ನಿಗಧಿತ ಹಂತದಲ್ಲಿ ತರಬೇತಿಗಾಗಿ ಅಣಿಗೊಳಿಸುವುದು.

| ಹಂತ | ಅಗತ್ಯವಾದ ಜ್ಞಾನ | ಶಿಕ್ಷಣ ವಿಧಾನ |
|---|---|---|
| ಸಮುದಾಯ | * ಜಿಗಿತ, ಓಟ, ಹಿಡಿಯುವುದು ಇವುಗಳ ಬಗ್ಗೆ ಸಾಮಾನ್ಯ ಕೌಶಲ್ಯ<br>* ಸೂಕ್ತ ತಂತ್ರಜ್ಞಾನ<br>* ಬೋಧನಾ ವಿಧಾನ<br>* ಪ್ರಥಮ ಚಿಕಿತ್ಸೆ, ಸುರಕ್ಷತೆ<br>* ನ್ಯೂಟ್ರೀಷಿಯನ್, ಮಾನಸಿಕ ಕೌಶಲ್ಯತೆ, | * ವಿಷಯಗಳ ಬಗ್ಗೆ ಆಳವಾದ ತರಬೇತಿ ಕಾರ್ಯಕ್ರಮಗಳು (ಸಮುದಾಯ ಕಾರ್ಯಾಗಾರ) ಮತ್ತು ಕ್ರೀಡೆಗಳ ಬಗ್ಗೆ ಆಳವಾದ ತಂತ್ರಜ್ಞಾನ.<br>* ಅಲ್ಪಾವಧಿ (ಉದಾ. 3 |

| | | |
|---|---|---|
| | ಗಾಯಗಳಿಂದ ರಕ್ಷಣೆ, ಕಾರ್ಯಕ್ರಮಗಳ ವಿನ್ಯಾಸ ಮುಂತಾದವು. | ತಿಂಗಳು) |
| ಮಧ್ಯಮ | * ಆಧುನಿಕ ತಂತ್ರಜ್ಞಾನ<br>* ಆಧುನಿಕ ಬೋಧನಾ ವಿಧಾನ ಮತ್ತು ಅತ್ಲೀಟ್‌ಗಳಿಗೆ ಕಾರ್ಯಕ್ರಮ ವಿನ್ಯಾಸ<br>* ಮಾನಶ್ಶಾಸ್ತ್ರ, ಮಾನಸಿಕ ತರಬೇತಿ.<br>* ತಂತ್ರಜ್ಞಾನ ಮತ್ತು ಸಾಮಗ್ರಿಗಳ ಬಗ್ಗೆ ಜಾಗೃತಿ.<br>* ಯೋಜನಾ ನಿರ್ವಹಣಾ ಕೌಶಲ್ಯ | * ಉನ್ನತೀಕರಣಕ್ಕಾಗಿ ನಿಯಮಿತ ಕಾರ್ಯಾಗಾರಗಳ ಬಗ್ಗೆ ಜ್ಞಾನ ಮತ್ತು ಇತ್ತೀಚಿನ ತಂತ್ರಜ್ಞಾನ, ಕ್ರೀಡಾ ವಿಜ್ಞಾನ, ತಾಂತ್ರಿಕತೆ ಮತ್ತು ತರಬೇತಿ ವಿಧಾನದ ಬಗ್ಗೆ ತಿಳುವಳಿಕೆ.<br>* ಅತ್ಯುತ್ತಮ ತರಬೇತುದಾರರೊಂದಿಗೆ ನಿರಂತರ ಸಂಪರ್ಕ |
| ಉತ್ತಮ | * ತಾಂತ್ರಿಕತೆಯ ಬಗ್ಗೆ ಗುರುತಿಸುವಲ್ಲಿ ತಪ್ಪುಗಳನ್ನು ಕಂಡುಹಿಡಿಯುವುದು ಮತ್ತು ತಿದ್ದುಪಡಿ.<br>* ಗುರಿ ನಿಗಧಿಪಡಿಸುವುದು ಮತ್ತು ದೀರ್ಘಾಧಿ ಅಥ್ಲೀಟ್ ಅಭಿವೃದ್ಧಿ<br>* ಹೊಸ ಯೋಜನೆಗಳು ಮತ್ತು ವೈಜ್ಞಾನಿಕ ತಳಹದಿ<br>* ಕ್ರೀಡಾ ನ್ಯೂಟ್ರೀಷಿಯನ್ ಬಗ್ಗೆ ಮಾಹಿತಿ ಮತ್ತು ತೂಕ ಇಳಸುವಿಕೆ ಟಿಪ್ಸ್ ಮತ್ತು ಇತರೆ ಟಿಪ್ಸ್‌ಗಳು<br>* ಆಧುನಿಕ ಗಾಯ ನಿರ್ವಹಣೆ ಮಾಹಿತಿ ಮತ್ತು ಮನಶ್ಶಾಸ್ತ್ರದ ಬಗ್ಗೆ ಮಾಹಿತಿ. | * ಜ್ಞಾನವುಳ್ಳ ಉತ್ತಮ ಅಥ್ಲೀಟ್‌ಗಳು, ಮತ್ತು ನಿರ್ದಿಷ್ಟವಾದ ವಿಸ್ತರಿಸಿದ ಜ್ಞಾನ.<br>* ಉತ್ತಮ ಪ್ರದರ್ಶನದ ಕಾರ್ಯಾಗಾರ (ಒಂದು ಬಾರಿ 2-3 ದಿನಗಳು) ಹಿರಿಯ ತರಬೇತಿದಾರರು<br>* ಆಧುನಿಕ ತರಬೇತಿ ಡಿಪ್ಲೊಮಾ ಹೊಂದಿರುವವರು. |

ಪರಿವೀಕ್ಷಣಾ ಕಾರ್ಯಕ್ರಮ:

ತರಬೇರಿ ಪರಿವೀಕ್ಷಣೆಯ ಪ್ರಮುಖ ಯೋಜನೆ ಏನೆಂದರೆ, ತರಬೇತಿಯು ಒಂದು ಶಾಶ್ವತ ಕೆಲಸವಾಗಿರುವುದಿಲ್ಲ. ಅಲ್ಲದೆ, ಕ್ರೀಡೆಯು ಹೊಸ ಹೊಸ ಅಭಿವೃದ್ಧಿಯ ಜೊತೆಗೆ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಒಂದು ಕ್ಷೇತ್ರವಾಗಿದೆ.

| ಹಂತ | ಅಗತ್ಯವಾದ ಜ್ಞಾನ | ಶಿಕ್ಷಣ ವಿಧಾನ |
|---|---|---|
| ಸಮುದಾಯ | ತರಬೇತಿಯ ವರ್ಗೀಕರಣ ಮತ್ತು ನಿರಂತರ ಶಿಕ್ಷಣ ಮತ್ತು 6 ತಿಂಗಳುಗಳ ಗುರಿಯ ಬಗ್ಗೆ 8 ವರ್ಷಗಳ ಒಪ್ಪಂದ | * ಸಮುದಾಯ ತರಬೇತಿ ಅಂಶಾಧಾರಿತ ವ್ಯವಸ್ಥೆಯನ್ನು ಉಳಸಿಕೊಳ್ಳುವುದು. ಅಂಶಗಳನ್ನು ಸೆಮಿನಾರ್ ಮತ್ತು ತರಗತಿಗಳಿಗೆ ಹಾಜರಾಗುವ ಮೂಲಕ ಅಥ್ಲೀಟ್‌ಗಳನ್ನು ಮಧ್ಯಮ ಹಂತಕ್ಕೆ ತರಬೇತುಗೊಳಸುವುದು.<br>* ಪರಿವೀಕ್ಷಣೆಯನ್ನು ಮಧ್ಯಮ ಹಂತದ ತರಬೇತಿದಾರರು ಮತ್ತು ಮಾಸ್ಟರ್ ತರಬೇತಿದಾರರಿಂದ ನಡೆಸುವುದು. |
| ಮಧ್ಯಮ | ತರಬೇತಿಯ ವರ್ಗೀಕರಣ ಮತ್ತು ನಿರಂತರ ಶಿಕ್ಷಣ ಮತ್ತು 2 ವರ್ಷಗಳ ಗುರಿಯ ಬಗ್ಗೆ 8 ವರ್ಷಗಳ ಒಪ್ಪಂದ | * ಸಮುದಾಯ ತರಬೇತಿ ಅಂಶಾಧಾರಿತ ವ್ಯವಸ್ಥೆಯನ್ನು ಉಳಸಿಕೊಳ್ಳುವುದು. ಅಂಶಗಳನ್ನು ಸೆಮಿನಾರ್ ಮತ್ತು ತರಗತಿಗಳಿಗೆ |

| | | |
|---|---|---|
| | | ಹಾಜರಾಗುವ ಮೂಲಕ ಅಥ್ಲೀಟ್‌ಗಳನ್ನು ಮಧ್ಯಮ ಹಂತಕ್ಕೆ ತರಬೇತುಗೊಳಿಸುವುದು.<br>* ಪರಿವೀಕ್ಷಣೆಯನ್ನು ಮಧ್ಯಮ ಹಂತದ ತರಬೇತಿದಾರರು ಮತ್ತು ಮಾಸ್ಟರ್ ತರಬೇತಿದಾರರಿಂದ ನಡೆಸುವುದು. |
| ಉತ್ತಮ | ತರಬೇತಿಯ ವರ್ಗೀಕರಣ ಮತ್ತು ನಿರಂತರ ಶಿಕ್ಷಣ ಮತ್ತು 4 ವರ್ಷಗಳ ಒಪ್ಪಂದ | * ಸಮುದಾಯ ತರಬೇತಿ ಅಂಶಾಧಾರಿತ ವ್ಯವಸ್ಥೆಯನ್ನು ಉಳಸಿಕೊಳ್ಳುವುದು. ಅಂಶಗಳನ್ನು ಸೆಮಿನಾರ್ ಮತ್ತು ತರಗತಿಗಳಿಗೆ ಹಾಜರಾಗುವ ಮೂಲಕ ಅಥ್ಲೀಟ್‌ಗಳನ್ನು ಮಧ್ಯಮ ಹಂತಕ್ಕೆ ತರಬೇತುಗೊಳಿಸುವುದು.<br>* ಪರಿವೀಕ್ಷಣೆಯನ್ನು ಮಧ್ಯಮ ಹಂತದ ತರಬೇತಿದಾರರು ಮತ್ತು ಮಾಸ್ಟರ್ ತರಬೇತಿದಾರರಿಂದ ನಡೆಸುವುದು. |

**ಉತ್ತೇಜನ ಕಾರ್ಯಕ್ರಮಗಳು:**

ತರಬೇತಿದಾರರುಗಳನ್ನು ಅವರುಗಳನ್ನು ಗುರುತಿಸುವ ಮೂಲಕ ಮತ್ತು ಅವರನ್ನು ಸೂಕ್ತವಾಗಿ ನಗದು ಪುರಸ್ಕಾರಗಳ ಮೂಲಕ, ಮನ್ನತೆ ನೀಡುವ ಮೂಲಕ ಮತ್ತು ಭವಿಷ್ಯ ರೂಪಿಸಿಕೊಳ್ಳಲು ಅವಕಾಶಗಳನ್ನು ಒದಗಿಸುವ ಮೂಲಕ ಅವರನ್ನು ಉತ್ತೇಜಿಸಬಹುದು.

| ಹಂತ | ಭವಿಷ್ಯ ಆಧುನೀಕರಣ | ಪುರಸ್ಕಾರ |
|---|---|---|
| ಸಮುದಾಯ | ಒಬ್ಬ ಸಮುದಾಯ ತರಬೇತುದಾರನು 4 ವರ್ಷಗಳ ಕಾಲ ಸಮುದಾಯ ತರಬೇತಿದಾರರಾಗಿ ಕೆಲಸ ನಿರ್ವಹಿಸಿ ಉತ್ತಮ ಹಂತದ ತರಬೇತುದಾರನಾಗಬಹುದು ಮತ್ತು 8 ವರ್ಷ ಮಧ್ಯಮ ತರಬೇತುದಾರನಾಗಿ ಮತ್ತು ನಂತರ 4 ವರ್ಷಗಳ ಕಾಲ ಉತ್ತಮ ತರಬೇತುದಾರನಾಗಿ | * ಕೇಂದ್ರ ಸರ್ಕಾರಿ ನೌಕರರಿಗೆ ನಿಡುವಂತೆ ವೇತನ ಮತ್ತು 8 ವರ್ಷಗಲ ಗುತ್ತಿಗೆ, 4 ವರ್ಷಗಳ ವಿಸ್ತರಣೆಯೊಂದಿಗೆ.<br>* ಒಬ್ಬ ಅತ್ಲೀಟ್ ಕಾರ್ಡೆಡ್ ಅತ್ಲೀಟ್ ಆಗಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದಲ್ಲಿ ಪ್ರಶಸ್ತಿ ಮೊತ್ತದ 25% ರಷ್ಟು.<br>* ಸಮುದಾಯ ವರ್ಗದ ತರಬೇತುದಾರರಿಗೆ ಕರ್ನಾಟಕ ದ್ರೋಣಾಚಾರ್ಯ ಪ್ರಶಸ್ತಿ<br>* ಸಮುದಾಯ ತರಬೇತುದಾರರ ವಿಭಾಗದಲ್ಲಿ ತೋರಿದ ಉತ್ತಮ ಪ್ರದರ್ಶನಕ್ಕಾಗಿ ವಾರ್ಷಿಕ ಪ್ರಶಸ್ತಿ. |
| ಮಧ್ಯಮ | ಒಬ್ಬ ಮಧ್ಯಮ ತರಬೇತುದಾರನು 8 ವರ್ಷಗಳ ಕಾಲ ಮಧ್ಯಮ | * 8 ವರ್ಷಗಳ ಕಾಲ ಮಧ್ಯಾವಧಿ ಗುತ್ತಿಗೆ. |

| | | |
|---|---|---|
| | ತರಬೇತಿದಾರರಾಗಿ ಕೆಲಸ ನಿರ್ವಹಿಸಿ ಉತ್ತಮ ಹಂತದ ತರಬೇತುದಾರನಾಗಬಹುದು ಮತ್ತು 4 ವರ್ಷಗಳ ಕಾಲ ಉತ್ತಮ ತರಬೇತುದಾರನಾಗಿ ಮತ್ತು ಆತನು ಉತ್ತಮ ತರಬೇತುದಾರರ ಜವಾಬ್ದಾರಿಗಳನ್ನು ವಹಿಸಿಕೊಳ್ಳಬಹುದು. | * * ಒಬ್ಬ ಅತ್ಲೀಟ್ ಕಾರ್ಡೆಡ್ ಅತ್ಲೀಟ್ ಆಗಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದಲ್ಲಿ ಪ್ರಶಸ್ತಿ ಮೊತ್ತದ 25% ರಷ್ಟು.<br>* ಸಮುದಾಯ ವರ್ಗದ ತರಬೇತುದಾರರಿಗೆ ಕರ್ನಾಟಕ ದ್ರೋಣಾಚಾರ್ಯ ಪ್ರಶಸ್ತಿ<br>* ಸಮುದಾಯ ತರಬೇತುದಾರರ ವಿಭಾಗದಲ್ಲಿ ತೋರಿದ ಉತ್ತಮ ಪ್ರದರ್ಶನಕ್ಕಾಗಿ ವಾರ್ಷಿಕ ಪ್ರಶಸ್ತಿ. |
| ಉನ್ನತ | ಅಗತ್ಯವಾದ ತರಬೇತಿಯ ಮೂಲಕ ಮಧ್ಯಮ ಮತ್ತು ಸಮುದಾಯ ತರಬೇತಿದಾರರು ಮುಂದುವರೆಯಬಹುದು<br><br>ಇತರೆ ತರಬೇತಿದಾರರಿಗೆ ತರಬೇತಿ ನೀಡುವ ಮಾಸ್ಟರ್ ಕೋಚ್ ಸ್ಥಾನವನ್ನು ಪಡೆಯಬಹುದು. | * ಅಂತರಾಷ್ಟ್ರೀಯ ಕೋಚ್‌ಗಳಿಗೆ ನೀಡುವ ವೇತನ.<br>* ನಿಗಧಿತ ಗುರಿ, ಒಲಂಪಿಕ್ ಏಷಿಯನ್, ಕಾಮನ್‌ವೆಲ್ತ್ ಗೇಮ್ಸ್‌ಗಳಿಗೆ 4 ವರ್ಷಗಳ ಗುತ್ತಿಗೆ.<br>* ಕಾರ್ಡೆಡ್ ಅತ್ಲೀಟ್‌ಗಳ ಯಶಸ್ಸು ಮತ್ತು ಪ್ರಮುಖ ಕ್ರೀಡಾ ಚಟುವಟಿಕೆಗಳಲ್ಲಿ ಸಾಧನೆಯ ಆಧಾರದ ಮೇಲೆ ಬೋನಸ್.<br>* ದ್ರೋಣಾಚಾರ್ಯ ಪ್ರಶಸ್ತಿ.<br>* ರಾಜ್ಯದಲ್ಲಿನ ತರಬೇತಿದಾರರಿಗೆ ವಾರ್ಷಿಕ ಪ್ರಶಸ್ತಿ. |

ಕ್ರೀಡಾ ನೀತಿಯನ್ನು ಜಾರಿಗೆ ತರುವಲ್ಲಿ ಇತರೆ ಇಲಾಖೆಗಳ ಪಾತ್ರ.

1. ಶಿಕ್ಷಣ ಇಲಾಖೆ:

(ಪ್ರಾಥಮಿಕ ಮತ್ತು ಪ್ರೌಢ, ಉನ್ನತ, ತಾಂತ್ರಿಕ ಮತ್ತು ವೈದ್ಯಕೀಯ)

1. ಕರ್ನಾಟಕ ರಾಜ್ಯದಲ್ಲಿ 6–14 ವಯೋಮಾನದ 100% ಮಕ್ಕಳು ದಿನದಲ್ಲಿ ಕನಿಷ್ಟ ½ ಘಂಟೆ ಕಾಲ ಸಂಘಟಿತ ದೈಹಿಕ ಚಟುವಟಿಕೆ/ಕ್ರೀಡೆಗಳಲ್ಲಿ ಭಾಗವಹಿಸುವುದು.
2. ರಾಜ್ಯದ್ಯಂತ ಪ್ರತಿಯೊಂದು ಸರ್ಕಾರಿ ಶಾಲೆಗಳಲ್ಲಿ ದೈಹಿಕ ಶಿಕ್ಷಣವನ್ನು ಒಂದು ಕಡ್ಡಾಯ ವಿಷಯವಾಗಿ ಬೋಧಿಸುವುದು.
3. ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಲಭ್ಯವಿರುವ ಎಲ್ಲಾ ಆಟದ ಮೈದಾನ/ಸ್ಟೇಡಿಯಂಗಳನ್ನು ಕ್ರೀಡಾಪುಟಗಳ ತರಬೇತಿಗಾಗಿ ಲಭ್ಯವಾಗುವಂತೆ ನೋಡಿಕೊಳ್ಳುವುದು.
4. ಗ್ರೇಸ್ ಮಾರ್ಕ್ಸ್ / ಹೆಚ್ಚುವರಿ ಅಂಕಗಳು: ಪ್ರತಿಯೊಂದು ವಿಷಯಗಳಲ್ಲೂ ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದವರೆಗೂ (ಸಾಧನೆಗೆ ಅನುಗುಣವಾಗಿ ಪ್ರತಿಯೊಂದು ವಿಷಯದಲ್ಲೂ ಗರಿಷ್ಟ 25 ಅಂಕಗಳು: ಅಂತರಾಷ್ಟ್ರೀಯ–25 ಗರಿಷ್ಟ, ಮತ್ತು ರಾಷ್ಟ್ರೀಯ–15 ಗರಿಷ್ಟ ಮತ್ತು ರಾಜ್ಯ–10).
5. ಹಾಜರಾತಿ ರಿಯಾಯಿತಿ: ತರಬೇತಿ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ ಅವಧಿಗೆ.
6. ಒಂದು ವೇಳೆ ಪರೀಕ್ಷೆ ಮತ್ತು ಪ್ರಾಂತೀಯ, ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗಳ ದಿನಾಂಕಗಳು ಒಂದೇ ದಿನ ಬಂದಲ್ಲಿ, ಕ್ರೀಡಾಪಟುಗಳಿಗೆ ಪ್ರತ್ಯೇಕವಾದ ಪರೀಕ್ಷೆಯನ್ನು ನಡೆಸುವುದು.
7. ಕ್ರೀಡಾಪಟುಗಳಿಗೆ ಸಿ.ಇ.ಟಿ ಮುಖಾಂತರ ಆಯ್ಕೆ ಮಾಡುವ ಪ್ರವೇಶಾತಿಗಳಲ್ಲಿ ಮೀಸಲಾತಿಯನ್ನು 2% ಕ್ಕೆ ಹೆಚ್ಚಿಸುವುದು ಮತ್ತು ಕ್ರೀಡಾ ಚಟುಟಿಕೆಗಳು ಮತ್ತು ಸೌಲಭ್ಯಗಳು ಲಭ್ಯವಿರುವ ಕಾಲೇಜುಗಳಲ್ಲಿ ಪ್ರವೇಶಾತಿ.
8. ಹೊಸ ಶಾಲಾ/ಕಾಲೇಜುಗಳಿಗೆ ಆಟದ ಮೈದಾನವಿದ್ದಲ್ಲಿ ಮಾತ್ರ ಅನುಮತಿಯನ್ನು ನೀಡುವುದು.
9. ಡಿ.ವೈ.ಇ.ಎಸ್ ಅನ್ನು ಸಂಪರ್ಕಿಸಿ ವಾರ್ಷಿಕ ಕ್ರೀಡಾ ಚಟುವಟಿಕೆಗಳ ವೇಳಾಪಟ್ಟಿಯನ್ನು ತಯಾರಿಸುವುದು.
10. ಯುಜಿ ಮತ್ತು ಪಿಜಿ ಹಂತಗಳಲ್ಲಿ ಕ್ರೀಡಾಪಟುಗಳಿಗಾಗಿ ಕ್ರೀಡಾ ಸಂಬಂಧಿತ ವಿಷಯಗಳನ್ನು ಪರಿಚಯಿಸುವುದು.

II. ಪ್ರವಾಸೋದ್ಯಮ:

1. ರಾಜ್ಯದಲ್ಲಿ ಕ್ರೀಡೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಮತ್ತು ಮುಖ್ಯವಾಗಿ ಸಾಹಸ ಕ್ರೀಡಾ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ನಿಧಿ ಸಂಗ್ರಹಣೆ.
2. ಕರಾವಳಿ ಭಾಗದ ಮೂಲಕ ಕಂದಾಯ ಸಂಗ್ರಹಣೆ ಮತ್ತು ಸ್ಥಳೀಯ ವ್ಯಕ್ತಿಗಳಿಗೆ ನೌಕರಿಗೆ ಆದ್ಯತೆ. ಪಿ.ಪಿ.ಪಿ. ಮಾದರಿಯನ್ನು ಇದನ್ನು ಸಾಧಿಸಲು ಪರಿಚಯಿಸುವುದು.
3. ವಿಶ್ವಾದ್ಯಂತ ಭಾಗವಹಿಸುವವರನ್ನು ಆಕರ್ಷಿಸಲು "ಟೂರ್ ಡಿ ಫ್ರಾನ್ಸ್" ನಂತಹ ಕಾರ್ಯಕ್ರಮಗಳನ್ನು ಆಯೋಜಿಸಲು ಆರ್ಥಿಕ ನೆರವನ್ನು ಒದಗಿಸುವುದು.

III. ಆರೋಗ್ಯ:

1. ಪ್ರಮುಖ ನಗರಗಳಲ್ಲಿ ಕ್ರೀಡಾ ಔಷಧ ಮತ್ತು ಕ್ರೀಡಾ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವುದು.
2. ಕ್ರೀಡಾಪಟುಗಳಿಗಾಗಿ ವಿಶೇಷ ಕ್ರೀಡಾ ವಿಜ್ಞಾನ ವಿಷಯಗಳನ್ನು ಪರಿಚಯಿಸುವುದು.
3. ಎಲ್ಲಾ ಹಂತಗಳಲ್ಲೂ ಕೋರಿಕೆಯ ಮೇಲೆ ವೈದ್ಯಕೀಯ ಸಹಕಾರವನ್ನು ಒದಗಿಸುವುದು (ಅರ್ಹ ವೈದ್ಯರು ಮತ್ತು ಅರೆ-ವೈದ್ಯಕೀಯ ಸಿಬ್ಬಂದಿ ಮತ್ತು ಆಂಬುಲೆನ್ಸ್ ಸೇವೆ).

IV. ವಾಣಿಜ್ಯ ಮತ್ತು ಕೈಗಾರಿಕೆ:

1. ರಾಜ್ಯದ ಇನ್ಸೆಂಟಿವ್ ಮತ್ತು ರಿಯಾಯಿತಿ ಪ್ಯಾಕೇಜ್‌ಗಳಿಗಾಗಿ ಕಾರ್ಖಾನೆ/ಸೇವಾ ಉದ್ಯಮಗಳಿಗೆ ಕೈಗಾರಿಕಾ ನೀತಿಯನ್ನು ಪರಿಚಯಿಸುವುದು.
2. ಕ್ರೀಡಾ ಸಾಮಗ್ರಿಗಳ ಕಾರ್ಖಾನೆಯು ಜಿ.ಡಿ.ಪಿಯನ್ನು ಹೆಚ್ಚಿಸುವುದಲ್ಲದೇ ಸಾಮಾನ್ಯ ಜನರಿಗೂ ಕ್ರೀಡಾ ಸಾಮಗ್ರಿಗಳು ದೊರೆಯಲು ಸಹಕರಿಸುತ್ತದೆ.

V. ಡಿ.ಪಿ.ಎ.ಆರ್.

ಸರ್ಕಾರಿ ಸೇವೆಗಳಲ್ಲಿ ನೇರ ನೇಮಕಾತಿ:

1. ಕ್ಲಾಸ್ 1 ಪತ್ರಾಂಕಿತ ಅಧಿಕಾರಿಗಳು: ಒಲಂಪಿಕ್ಸ್‌ನಲ್ಲಿ ಪದಕ ಗೆದ್ದ ಕ್ರೀಡಾಪಟುಗಳು.
2. ಕ್ಲಾಸ್ 2 ಪತ್ರಾಂಕಿತ ಅಧಿಕಾರಿಗಳು: ಏಷಿಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ಗೆದ್ದವರು.

ಸರ್ಕಾರಿ ನೇಮಕಾತಿ ಪ್ರಕ್ರಿಯೆಯಲ್ಲಿ ಸಿ ಮತ್ತು ಡಿ ವರ್ಗದಲ್ಲಿ 3% ರಷ್ಟು ಮೀಸಲಾತಿಯನ್ನು ನಿಗಧಿಪಡಿಸುವುದು. ಸೇವೆಯಲ್ಲಿರುವ ಕ್ರೀಡಾಪಟುಗಳಿಗೆ ಅವರ ಸಾಧನೆಯ ಅನುಸಾರ 3 ತಿಂಗಳ ಒಳಗಾಗಿ ಇಂಕ್ರಿಮೆಂಟ್‌ಗಳನ್ನು ನೀಡುವುದು.

## VI. ಪ್ರವಾಸೋದ್ಯಮ:

1. ಡಿ.ವೈ.ಇ.ಎಸ್.ನ ತಾಂತ್ರಿಕ ನೆರವಿನೊಂದಿಗೆ ಎಲ್ಲಾ ಗ್ರಾಮಗಳಲ್ಲಿ ಕ್ರೀಡಾಭಿವೃದ್ಧಿ.
2. ಪ್ರತಿಯೊಂದು ಗ್ರಾಮ ಪಂಚಾಯ್ತಿಗೂ ಕ್ರೀಡಾ ಚಟುವಟಿಕೆಗಳಗಾಗಿ ಅಭಿವೃದ್ಧಿ ನಿಧಿಯಲ್ಲಿ ಶೇ.2% ರಷ್ಟು ನೀಡುವುದು.

## VII. ಗ್ರಾಮೀಣಾಭಿವೃದ್ಧಿ:

1. ಪ್ರತಿಯೊಂದು ಪ್ರದೇಶದಲ್ಲಿಯೂ ಆಟದ ಮೈದಾನಕ್ಕೆ ಜಾಗವನ್ನು ಮೀಸಲಿರಿಸುವುದು ಮತ್ತು ಅವುಗಳನ್ನು ನಗರ ಮತ್ತು ಪಟ್ಟಣಗಳಲ್ಲಿ ಅಭಿವೃದ್ಧಿಪಡಿಸುವುದು.
2. ಕ್ರೀಡಾ ಸೌಲಭ್ಯಗಳ ನಿರ್ವಹಣೆಗಾಗಿ ಅಭಿವೃದ್ಧಿ ನಿಧಿಯಲ್ಲಿ 1% ಅನ್ನು ಮೀಸಲಿರಿಸುವುದು ಮತ್ತು ಸದರಿ ಉದ್ದೇಶಕ್ಕೆ ಬಳಸಿಕೊಳ್ಳುವುದು.
3. ರಾಜ್ಯ ಮತ್ತು ಉನ್ನತ ಸ್ಪರ್ಧೆಗಳಲ್ಲಿನ ವೆಚ್ಚಗಳಗಾಗಿ ಕ್ರೀಡಾ ಚಟುವಟಿಕೆಗಳಗಾಗಿ ಸಹಕಾರ ನೀಡುವುದು.
4. ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರಾಧಿಕಾರದಿಂದ ಅಂತರಾಷ್ಟ್ರೀಯ ಕ್ರೀಡಾಪಟುಗಳಿಗೆ ನಿವೇಶನಗಳನ್ನು ಮೀಸಲಿರಿಸುವುದು.
5. ಗ್ರಾಮೀಣಾಭಿವೃದ್ಧಿ ಇಲಾಖೆಯ ಅಡಿಯಲ್ಲಿ ನೀಡಲಾಗುವ ಎಲ್ಲಾ ಕ್ರೀಡಾ ಸೌಲಭ್ಯಗಳನ್ನು ಡಿ.ಐ.ಇ.ಎಸ್.ಗೆ ಓ&ಎಂ ಉದ್ದೇಶಕ್ಕಾಗಿ ವರ್ಗಾವಣೆ ಮಾಡುವುದು

## VIII. ವಸತಿ:

ಗೃಹ ಮಂಡಳಿಯ ವತಿಯಿಂದ ಕ್ರೀಡಾಪಟುಗಳಿಗೆ ಮನೆಗಳನ್ನು ಮೀಸಲಿರಿಸುವುದು.

## IX. ಮಹಿಳಾ ಮತ್ತು ಮಕ್ಕಳ ಇಲಾಖೆ:

ಮಹಿಳಾ ಕ್ರೀಡಾಪುಟಗಳಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕನಿಷ್ಟ 2% ರಷ್ಟು ನಿಧಿಯನ್ನು ಮೀಸಲಿರಿಸುವುದು.

## X. ಇ-ಗವರ್ನೆನ್ಸ್:

ಕ್ರೀಡಾ ನಿರ್ವಹಣೆಯಲ್ಲಿ ಐ.ಟಿ. ಇಂಟಿಗ್ರೇಷನ್ ಸಹಕಾರವನ್ನು ವಿಸ್ತರಿಸುವ ಸಲುವಾಗಿ, ಕ್ರೀಡಾಪಟುಗಳ ಸಾಧನೆಯನ್ನು ಕಾಲಕಾಲಕ್ಕೆ ಕಂಡುಕೊಳ್ಳುವುದು.

XI. ವಿಶೇಷ ಚೇತನ ಸಬಲೀಕರಣ ಇಲಾಖೆ:

ವಿಶೇಷ ಚೇತನ ಕ್ರೀಡಾಪಟುಗಳಿಗೆ ನೆರವು ನೀಡಲು ಕನಿಷ್ಟ 2% ರಷ್ಟು ನಿಧಿಯನ್ನು ಮೀಸಲಿರಿಸತಕ್ಕದ್ದು.

XII. ಅಲ್ಪ ಸಂಖ್ಯಾತರ ಇಲಾಖೆ:

ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ಕ್ರೀಡಾಪಟುಗಳಿಗೆ ನೆರವು ನೀಡಲು ಕನಿಷ್ಟ 2% ರಷ್ಟು ನಿಧಿಯನ್ನು ಮೀಸಲಿರಿಸತಕ್ಕದ್ದು.

XIII. ಸಮಾಜ ಕಲ್ಯಾಣ ಇಲಾಖೆ:

ಎಸ್‌ಸಿ/ಎಸ್‌ಟಿ ವರ್ಗಕ್ಕೆ ಸೇರಿದ ಕ್ರೀಡಾಪಟುಗಳಿಗೆ ನೆರವು ನೀಡಲು ಕನಿಷ್ಟ 2% ರಷ್ಟು ನಿಧಿಯನ್ನು ಮೀಸಲಿರಿಸತಕ್ಕದ್ದು.

XIV. ಹಿಂದುಳಿದ ವರ್ಗಗಳ ಇಲಾಖೆ:

ಹಿಂದುಳಿದ ವರ್ಗಕ್ಕೆ ಸೇರಿದ ಕ್ರೀಡಾಪಟುಗಳಿಗೆ ನೆರವು ನೀಡಲು ಕನಿಷ್ಟ 2% ರಷ್ಟು ನಿಧಿಯನ್ನು ಮೀಸಲಿರಿಸತಕ್ಕದ್ದು.

XI. ಅರಣ್ಯ ಇಲಾಖೆ:

ಟ್ರೆಕ್ಕಿಂಗ್, ಕ್ಲೈಂಬಿಂಗ್ ಮುಂತಾದವುಗಳನ್ನು ಆಯೋಜಿಸಲು ಅನುಮೋದನೆಗಳನ್ನು ನೀಡುವುದು ಮತ್ತು ಯುವಕರಿಗಾಗಿ ಪ್ರಕೃತಿ ಜಾಗೃತಿ ಶಿಬಿರಗಳನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಇತರೆ ಕಾರ್ಯಕ್ರಮಗಳನ್ನು ಆಯೋಜಿಸುವುದು.